₹ 5/-

PAGES 24

# ನೇಸರು

## ತಿಂಗಳೋಲೆ

MARCH 2018 | Nesaru Tingalole | Vol. XXXVI - 3



ಕನ್ನಡಾಂಬೆಗೆ ಕೈ ಮುಗಿಯುತ್ತೇವೆ

ಮೈಸೂರು ಅಸೋಸಿಯೇಷನ್ ಮುಂಬೈ

THE MYSORE ASSOCIATION, BOMBAY

393, Bhau Daji Road, Matunga, Mumbai - 400 019. | Tel.: 2402 4647, 2403 7065

Email : mysoreassociation.mumbai@gmail.com

# ಬಂಗಾರ ಹಬ್ಬದ ದತ್ತಿ ಉಪನ್ಯಾಸ

## ಕವಿ ಕಾಣದ್ದನ್ನು ಗಮಕಿ ಕಾಣುತ್ತಾನೆ: ಡಾ। ಎಂ. ಎ. ಜಯರಾಮ್ ರಾವ್



ಸೃಜನಾತ್ಮಕಲೆಗಳಲ್ಲಿ ಗಮಕ ಕಲೆಯೂ ಇದೆ. ಆದಿ ಗಮಕಿಗಳಾಗಿ ಲವ–ಕುಶರು ಗುರುತಿಸಲ್ಪಡುತ್ತಿದ್ದು. ಈ ಗಮಕ ಕಲೆ ಪ್ರಾಚೀನ ಕಾಲದಿಂದ ಕಿವಿಯಿಂದ ಕಿವಿಗೆ ಸಾಗುತ್ತ ಬಂದಿದೆ. ಅದೂ ಈಗಲೂ ತನ್ನ ಮಹತ್ವವನ್ನು ಉಳಿಸಿಕೊಂಡಿದೆ. ಮೊಟ್ಟಮೊದಲ ಗಮಕ ಸಮ್ಮೇಳನ ಮುಂಬಯಿಯಲ್ಲಿ ಜರುಗಿದ್ದು ಮುಂಬಯಿ ಕನ್ನಡಿಗರಿಗೆ ತುಂಬ ಹೆಮ್ಮೆಯ ಸಂಗತಿ. ಗಮಕ ವಾಚನ ಮಾಡುವಾಗ ರಾಗಗಳ ಬಳಕೆಯನ್ನು ಬಹು ಎಚ್ಚರಿಕೆಯಿಂದ ಉಪಯೋಗಿಸಬೇಕು. ಹಾವಭಾವಗಳು ನಿಮಿತವಾಗಿರಬೇಕು. ಹೀಗೆ ಕುಮಾರವ್ಯಾಸನ, ಪಂಪರನ್ನು ವಾಲ್ಮೀಕಿಯ ಕಾವ್ಯಗಳನ್ನು ಎತ್ತಿಕೊಂಡು ಹಾವಭಾವ, ರಾಗಗಳಿಂದ ಸುಶ್ರಾವ್ಯವಾಗಿ ಗಮಕ ವಾಚಿಸಿದಾಗ ಪ್ರೇಕ್ಷಕರನ್ನು ಮಂತ್ರ ಮುಗ್ಧಗೊಳಿಸಬಹುದು ಎಂದು ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಸದಸ್ಯ, ಪ್ರಸಿದ್ಧ ಗಮಕಿ ಡಾ। ಎಂ. ಎ. ಜಯರಾಮ ರಾವ್ ತಿಳಿಸಿದರು.

ಫೆ. 24 ರಂದು ಸಂಜೆ ಮಾಟುಂಗಾ ಪೂರ್ವ ಮೈಸೂರು ಅಸೋಸಿಯೇಷನ್ ಕಿರು ಸಭಾಗೃಹದಲ್ಲಿ ಮೈಸೂರು ಅಸೋಸಿಯೇಷನ್ ಮುಂಬಯಿ ಮತ್ತು ಮುಂಬಯಿ ವಿವಿ ಕನ್ನಡ ವಿಭಾಗದ ಸಂಯುಕ್ತ ಆಶ್ರಯದಲ್ಲಿ ಆಯೋಜಿದಲಾಗಿದ್ದ ಮೈಸೂರು ಅಸೋಸಿಯೇಷನ್ ಬಂಗಾರ ಹಬ್ಬದ ದತ್ತಿ ಉಪನ್ಯಾಸ – 2018 ರಲ್ಲಿ 'ಸೃಜನಶೀಲತೆಯನ್ನು ಬೆಳೆಸುವ ಪರಿ" ವಿಚಾರವಾಗಿ ಅವರು ಉಪನ್ಯಾಸ ನೀಡಿದರು.

ಮುಂಬಯಿ ವಿ.ವಿ.ಯ ಕನ್ನಡ ವಿಭಾಗದ ಮುಖ್ಯಸ್ಥ ಡಾ। ಜಿ. ಎನ್. ಉಪಾಧ್ಯ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಮುಂಬಯಿಯಲ್ಲಿ ಕನ್ನಡ ಸೇವೆಯಲ್ಲಿ ತೊಡಗಿರುವ ಸಂಘಟನೆಗಳಲ್ಲಿ ಮೈಸೂರು ಅಸೋಸಿಯೇಷನ್ ಸಂಸ್ಥೆಯೂ ಒಂದು. ಈ ಸಂಸ್ಥೆ ಅನೇಕ ಕನ್ನಡದ ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಕನ್ನಡ ಪ್ರೇಮ ಬಿಂಬಿಸುತ್ತಿದೆ. ಗಮಕಿ ವಿದ್ವಾಂಸ ಜಯರಾಮರ ಮಹಾಭಾರತದ ಕರ್ಣಕೃತಿ ಬಿಡುಗಡೆ ಹಾಗೂ ಅವರಿಂದ ಸೃಜನಶೀಲತೆ ಬೆಳೆಸುವ ಪರಿ ಕುರಿತು ಉಪನ್ಯಾಸ ಕೇಳುವುದೇ ನಮ್ಮ – ನಿಮ್ಮೆಲ್ಲರ ಭಾಗ್ಯ. ಕನ್ನಡದ ಪ್ರೌಢ ಕಾರ್ಯಕ್ರಮಗಳನ್ನು ಜನ ಸಾಮಾನ್ಯರಿಗೆ ತಲುಪುವಂತೆ ಶ್ರಮಿಸಿದ ಗಮಕಿ ವಿದ್ವಾಂಸರಲ್ಲಿ ಜಯರಾಮರೂ ಒಬ್ಬರು ಎಂದರು.

ಮೈಸೂರು ಅಸೋಸಿಯೇಷನ್ನಿನ ಅಧ್ಯಕ್ಷೆ ಕಮಲಾ ಕಾಂತರಾಜ್ ಸ್ವಾಗತಿಸಿ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಸದಸ್ಯ ಡಾ. ಎಂ. ಎ. ಜಯರಾಮ ರಾವ್ ರಚಿತ 'ಮಹಾಭಾರತದ ಕರ್ಣ' ಕೃತಿ ಬಿಡುಗಡೆಗೊಳಿಸಿ ಉಪನ್ಯಾಸಕರನ್ನು ಗೌರವಿಸಿ ಉಪನ್ಯಾಸಕರನ್ನು ಗೌರವಿಸಿ ಅಭಿನಂದಿಸಿದರು. ಮುಂಬಯಿ ಕನ್ನಡ ವಿಭಾಗದ ವಿ. ಮಧುಸೂದನ್ ರಾವ್ ಕಾರ್ಯಕ್ರಮ ನಿರ್ವಹಿಸಿದ್ದರು. ಅಸೋಸಿಯೇಷನ್ನಿನ ಕಾರ್ಯದರ್ಶಿ ಡಾ. ಗಣಪತಿ ಶಂಕರಲಿಂಗ್ ವಂದಿಸಿದರು.

****

## ಬಾಲ ಪ್ರತಿಭೆಯ ಪ್ರಸ್ತುತಿ – ಅದಿತಿ ಬಿ. ಪ್ರಹ್ಲಾದ್



ಕುಮಾರಿ ಅದಿತಿ ಪ್ರಹ್ಲಾದ್ ಅವರು ಸಂಗೀತ ಕಛೇರಿ ಮೈಸೂರು ಅಸೋಸಿಯೇಷನ್‌ನಲ್ಲಿ ದಿನಾಂಕ 03.02.2018 ರಂದು ಸಂಜೆ 6.30 ಕ್ಕೆ ಜರುಗಿತು.

ಕುಮಾರಿ ಅದಿತಿಯ ಪ್ರತಿಭೆಯ ಅಲ್ಪಸ್ವಲ್ಪ ಪರಿಚಯ ಈ ಹಿಂದೆ ಇನ್ನೂ 10 ವರುಷದ ಮಗುವಾಗಿದ್ದಾಗಲೇ ಆಕೆ ಇಲ್ಲಿ ಬಂದು ಹಾಡಿದಾಗ ಕಂಡಿತ್ತು. ಇಂದು 16 ರ ಬಾಲೆಯಲ್ಲಿ ಅದು ಸ್ಫುಟವಾಗಿ ಎದ್ದು ಕಾಣುವಂತೆ ಸಂಗೀತ ಕಚೇರಿ ನಡೆಯಿತು. ನಾಟ ಕುರಂಜಿ ರಾಗದಲ್ಲಿ ವರ್ಣದಿಂದ ಆರಂಭಿಸಿ ವಿಘ್ನರಾಜ ಶ್ರೀ. ವಿನಾಯಕ (ಶುದ್ಧ ಧನ್ಯಾಸಿರಾಗ, ಆದಿತಾಳ) ಹಾಡಿ, ಸರಸ್ವತಿರಾಗ ರೂಪಕ ತಾಳದಲ್ಲಿ 'ಸರಸ್ವತಿ ನಮೋಸ್ತುತೆ' ಹಾಡಿದಳು. ರಾಗಾಲಾಪಸಿ, ಸ್ವರ ಪ್ರಸ್ತಾರಗಳು ಮಂತ್ರ ಮುಗ್ಧಗೊಳಿಸಿದವು. 'ಸಾಮಜ ವರ ಗಮನ' (ಹಿಂದೋಳ ರಾಗ ಆದಿತಾಳ), 'ಸಂಗೀತ ಜ್ಞಾನಮು (ಪೂರ್ವಿ ಕಲ್ಯಾಣಿ, ರೂಪಕ ತಾಳ), ನಿನ್ನೆ ನೆರನಮ್ಮಿನೆನು (ಪಂತುವರಾಳೀ, ರೂಪಕತಾಳ) ಎಲ್ಲರೂ ಬಹಳ ಚೆನ್ನಾಗಿ ಮೂಡಿ ಬಂದವು. ಸ್ವಾತಿ ತಿರುನಾಳರ 'ಭಜತ ಮುರಲಿ' ಎಂಬ ಭಜನೆಯನ್ನು ಹಾಡಿ, ಗೋಪಾಲದಾಸರ 'ಏನ ಬೇಡಲಿ' ಎಂಬ ಕೃತಿಯನ್ನು ಹಾಡಿಅರು. "ಭಾಗ್ಯದ ಲಕ್ಷ್ಮೀ ಬಾರಮ್ಮ" (ಮಧ್ಯಮಾವತಿ ರಾಗ, ಆದಿತಾಳ) ದೊಂದಿಗೆ ಕಚೇರಿಯನ್ನು ಮುಕ್ತಾಯಗೊಳಿಸಿದರು.

ಕುಮಾರಿ ಅದಿತಿಗೆ ಮೃದಂಗದಲ್ಲಿ ಶ್ರೀ. ಅನಿರುದ್ಧ್ ಮತ್ತು ಪಿಟೀಲಿನಲ್ಲಿ ಶ್ರೀ. ಕೃಷ್ಣ ನಟರಾಜನ್ ಬಹಳ ಉತ್ತಮವಾಗಿ ಸಹಕಾರ ನೀಡಿದರು. ಕುಮಾರಿ ಅದಿತಿಗೆ ಈಗಾಗಲೇ ಅನೇಕ ಪುರಸ್ಕಾರಗಳು ಸಂದಿವೆ. ಅವುಗಳಲ್ಲಿ ಮುಖ್ಯವಾಗಿ "ಬಾಲಪ್ರಭೃತಿ"ಪುರಸ್ಕಾರ" ಕರ್ನಾಟಕ ಸರಕಾರದ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ವಿಭಾಗದಿಂದ 2010 ರಲ್ಲಿ ಹಾಗೂ "ಆರ್ಯಭಟ" ಅಂತರ್ ರಾಷ್ಟ್ರೀಯ ಪುರಸ್ಕಾರ 2012 ದೊರಕಿವೆ. ಈ ಪ್ರತಿಭೆ ಹೀಗೆ ಉತ್ತರೋತ್ತರವಾಗಿ ಬೆಳೆದು ಹೆಮ್ಮರವಾಗಿ ಕರ್ನಾಟಕಕ್ಕೆ ಹೆಚ್ಚಿನ ಗೌರವ ತರುವಂತಾಗಲಿ

ಸಂಪಾದಕೀಯ

# ನೇಸರು
## ತಿಂಗಳೋಲೆ

ಸಂಪುಟ 28 | ಮಾರ್ಚ್ 2018 | ಸಂಚಿಕೆ 3

# ಆದರ್ಶ ವೈದ್ಯೆ – ಡಾ. ರುಕ್ಮಾಬಾಯಿ ಭಿಕಾಜಿ

ಡಾ. ರುಕ್ಮಾಬಾಯಿ ಭಿಕಾಜಿ ಅವರು 19ನೇ ಶತಮಾನದಲ್ಲಿ ಔಷಧ ಹಾಗೂ ಮಹಿಳಾ ಹಕ್ಕುಗಳಿಗಾಗಿ ಹೋರಾಡಿದವರು. ಆ ಕಾಲದಲ್ಲೇ ವೈದ್ಯಕೀಯ ವೃತ್ತಿಯಲ್ಲಿ ತೊಡಗಿಸಿಕೊಂಡು ಬಡವರ ಪರ ನಿಂತಿದ್ದರು ರುಕ್ಮಾಬಾಯಿ ಅವರು. 1889ರಲ್ಲಿ ಅವರು ಮುಂಬಯಿಯ ಕಾಮಾ ಆಸ್ಪತ್ರೆಯ ಬಿಟಿಷ ನಿರ್ದೇಶಕ ಎಡಿತ್ ಫಿಪ್ಸನ್ ಅವರ ಮಾರ್ಗದರ್ಶನದಲ್ಲಿ 'ಲಂಡನ್ ಸ್ಕೂಲ್ ಆಫ್ ಮೆಡಿಸಿನ್ ಫಾರ್ ವುಮೆನ್' ಎಂಬ ವಿಷಯದಲ್ಲಿ ಅಧ್ಯಯನ ನಡೆಸಿ, ವೈದ್ಯಕ್ಷಿಯ ಶಿಕ್ಷಣ ಪಡೆದರು. 1894ರಲ್ಲಿ ಆಸ್ಪತ್ರೆಯಲ್ಲಿ ಕೆಲಸ ಮಾಡಲು ಭಾರತಕ್ಕೆ ಮರಳಿ ಬಂದರು. ಅವರು ಭಾರತದ ಮೊದಲ ಅಭ್ಯಾಸ ನಿರತ ಮಹಿಳಾ ವೈದ್ಯೆಯಾದರು.

ರುಕ್ಮಾಬಾಯಿಯವರು ನವೆಂಬರ್ 22, 1864ರಂದು ಮುಂಬಯಿಯಲ್ಲಿ ಜನಾರ್ಧನ್ ಹಾಗೂ ಜಯಂತಿಬಾಯಿ ಅವರ ಏಕೈಕ ಸುಪುರ್ತಿಯಾಗಿ ಜನಿಸಿದರು. ರುಕ್ಮಾ ಅವರಿಗೆ ಎಂಟು ವರ್ಷದವರಿರುವಾಗ ತಮ್ಮ ತಂದೆಯನ್ನು ಕಳೆದುಕೊಂಡರು. ಕುರುಡು ಸಾಮಾಜಿಕ ಪದ್ಧತಿಗಳು ಆ ಕಾಲದಲ್ಲಿ ಅಸ್ತಿತ್ವದಲ್ಲಿರುವುದರಿಂದ, ಹನ್ನೊಂದನೇ ವಯಸ್ಸಿನಲ್ಲಿ ರುಕ್ಮಾಬಾಯಿಯವರ ವಿವಾಹವನ್ನು ದಾದಾಜಿ ಭಿಕಾಜಿ ಎಂಬುವರೊಂದಿಗೆ ಮಾಡಿಕೊಡಲಾಯಿತು. ತನ್ನಿಚ್ಚೆಗೆ ವಿರುದ್ಧವಾಗಿ ಹಿರಿಯರು ಕಟ್ಟಿದ ಗಂಡನೊಡನೆ ಬಾಳಲು ಇಚ್ಚಿಸದೆ, ಸಿಡಿದೆದ್ದ ಧೀರವನಿತೆ ಈ ರುಕ್ಮಾಬಾಯಿ. ಅಂದಿನ ಕಾಲದಲ್ಲಿಯೇ ಪುರುಷ ಪ್ರಧಾನ ಸಮಾಜದ ವಿರುದ್ದ ಸಿಡಿದೆದ್ದು, ತನ್ನಿಷ್ಟದ ಪ್ರಕಾರ ಬದುಕುತ್ತೆನೆ ಎಂದು ಸಾಧಿಸಿದ ಮಹಿಳೆಯರಲ್ಲಿ ರುಕ್ಮಾಬಾಯಿ ಕೂಡ ಓರ್ವರು. ರುಕ್ಮಾಬಾಯಿ ಅವರ ತಾಯಿ ಡಾ. ಸುಖರಾಮ್ ಅರ್ಜುನ್ ಎಂಬುವರೊಂದಿಗೆ ಮರುಮದುವೆ ಮಾಡಿಕೊಂಡರೂ ರುಕ್ಮಾಬಾಯಿ ಮಾತ್ರ ತಾಯಿಯೊಂದಿಗೆ ನಿಂತು ತಮ್ಮ ವಿದ್ಯಾಭ್ಯಾಸವನು ಮುಂದುವರಿಸಿದರು. ಲಂಡನ್‌ನಲ್ಲಿ ವೈದ್ಯಕೀಯ ಶಿಕ್ಷಣವನ್ನು ಮುಗಿಸಿ, ಭಾರತಕ್ಕೆ ಮರಳಿ ಬಂದು, 35 ವರ್ಷಗಳ ಕಾಲ ರಾಜ್‌ಕೋಟ್ ಹಾಗೂ ಮುಂಬಯಿಯಲ್ಲಿ ವೈದ್ಯ ವೃತ್ತಿ ಆರಂಭಿಸಿದರು. ವೈದ್ಯರಾಗಿ ಬಡಜನರ ಸೇವೆ ಮಾಡಬೇಕೆಂಬ ಕನಸನ್ನು ಹೊತ್ತಿದ್ದರು. ಅದಕ್ಕೆ ನೀರೆರೆದು ಪೋಷಿಸಿದವರು ಅವರ ಮಲತಂದೆ ಸಖಾರಾಮ್ ಅರ್ಜುನ್ ಅವರು.

ಶಾಲೆಯಲ್ಲಿ ಕಲಿಯುತ್ತಿರುವಾಗಲೇ, ರುಕ್ಮಾಬಾಯಿಯವರ ಪತಿ ದಾದಾಜಿ ತಮ್ಮೊಂದಿಗೆ ತಮ್ಮ ಮನೆಗೆ ತೆರಳಲು ಒತ್ತಾಯಿಸಿದರು. ಇದಕ್ಕೆ ಒಲ್ಲದ ರುಕ್ಮಾಬಾಯಿಯವರ ವಿರುದ್ದ ದಾದಾಜಿ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಿದರು. ನ್ಯಾಯಾಲಯವು ರುಕ್ಮಾಬಾಯಿಯವರ ಎದುರಿಗೆ ಎರಡು ಆಯ್ಕೆಯನ್ನಿಟ್ಟಿತು. ಒಂದು, ದಾದಾಜಿಯವರೊಂದಿಗೆ ಹೋಗಿ ಬದುಕಿ ಇಲ್ಲಾ ಕಾರಾಗೃಹ ಅನುಭವಿಸಿ ಎಂದು. ಆದರೆ ರುಕ್ಮಾಬಾಯಿ ಆ ಚಿಕ್ಕವಯಸ್ಸಿನಲ್ಲಿ ನ್ಯಾಯಾಲಯಕ್ಕೆ ದಿಟ್ಟತನದಿಂದ ಉತ್ತರವನ್ನಿತ್ತರು. ದಾದಾಜಿಯವರೊಂದಿಗೆ ಬದುಕುವುದಕ್ಕಿಂತ, ನನಗೆ ಜೈಲುವಾಸ ಲೇಸೆಂದರು. ಆ ಸಮಯದಲ್ಲಿ ಎಲ್ಲ ಕಡೆ ಈ ಕೇಸಿನ ಕುರಿತಾಗಿ, ರುಕ್ಮಾಬಾಯಿ ಅವರ ವಿರುದ್ಧವಾಗಿ ಅತ್ಯಂತ ಪ್ರಭಾವಶಾಲಿ ಚರ್ಚೆಗಳು ಹುಟ್ಟಿಕೊಂಡವು. ಬೆಹ್ರಾಮ್ಜಿ ಮಲಬಾರಿ ಮತ್ತು ಪಂಡಿತ ರಾಮಬಾಯಿಯವರು ರುಕ್ಮಾಬಾಯಿಯ ಪರವಹಿಸಿದರು. ಮತ್ತು ರುಕ್ಮಾಬಾಯಿ ರಕ್ಷಾಣಾ ಸಮಿತಿಯನ್ನು ರಚಿಸಿದರು. ಈ ಪ್ರಕರಣವು ನಾಲ್ಕು ವರ್ಷಗಳ ಕಾಲ ನ್ಯಾಯಾಲಯದಲ್ಲಿ ಅಲೆದಾಡಿತು. ನಂತರ ದಾದಾಜಿಯವರಿಗೆ ಪರಿಹಾರವನ್ನು ನೀಡುವುದರ ಮೂಲಕ ಈ ಪ್ರಕರಣ ಅಂತ್ಯವನ್ನು ಕಂಡಿತು. ಈ ಪ್ರಕರಣವು 1891ರಲ್ಲಿ 'Age of Consent Act' ನ ಕರಡು ರಚನೆಯಲ್ಲಿ ಪ್ರಮುಖ ಪಾತ್ರವಹಿಸಿತು.

ವಿಚಾರಣೆ ನಡೆಯುತ್ತಿರುವ ಸಮಯದಲ್ಲಿ ರುಕ್ಮಾಬಾಯಿಯವರು ಟೈಮ್ಸ್ ಆಫ್ ಇಂಡಿಯಾಕ್ಕೆ ಗುಪ್ತನಾಮದಲ್ಲಿ 'Tha Hindu Lady' ಎಂಬ ಶೀರ್ಷಿಕೆಯನ್ನು ಹೊತ್ತ ಪತ್ರಗಳನ್ನು ಬರೆಯಲಾರಂಭಿಸಿದರು. ಅವರ ಮೊದಲ ಪತ್ರ ಪ್ರಕಟವಾಗಿದ್ದು ಜೂನ್ 26, 1884ರಲ್ಲಿ. ಈ ಪತ್ರದಲ್ಲಿ ಸಮಾಜದಲ್ಲಿ ಹಿಂದೂ ಮಹಿಳೆಯರ ಸ್ಥಿತಿಗತಿ, ಅವರ ಅಸ್ತಿತ್ವದ ಬಗ್ಗೆ ಪ್ರಶ್ನಿಸಲಾಗಿತ್ತು.

ಅವರು ಈ ಪತ್ರದಲ್ಲಿ "ಬಾಲ್ಯವಿವಾಹದಂತ ಈ ಕೆಟ್ಟ ಪದ್ಧತಿಯು ನನ್ನ ಜೀವನದ ಸಂತೋಷವನ್ನು ಹಾಳುಮಾಡಿದೆ. ಇದು ನನಗೆ ಹಾಗೂ ಇತರರ ಮೇಲೆ ನಾನು ಗೌರವಿಸುವಂತಹ ಅಧ್ಯಯನ ಮತ್ತು ಮಾನಸಿಕ ಪ್ರಬುದ್ಧತೆ ವಿಷಯಗಳ ನಡುವೆ ಬರುತ್ತದೆ. ನನ್ನ ತಪ್ಪಿಲ್ಲದಿದ್ದರೂ ಇದು ನನ್ನ ಏಕಾಂತಕ್ಕೆ ಧಕ್ಕೆಯನ್ನು ಉಂಟು ಮಾಡುತ್ತಿದೆ. ಅಜ್ಞಾನದ ಅಂಧಕಾರದಲ್ಲಿರುವ ಅದೆಷ್ಟೋ ಜನ ಸಹೋದರಿಯರನ್ನು ಮೇಲೆಕ್ಕೆ ತರುವ ನನ್ನ ಆಕಾಂಕ್ಷೆಯನ್ನು ಸಂದೇಹದ ದೃಷ್ಟಿಯಲ್ಲಿ ನೋಡಲಾಗುತ್ತದೆ. ಮತ್ತು ಅದನ್ನು ಅತ್ಯಂತ ಅಸಹನೀಯ ರೀತಿಯಲ್ಲಿ ವ್ಯಾಖ್ಯಾನಿಸಲಾಗುತ್ತಿದೆ.

ರುಕ್ಮಾಬಾಯಿಯವರ ಪತ್ರಗಳು ಎಲ್ಲ ಕಡೆ ಹರಡಿತು. ಭಾರತ ಮಾತ್ರವಲ್ಲದೆ ಹೊರದೇಶದಲ್ಲೂ ಇದರ ಬಗ್ಗೆ ಚರ್ಚೆಗಳು ಆರಂಭವಾದವು. ಇದರ ತರುವಾಯ ಲಂಡನ್ನಿನ 'ದಿ ಟೈಮ್ಸ್' ಪತ್ರಿಕೆ ರುಕ್ಮಾಬಾಯಿಯವರ ಪ್ರಕರಣವನ್ನು ಸಂಪಾದಕೀಯದಲ್ಲಿ ಪ್ರಕಟಿಸಲಾರಂಭಿಸಿತು. 1887 ರಲ್ಲಿ ಬಿಷಪ್ ಕಾರ್ಲಿಸ್ಲೆ ಅವರ ಮೂಲಕ ರುಕ್ಮಾಬಾಯಿ ಅವರ ಕುಟುಂಬಕ್ಕೆ ಕಳುಹಿಸಲ್ಪಟ್ಟ ಪತ್ರವನ್ನು ಪ್ರಕಟಿಸಲಾಯಿತು. ತನ್ನ ನ್ಯಾಯಾಲಯ ಪ್ರಕರಣಗಳು ಮುಕ್ತಾಯವಾದ ನಂತರ ರುಕ್ಮಾಬಾಯಿ ತನ್ನ ವಿದ್ಯಾಭ್ಯಾಸವನ್ನು ಮುಂದುವರಿಸಲು ಕೊನೆಯದಾಗಿ ಮುಕ್ತರಾದರು.

ವೈದ್ಯಕೀಯ ವೃತ್ತಿಯ ಜೊತೆಯಲ್ಲಿ ಸಮಾಜದಲ್ಲಿ ಅಸ್ತಿತ್ವದಲ್ಲಿದ್ದ ಬಾಲ್ಯ ವಿವಾಹ ಹಾಗೂ ಮಹಿಳೆಯ ಹಕ್ಕುಗಳ ಬಗ್ಗೆ ದನಿಯೆತ್ತಿದರು. ತನ್ನೊಂದಿಗೆ ಕೆಲಸ ಮಾಡುತ್ತಿರುವ ಸಹ ವೈದ್ಯರಿಗೆ ಆ ಕಾಲದಲ್ಲಿ ಅಂಧಶ್ರದ್ಧೆಗಳ ವಿರುದ್ದ ಸಿಡಿದೆದ್ದ ರುಕ್ಮಾಬಾಯಿ ಅವರ ಧೈರ್ಯ, ಸ್ಥೈರ್ಯ ಮೆಚ್ಚುವಂತಹದ್ದು. ಅವರ ಆದರ್ಶ ಬದುಕು ನಮಗೆಲ್ಲರಿಗೂ ಪ್ರೇರಕಶಕ್ತಿಯಾಗಿದೆ. ಅವರ ಬದುಕಿನ ಕಥೆಯು ಚರಿತ್ರೆಯಲ್ಲಿ ಪರಂಪರೆಯನ್ನು ಸೃಷ್ಟಿಸಿದೆ. ಅವರು ತಮ್ಮ ಕನಸಿನ ಬಗ್ಗೆ ನಿರ್ಣಾಯಕ ಕ್ರಮವನ್ನು ಹೊಂದಿದ್ದರು. ಸಾಮಾಜಿಕ ರೂಢನಂಬಿಕೆಗಳಿಂದ ಮೇಲೇರಿ ಬಂದ ಅವರು ತನ್ನ ಹಕ್ಕುಗಳಿಗಾಗಿ ತಾನೇ ಹೋರಾಡಿದರು. ರುಕ್ಮಾಬಾಯಿಯವರು ಸೆಪ್ಟೆಂಬರ್ 25, 1955ರಂದು ನಿಧನರಾದರು. ಬ್ರಿಟಿಷರ ಪ್ರಾಬಲ್ಯವಿದ್ದ ಕಾಲದಲ್ಲಿ, ಬಾಲ್ಯವಿವಾಹದ ವಿರುದ್ಧ ಧ್ವನಿ ಎತ್ತಿ, ಬ್ರಿಟಿಷರ ವಿರುದ್ಧ ತಿರುಗಿ

ಬಿದ್ದು, ಆ ಕಾಲದಲ್ಲಿ ವೈದ್ಯಕೀಯ ವ್ಯಾಸಂಗ ಮಾಡಿ, ವೈದ್ಯಕೀಯ ವೃತ್ತಿಯಲ್ಲಿ ತಮ್ಮನ್ನು ತೊಡಗಿಸಿಕೊಂಡು, ಭಾರತದ ಪ್ರಥಮ ಮಹಿಳಾ ವೈದ್ಯೆಯೆನಿಸಿಕೊಂಡ ಅವರ ಬದುಕಿನ ಕಥೆ ಹಲವರನ್ನು ತಲುಪಲು ಸಾಧ್ಯವಾಗಲಿಲ್ಲ. ಆದರೆ ಅವರ ಬದುಕಿನ ಕಥೆ ಎಲ್ಲರಿಗೂ ಮುಂಬರುವ ಪೀಳಿಗೆಗೆ ಆದರ್ಶಪ್ರಾಯವಾಗಿರುವುದರಲ್ಲಿ ಸಂಶಯವಿಲ್ಲ.

**– ಡಾ. ಜ್ಯೋತಿ ಸತೀಶ್**

ಗೌ. ಸಂಪಾದಕರು :

**ಡಾ. ಜ್ಯೋತಿ ಸತೀಶ್**

❖ ❖❖

ಸಂಪಾದಕ ಮಂಡಳಿ:

**ಡಾ. ಮಂಜುನಾಥ್**

**ಕೆ. ಮಂಜುನಾಥಯ್ಯ**

**ನಾರಾಯಣ ನವಿಲೇಕರ್**

**ಗಣಪತಿ ಶಂಕರಲಿಂಗ**

**ನೀಲಕಂಠ**

❖ ❖❖

ಬೆಂಗಳೂರು ಪ್ರತಿನಿಧಿ :

**ಎಂ.ಎ.ಎನ್. ಪ್ರಸಾದ್**

❖ ❖❖

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ. *- ಸಂ*

The views expressed by the contributors in this journal are theirs and not of the Association and the Association is not in anyway responsible for the same.

*- Ed.*

❖ ❖❖

ಸಂಪರ್ಕ ವಿಳಾಸ :

**ನೇಸರು**

ಮೈಸೂರು ಅಸೋಸಿಯೇಷನ್
393, ಭಾವು ದಾಜಿ ರಸ್ತೆ,
ಮಾಟುಂಗ,
ಮುಂಬಯಿ-400 019.
✆ 24024647 / 2403 7065

Email :
mysoreassociation.mumbai@gmail.com

Website :
www.mysoreassociation.in

# ಇನ್ನು ಎಲ್ಲಿಗೋಟ
# ಟ್ರಾಫಿಕ್ ಸಿಗ್ನಲ್‌ಗಳಿಲ್ಲದ ರಾಜಧಾನಿ



**– ಉಮಾ ರಾವ್**

ಭೂತಾನ ನಮ್ಮೆದುರಿಗಿಡುವ ಅನೇಕ ಅಚ್ಚರಿಗಳಲ್ಲಿ ಇದೂ ಒಂದು. ಒಂದು ದೇಶದ ರಾಜಧಾನಿ ಎಂದರೆ ಜನಜಂಗುಳಿ, ಗಗನಚುಂಬಿ ಕಟ್ಟಡಗಳು, ಕಣ್ಣು ಕೋರೈಸುವ ನಿಯಾನ್ ಸೈನುಗಳು, ಕಿವಿಗಡಚಿಕ್ಕುವ ಹಾರ್ನ್‌ಗಳು, ಜಗತ್ತಿನೆಲ್ಲೆಡೆಯ ಸರಕನ್ನು ಮಾರಾಟ ಮಾಡುವ ಬೃಹತ್ ಮಾಲ್‌ಗಳು. . . ಇದೇ ಚಿತ್ರ ಕಣ್ಣಿಗೆ ಕಟ್ಟುವಾಗ, ಈ ಪುಟ್ಟ ದೇಶದ ಮೌನ ರಾಜಧಾನಿ ಥಿಂಪು ಒಂದು ಅಪೂರ್ವ ಸ್ವರ್ಗ.

ಹಾಗೆಂದು ಭೂತಾನ್ ಹಿಂದುಳಿದ ದೇಶವೆಂದಲ್ಲ. ಮನುಷ್ಯನ ನೆಮ್ಮದಿಯ ಬದುಕಿಗೆ ಏನು ಅತ್ಯವಶ್ಯಕ ಎಂದು ತಿಳಿದ ದೇಶ. ಪ್ರಪಂಚದಲ್ಲಿ ಎಲ್ಲಾ ಚಿಕ್ಕ–ದೊಡ್ಡ ರಾಷ್ಟ್ರಗಳು ತಮ್ಮ ಅಭಿವೃದ್ಧಿಯನ್ನು ತಮ್ಮ 'ಗ್ರಾಸ್ ನ್ಯಾಶನಲ್ ಹ್ಯಾಪಿನೆಸ್'ನ ಅಳತೆಗೋಲಿನಿಂದ ಅಳೆಯಬೇಕೆನ್ನುವುದು ತಮ್ಮ ಗುರಿ ಎಂದು 1972ರಲ್ಲೇ ಸಾರಿದ ರಾಜ ವಾಂಗ್ಚುಕ್‌ನ ದೇಶ. ತಮ್ಮ ಅಮೂಲ್ಯ ಸಂಸ್ಕೃತಿಯನ್ನು ಕಾಪಾಡಿಕೊಳ್ಳುತ್ತಲೇ, ಮಹಾತ್ಮ ಬುದ್ಧನ ಅಧ್ಯಾತ್ಮಿಕ ಮೌಲ್ಯಗಳನ್ನು ಪಾಲಿಸುತ್ತಲೇ ತಮಗೆ ವರದಾನವಾಗಿ ಬಂದಿರುವ ಅದ್ಭುತ ಪರಿಸರದ ಜೊತೆಜೊತೆಗೆ ಸಮನ್ವಯದಿಂದ ಬಾಳುತ್ತಾ ಬಂದವರು. ಜನರ ಆರೋಗ್ಯ, ನೆಮ್ಮದಿ, ಜೀವನೋಪಾಯಕ್ಕಾಗಿ ಮಾಡುವ ಕೆಲಸದಲ್ಲಿ ತೃಪ್ತಿ, ಸಾಮಾಜಿಕ ಹಾಗೂ ರಾಜಕೀಯ ಸಾಮರಸ್ಯ, ವಿದ್ಯಾರ್ಥಿ ಮುನ್ನಡೆ ಸಾಧಿಸುವ ನಿಟ್ಟಿನಲ್ಲಿ ಸ್ಥಿರವಾದ ಹೆಜ್ಜೆಗಳನ್ನಿಡುತ್ತಿರುವ ದೇಶ.

ಭೂತಾನದಲ್ಲಿ ಕಾಲಿಡುತ್ತಿರುವಾಗಲೇ, ನಮಗೆ ಅಚ್ಚರಿಪಡಿಸುವುದು ಪ್ರತಿಯೊಬ್ಬರ ನಡವಳಿಕೆಯಲ್ಲಿರುವ ಸಹಜತೆ. ಅವರು ತೊಡುವ ಬಣ್ಣ ಬಣ್ಣದ ಘೋ, ಖೀರಾಗಳಲ್ಲಿ ಅವರ ಕಟ್ಟಡಗಳಲ್ಲಿ ಅಳವಡಿಸಿಕೊಂಡಿರುವ ಶಿಲ್ಪಶಾಸ್ತ್ರದ ಪುರಾತನ ಶೈಲಿಯಲ್ಲಿ, ಬೆಳಿಗ್ಗೆ ಎದ್ದು ಸ್ವಚ್ಛವಾಗಿರುವ ರಸ್ತೆಗಳನ್ನೇ ಮತ್ತೆ ಮತ್ತೆ ಉಜ್ಜಿ ಸ್ವಚ್ಛ ಮಾಡುವ ಕೆಲಸಗಾರರ ಶ್ರದ್ಧೆಯಲ್ಲಿ, ಅಲ್ಲಿನ ಯುವಕ ಯುವತಿಯರ ಹಗುರು ನಡಿಗೆಯಲ್ಲಿ, ತಿಳಿನಗೆಯಲ್ಲಿ, ಗುರು ಪದ್ಮಸಂಭವನಿಗೆ ತೋರುವ ಅಪಾರ ಭಕ್ತಿಯಲ್ಲಿ, ತಮ್ಮ ರಾಜನ ಕಂಡರೆ ತೋರುವ ಪ್ರೀತಿ. ಮೆಚ್ಚುಗೆಯಲ್ಲಿ. . . ಸಹಜತೆ ತಾನೇ ತಾನಾಗಿ ಬಿಂಬಿಸುತ್ತದೆ. ಅಲ್ಲಿ ತೋರಿಕೆ ಎಳ್ಳಂಶವೂ ಕಾಣಬರುವುದಿಲ್ಲ. ಅದು ಅತ್ಯಂತ ಆರೋಗ್ಯವಂತ ಮನಸ್ಸುಗಳಿರುವಲ್ಲಿ ಮಾತ್ರ ಸಾಧ್ಯ.

ಇಂತಹ ಚಿಕ್ಕ ದೇಶ ಪಕ್ಕದ ಭಾರತಕ್ಕೆ ಜಲವಿದ್ಯುತ್ ರಫ್ತು ಮಾಡುತ್ತದೆ! ಆದರೆ ಭಾರತದಿಂದ ತರಿಸಿಕೊಳ್ಳುವ ಸಾಮಗ್ರಿಗಳೂ ಹೇರಳ. ಪೆಟ್ರೋಲಿಯಮ್ ಉತ್ಪಾದನೆಗಳಲ್ಲದೆ, ಹಣ್ಣು, ತರಕಾರಿ, ಮೀನು, ಮಾಂಸ, ಇತ್ಯಾದಿ. ಹೌದು. ಇಲ್ಲಿ ವಿರೋಧಾಬಾಸಗಳಿಗೇನೂ ಕಡಿಮೆ ಇಲ್ಲ. ಇಲ್ಲಿ ಎಲ್ಲರೂ ಬೌದ್ಧ ಧರ್ಮದಲ್ಲಿ ನಂಬಿಕೆ ಇಟ್ಟವರಾದ್ದರಿಂದ ಪ್ರಾಣಿಗಳನ್ನು ಕೊಲ್ಲುವುದು ನಿಷಿದ್ಧ ಆದರೆ ಎಲ್ಲರೂ ಶಾಕಾಹಾರಿಗಳೇನಲ್ಲ. ಅವರೇ ಹೇಳುವಂತೆ, 'ಗೆತ್ ಮೀತ್ ಫ್ರಮ್ ಇಂಡಿಯಾ!'

ಭೂತಾನದ ಅನೇಕ ವಿಶಿಷ್ಟತೆಗಳಲ್ಲಿ ಇವರ ದೇಶದ ಸ್ಟ್ಯಾಂಪುಗಳೂ ಒಂದು. ಭೂತಾನದ ಸ್ಟಾಂಪ್‌ಗಳು ಜಗತ್ತಿನಾದ್ಯಂತ ಹೆಸರು ಗಳಿಸಿವೆ. ಇಲ್ಲೂ ತಮಾಷೆಯೆಂದರೆ ಇವರು ಆರಿಸುವ ಚಿತ್ರಗಳು. ಮೂನಿಕ್ ಒಲಿಂಪಿಕ್ಸ್ ಇರಬಹುದು., ಬೇರೆ ಬೇರೆ ದೇಶಗಳ ಅಪರೂಪದ ಪ್ರಾಣಿಗಳಿರಬಹುದು, ಯುರೋಪಿಯನ್ ಪೇಂಟಿಗ್‌ಳಿರಬಹುದು ಅಥವಾ ವಾಲ್ಟ್ ಡಿಸ್ನಿ ಸೃಷ್ಟಿಸಿದ ಮಿಕ್ಕಿಮೌಸ್ ರೀತಿಯ ಪಾತ್ರಗಳಿರಬಹುದು. . . ಎಲ್ಲಾ ಇವರ ಸ್ಟ್ಯಾಂಪ್‌ಗಳಲ್ಲಿ ಬರುತ್ತವೆ! ಒಂದು ಸ್ವಾರಸ್ಯಕರವಾದ ಸ್ಟ್ಯಾಂಪ್ ಮ್ಯೂಝಿಯಂ ಕೂಡ ಇದೆ.

ಥಿಂಪುವಿನಲ್ಲಿರುವುದು ಒಂದೇ ಒಂದು ಸಿನೆಮಾ ಹಾಲ್. ನೀಮಾ ಹೇಳಿದಂತೆ 'ಅಲ್ಲಿ ಯಾವಾಗಲೂ ಬೂಥಾನೀಸ್ ಫಿಲ್ಮ್ಸ್ ಬರುತ್ತೆ. . . ಇಲ್ಲಿ ಸಿನೆಮಾ ಮಾಡುವುದೇ ಕಡಿಮೆ. ಶಾರ್ಟೇಜ್ ಆದಾಗ ಹಿಂದಿ ಫಿಲ್ಮ್ ಬರುತ್ತೆ. . .! ನಮಗೆಲ್ಲ ನಿಮ್ಮ ಸಿನೇಮಾ ತುಂಬಾ ಇಷ್ಟ!'

ಇಲ್ಲಿ ನಾವು ತಿರುಗಾಡಲು ಹೋದದ್ದು ಅವರ ರಜಾದಿನವಾಗಿತ್ತು. ಇಡೀ ಊರು ಪಿಕ್ನಿಕ್‌ನಂತಿತ್ತು. ಬಿಸಿಲು ಕಾಯಿಸುತ್ತಲೇ. 'ತಾಶಿ ದೆಲೆಕ್' ಎಂದು ವಂದಿಸುವ ಬೊಚ್ಚು ಬಾಯಿಯ ಮುದುಕಿಯರು. ಗಿಟಾರ್ ಬಾರಿಸುವ ಹದಿಹರೆಯದ ಹುಡುಗರು. ಫುಟ್ಪಾತುಗಳ ಮೇಲೆ ಕೇರ್‌ಂ ಆಡುವ ಬಾಲ ಸನ್ಯಾಸಿಗಳು. ಆಟ ಆಡುವ ಜೂಲು ನಾಯಿಗಳು, ಬೀದಿಯುದ್ದಕ್ಕೂ ಹ್ಯಾಂಡಿಕ್ರಾಫ್ಟ್ ಮಾರುವ ಅಂಗಡಿಗಳು. ಅದರಲ್ಲಿ ಸುಂದರ ಕೈಮಗ್ಗದ ಬಟ್ಟೆಗಳು, ನೀಲಮಣಿ, ಹವಳ, ಮುತ್ತಿನ ಬೆಳ್ಳಿ ಒಡವೆಗಳು ಊರ ಹೊರಗೆ ಮೈದಾನಗಳಲ್ಲಿ ಅವರಿಗೆ ಶತಮಾನಗಳಿಂದ ಬಳುವಳಿಯಾಗಿ ಬಂದ ಬಿಲ್ಲು ವಿದ್ಯೆ ಅಭ್ಯಸಿಸುವ ಜನ. ಎಲ್ಲರು ಟ್ರಿಮ್ಮೋ ಟ್ರಿಮ್ಮ್! ಒಬ್ಬ್ರಿಗೂ ಬೊಜ್ಜಿಲ್ಲ!

ವಾಪಸ್ ಹೋಗುವಾಗ ಬಜಾರಿನಲ್ಲಿ ಕೂಗು ಹಾಕುವ ಟಿಬೆಟನ್ ಹೆಂಗಸು. ಮಧ್ಯ ವಯಸ್ಕಳು, ಕಪ್ಪು ತಿರುಗುತ್ತಿರುವ ದಂತಪಂಕ್ತಿಯ ನಡುವೆ ಒಂದು ಚಿನ್ನದ ಹಲ್ಲು. ಅಂಗಡಿ ತುಂಬಾ ಸುಂದರ ಬೆಳ್ಳಿ ಆಭರಣಗಳು, ಬುದ್ಧನ ಮೂರ್ತಿಗಳು. ಅವಳ ಅಂಗಡಿಗೆ ಎರಡು ಬಾಗಿಲು.ನಾವು ಅದನ್ನು ಗಮನಿಸಿದ್ದು ನೋಡಿ 'ಬನ್ನಿ, . . . ನನ್ನ ಅಂಗಡಿಗೆ ಎರಡು ಬಾಗಿಲು ಯಾಕೆ ಗೊತ್ತಾ? ನನಗೆ ಎರಡು ಗಂಡಂದಿರು! ಒಬ್ಬ ಒಳಗೆ ಬದಾಗ ಇನ್ನೊಬ್ಬ ಹೊರಗೆ ಹೋಗೋಕೆ. . .' ಎಂದು ನಗುತ್ತಾ ಸ್ವಾಗತಿಸಿದಳು. ಅದನ್ನು ಕಂಡು ಅಲ್ಲಿ ಇದ್ದ ಭೂತಾನಿ ಹುಡುಗಿಯರು ಮುಜುಗರಪಟ್ಟುಕೊಂಡರು!

## ಹೆಣ್ಣು ಮಕ್ಕಳಿಗೆ ಸ್ವರ್ಗ

ಒಂದು ಪಕ್ಕದಲ್ಲಿ ಇಂದಿಗೂ ಹೆಣ್ಣುಮಕ್ಕಳು ಕಣ್ಣು ಬಿಡುವ ಮೊದಲೇ ಹೊಸಕಿ ಹಾಕುವ ನಮ್ಮ ದೇಶ. ಇನ್ನೊಂದು ಕಡೆ ಜಗತ್ತಿಗೇ ಬಾಲವೇಶ್ಯೆಯರ ಮಾರುಕಟ್ಟೆಯಾಗಿರುವ ನೇಪಾಳ. ನಡುವೆ ಅಡಗಿ ಕೂತಿರುವ ಭೂತಾನದಲ್ಲಿ, ಹೆಣ್ಣು ಮಕ್ಕಳು ನೂರಾರು ವರ್ಷಗಳಿಂದ ಪುರುಷರೊಂದಿಗೆ ಸಮಸಮನಾಗಿ, ಯಾವ ಲಿಂಗಾಧಾರಿತ ತಾರತಮ್ಯಕ್ಕೂ ಒಳಗಾಗದೆ, ತಮಗೆ ಬೇಕೆಂದಂತೆ ತಮ್ಮ ಬದುಕನ್ನು ರೂಪಿಸಿಕೊಂಡು ಮುಕ್ತವಾಗಿ ಬದುಕುತ್ತಿರುವುದು ಅಚ್ಚರಿಯ ವಿಷಯವೇ.




ಇವರು ಯಾರೂ ಸ್ತ್ರೀವಾದಿ ಘೋಷಣೆಗಳನ್ನು ಬೀದಿ ಬೀದಿಯಲ್ಲಿ ಕೂಗಿದವರಲ್ಲ. ಬ್ರಾ ಸುಟ್ಟವರಲ್ಲ. ಅಥವಾ ಗ್ರಿಯರ್, ಗ್ಲೋರಿಯಾ, ಸಿಮೊನ್ ದಿ ಬುವಾ ಲೇಖನಗಳನ್ನು ಮನದಟ್ಟು ಮಾಡಿಕೊಂಡು ಅದರಿಂದ ಪ್ರಭಾವಿತರಾದವರಲ್ಲ. ಈ ಸಹಜ ಮುಕ್ತ ಚೇತನಗಳ ಬದುಕು, ನಂಬಿಕೆಗಳು ರೂಪಗೊಂಡಿರುವುದು ಗಂಡು, ಹೆಣ್ಣು ಸಮಾನರು ಎಂದು ಸಾರುವ ಅಪೂರ್ವ ಸಂಸ್ಕೃತಿಯ ಮೂಲಕ. ಅವರಲ್ಲಿ ಗಟ್ಟಿಯಾಗಿ ನೆಲೆಗೊಂಡಿರುವ ಅಧ್ಯಾತ್ಮಿಕ ಮೌಲ್ಯಗಳ ಮೂಲಕ. ಹಾಗಾಗಿ ಭೂತಾನ ದಕ್ಷಿಣ ಏಷ್ಯಾದ ಒಂದು ಭಾಗವಾಗಿದ್ದರೂ ಇಲ್ಲಿನ ಜನರ ನಿಲುವುಗಳು ಮಾತ್ರ ಬೇರೆ ದೇಶಗಳಿಗಿಂತ ತುಂಬಾ ಭಿನ್ನವಾದುದು.

ಭೂತಾನದ ಹೆಣ್ಣುಮಕ್ಕಳು ಎಲ್ಲ ಕ್ಷೇತ್ರಗಳಲ್ಲೂ ಉತ್ಸಾಹದಿಂದ ತೊಡಗಿರುವುದನ್ನು ಕಾಣುತ್ತೇವೆ. ಜನವಸತಿಯಿಂದ ದೂರವಾದ ಮೋಡ ಮುಸುಕಿದ ಪರ್ವತಗಳ ನಡುವೆ ಪ್ರವಾಸಿಗಳಿಗಾಗಿ ಟೀ ಶಾಪುಗಳನ್ನು ನಡೆಸುವ ಯುವತಿಯರಾಗಿ, ಉತ್ಸಾಹದಿಂದ ಬೆಟ್ಟಗಳನ್ನು ಹತ್ತುತ್ತಾ, ಇಳಿಯುತ್ತಾ, ಜೊತೆಗೇ ನಡೆಯುತ್ತಾ ತಮ್ಮ ದೇಶದ ವಿಶಿಷ್ಟತೆಗಳನ್ನು ಹೆಮ್ಮೆಯಿಂದ ವಿವರಿಸುವ ಗೈಡುಗಳಾಗಿ, ಬಿಲ್ಲು ವಿದ್ಯೆ ಪ್ರವೀಣರ ಚೆಂದದ ಪ್ರೇಯಸಿಯರಾಗಿ, ಮುದ್ದು ಮಕ್ಕಳ ಒಂಟಿ ತಾಯಿಯರಾಗಿ, ಭೂತಾನದ ಪ್ರಸಿದ್ಧ ಸ್ಟಾಂಪುಗಳ ಮೇಲಿನ ಸುಖೀ ಕುಟುಂಬದ ಚಿತ್ರದ ಪ್ರತೀಕಗಳಾಗಿ, ಹಳದಿ ಹೆಲ್ಮೆಟ್ಟುಗಳಲ್ಲಿ ಏಣಿ ಹತ್ತುತ್ತಾ ಕಟ್ಟಡ ನಿರ್ಮಾಣದಲ್ಲಿ ನೆರವಾಗುವ ಕಾರ್ಮಿಕರಾಗಿ, ಕೈ ಮಗ್ಗಗಳ ಮೇಲೆ ಬಣ್ಣ ಬಣ್ಣದ ಚಿತ್ತಾರದ ಶಾಲುಗಳ ಸೃಷ್ಟಿಸುವ ಕಲಾವಿದೆಯರಾಗಿ, ಬುದ್ಧನ ನಾಡಿನ ನಿಶ್ಯಬ್ದ ವಿಹಾರಗಳಲ್ಲಿ ಜಪಮಾಲೆ ಹಿಡಿದು ಕೂತ ನಗೆ ಮಾಸದ ವೃದ್ಧ ಸನ್ಯಾಸಿನಿಯರಾಗಿ.

ಸುಮಾರು 7,00,000 ಜನರಿರುವ ಈ ದೇಶದಲ್ಲಿ ಶೇಕಡಾ 75 ಹಳ್ಳಿಗಳಲ್ಲಿ ವಾಸಿಸುತ್ತಾರೆ. ಶೇಕಡಾ 60 ಹೆಣ್ಣುಮಕ್ಕಳು ಆಸ್ತಿಯ ಒಡೆತನ ಹೊಂದಿದ್ದಾರೆ. ಒಂದು ಕುಟುಂಬದಲ್ಲಿ ಮುಖ್ಯ ನಿರ್ಧಾರಗಳನ್ನು ಮನೆ ಒಡತಿಯೇ ತೆಗೆದುಕೊಳ್ಳುತ್ತಾಳೆ. ವಯಸ್ಸಾದ ತಂದೆ, ತಾಯಿಯರನ್ನು ಮಗಳೇ ನೋಡಿಕೊಳ್ಳುತ್ತಾಳೆ. ಇಲ್ಲಿ ಮದುವೆಯಾದ ಕೂಡಲೇ ಹುಡುಗ ಹುಡುಗಿಯ ಮನೆಯಲ್ಲಿ ವಾಸಿಸಲು ಶುರು ಮಾಡುತ್ತಾನೆ. ಇಲ್ಲಿ ಲವ್ ಮ್ಯಾರೇಜ್, ಅರೇಂಜ್ಡ್ ಮ್ಯಾರೇಜ್ ಎರಡೂ ಆಗುತ್ತವೆ. ಎರಡಕ್ಕೂ ಸಮಾಜದ ಸಮ್ಮತಿಯಿದೆ. ಮದುವೆ ಆಗ್ದೆಯೇ ಗಂಡು, ಹೆಣ್ಣು ಜೊತೆಗೆ ಬಾಳುತ್ತಾ ಮಕ್ಕಳನ್ನು ಪಡೆದರೂ ಸಮಾಜ ಯಾವ ಆಕ್ಷೇಪಣೆಯನ್ನೂ ಎತ್ತುವುದಿಲ್ಲ. ಆ ಮಕ್ಕಳಿಗೂ ಯಾವ ಹಣೆಪಟ್ಟಿ ಹಚ್ಚದೆ ಪ್ರೀತಿಯಿಂದ ಸ್ವೀಕರಿಸುತ್ತಾರೆ. ವಿವಾಹ ವಿಚ್ಛೇದನದ ಹಕ್ಕೂ ಗಂಡು, ಹೆಣ್ಣು ಇಬ್ಬರಿಗೂ ಸಮಸಮನಾಗಿದೆ.

ಹೆಣ್ಣು ಮಕ್ಕಳಿಗೆ ಸಾಮಾಜಿಕವಾಗಿ, ರಾಜಕೀಯವಾಗಿ, ಕೌಟುಂಬಿಕವಾಗಿ, ಆರ್ಥಿಕವಾಗಿ ಸಾಕಷ್ಟು ಸ್ವಾತಂತ್ರ್ಯ ಭೂತಾನದಲ್ಲಿದೆ. ಎಲ್ಲ ಕ್ಷೇತ್ರಗಳಲ್ಲಿಯೂ ದುಡಿಯುವ ಹೆಂಗಸರು ಈಗೀಗ ಕಟ್ಟಡ ಕಟ್ಟುವಂಥ ಕಷ್ಟದ ಕೆಲಸಗಳಿಗೂ ಇಷ್ಟಪಟ್ಟು ಹೋಗುತ್ತಿದ್ದಾರೆ. ಬಣ್ಣ ಬಣ್ಣದ ಖೀರಾ ತೊಟ್ಟು ನಾಜೂಕಾಗಿ ಓಡಾಡುವ ಇಲ್ಲಿನ ಹೂವಿನಂಥಾ ಹುಡುಗಿಯರು, ನೀಲಿ ಜೀನ್ಸ್, ಹೆಲ್ಮೆಟ್ ತೊಟ್ಟು ಗಂಡಸರಷ್ಟೇ ಕಷ್ಟಪಟ್ಟು ದುಡಿಯುತ್ತಾರೆ. ಇಲ್ಲಿ ತಮಗೆ ಹೆಣ್ಣು ಮಕ್ಕಳಾಗಲೆಂದು ಹೆಚ್ಚು ಜನ ಇಷ್ಟಪಡುತ್ತಾರೆ!

ಭೂತಾನದಲ್ಲಿ ಕೂಡ ಒಟ್ಟು ಕುಟುಂಬಗಳು ಇನ್ನೂ ಇರುವುದರಿಂದ ಗಂಡ, ಹೆಂಡತಿ ಇಬ್ಬರೂ ಕೆಲಸಕ್ಕೆ ಹೋದರೆ ಮನೆಯಲ್ಲಿ ಮಿಕ್ಕವರು ಮಗುವನ್ನು ನೋಡಿಕೊಳ್ಳುತ್ತಾರೆ. ಗಂಡ, ಹೆಂಡತಿ, ಮಗು ಇರುವ ಕುಟುಂಬಗಳಲ್ಲಿಯೂ ಕೂಡಾ ಹೆಂಡತಿ ಕೆಲಸಕ್ಕೆ ಹೋದಾಗ ಗಂಡ ಮಧ್ಯಾಹ್ನ ಮಗುವಿಗೆ ಊಟ ಮಾಡಿಸಿ ಮಲಗಿಸಿ, ಮನೆ ಕೆಲಸ ಮುಗಿಸಿ, ಹೊರಗಡೆ ಬಿಸಿಲು ಕಾಸುತ್ತಾ ಗೆಳೆಯರೊಂದಿಗೆ ಕೇರಂ ಆಡುತ್ತಿದ್ದರೆ ಅದರಲ್ಲಿಅಚ್ಚರಿಯೇನೂ ಇಲ್ಲ!


## MATRIMONIAL

ALLIANCE INVITED FOR SMARTHA KANNADA BRAHMIN GIRL BORN 11-11-1986, 5'11" PURVA BHADRA NAKSHATRA, MEEN RASHI, CHARTERED ACCOUNTANT WORKING IN REPUTED ORGANISATION IN MUMBAI. WE ARE LOOKING FOR SUITABLE PROFESSIONALY, HIGHLY QAULAIFIED & WELL EDUCATED SMARTHA BRAHMIN BOY IN MUMBAI. CONTACT: 9920123119 EMAIL: vnarendra16@gmail.com

# GIFT DEED

✍ ***Ashwin Vasistha***

Gift deed is a voluntary transfer of moveable and immovable property by one person to another without any consideration for the transfer. The person who gives the gift is known as Donor and the person who receives the gift is known as Donee. The donor who is making a gift must be a solvent person and this move of his should not be an act for Tax Evasion or for any illegal gains. When a gift deed is executed by the donor then the acceptance of the donee is also necessary. A gift deed cannot be said to be completed without it being accepted by the Donee and followed by registration of the gift deed. A gift deed which is executed can be a conditional gift deed i.e. the deed may record transfer of the property provided a condition is met by the donee. For example A father of B gifts an immovable property

**What can be gifted?**

Any movable or immovable should be well defined one and must be in existence i.e. any property which a person believe to acquire on a future date cannot be gifted. The said property should be free from all kinds of encumbrances and should be freely transferable. The Donor should be in possession of the said property on the day when the gift deed is made, In case the donor do not have the possession of the property or title of the property then the said gift deeds shall stand void ab-initio i.e. shall be invalid at the instance when such deed is executed.

**Registration of a gift deed**

Under Section 123 of the Transfer of Property Act, a gift deed of property (movable and immovable), which is not registered, is bad in law and cannot confer title to the donee. Gift Deed should be stamped and registered as required.

Mere delivering possession without a written instrument cannot confer any title. A deed cannot be dispensed with even for a property of small value. Attestation by two witnesses is required. This provision excludes every other mode of transfer and even if the intended donee is put in possession, a gift of property is invalid without a registered instrument.

Under the Maharashtra Stamp Act the Gift will have to be stamped.

**Revocation of A Gift:**

A gift deed can be revoked subject to fulfillment of conditions mentioned in Section 126 of the Transfer of Property Act. The following are few of the essential ingredients to be kept in mind by the donor for revocation of gift:

i) There must be an agreement between the donor and donee that the gift shall be suspended or revoked on the happening or on not happening of a specified event which may be a condition to the Gift deed;

ii) the condition of the Donor as to suspend or revocation of the deed should be agreed to by the donee at the time of accepting the gift. And,

iv) the condition imposed in the gift deed should not be illegal, or immoral and should not be repugnant to the estate created under the gift.

vi) A gift, which is not based on fraud, undue influence or misrepresentation nor was an onerous one, cannot be cancelled unilaterally by the donor. Such a gift deed can be cancelled or revoked by the donor only by resorting to legal remedy before the competent court of law.

**Conclusion:**

Any person who is the legal owner of a property can alone make a gift of his property. Basically, a gift is the transfer of something without any consideration. In other words, it can be said that a voluntary transfer of a property in favor of the done in consideration of love and affection to person is known as "GIFT". It is thus vividly known that "the chief characteristic of a gift is that it is a transfer without any consideration."

# ಬ್ರಾಹ್ಮಣ – ದಲಿತ



✍ ಡಾ. ಬಿ.ಆರ್ ಮಂಜುನಾಥ್

ಇತ್ತೀಚೆಗೆ ಇಡೀ ನಾಡಿನಲ್ಲಿ, ಬ್ರಾಹ್ಮಣರನ್ನು ದೂರುವ ಪೈಪೋಟಿ ನಡೆಯುತ್ತಿದೆ. ಇದರಲ್ಲಿ ರಾಜಕಾರಣವೇ, ಮುಂದಾಗಿರುವುದರಿಂದ ಅದನ್ನು ಕುರಿತು ಮಾತನಾಡುವುದರಲ್ಲಿ ಏನೂ ತಿಳಿವಿಲ್ಲ. ಈ ಬರಹದಲ್ಲಿ ನಾನು, ಬ್ರಾಹ್ಮಣ–ದಲಿತ ಪದಗಳ ಹಿಂದಿನವರ ಬರಹಗಳ, ಅಂತೆಯೇ ಇಂದಿನ ದಿನಗಳ ವಾದ–ವಿವಾದ ಮತ್ತು ವಾಡಿಕೆಯ ತಿಳುವಳಿಕೆಗಳನ್ನು ಕುರಿತು ಮಾತ್ರ ಬರೆಯುತ್ತೇನೆ.

"ಬ್ರಾಹ್ಮಣ" ಅನ್ನುವ ಪದ, ವೇದಕಾಲದ್ದು. ಇದು ಯಾವ ಜಾತಿಯ ಹೆಸರೂ ಅಲ್ಲ. ಋಗ್ವೇದದಲ್ಲಿ, ಮಂತ್ರಗಳಿವೆ. ಇವುಗಳಿಗೆ 'ಸೂಕ್ತ'ಗಳೆಂದೂ ಹೆಸರು. ಅಂದರೆ "ಸು–ಉಕ್ತ", ಒಳ್ಳೆಯ ಮಾತುಗಳೆಂದೇ ತಿಳಿವು. ಯಜುರ್ವೇದದಲ್ಲಿ, ಯಜ್ಞ ಮಾಡುವಾಗ, ಒಂದು ಪ್ರಕಾರದ ವಿಧಿಗಳನ್ನೂ ಆಚರಿಸಬೇಕು. ಇವುಗಳಿಗೆ "ಬ್ರಾಹ್ಮಣ" ಎಂದು ಹೆಸರು. ಎಲ್ಲಾ ಮಂತ್ರಗಳೂ ಋಗ್ವೇದದಿಂದಲೇ ಬಂದವು. ಆದರೆ ಬ್ರಾಹ್ಮಣಗಳು ಯುಜುರ್ವೇದದಲ್ಲಿ ಬಂದಿವೆ. ಆಪಸ್ತಂಭ ಸೂತ್ರದಲ್ಲಿ, "ಮಂತ್ರ ಬ್ರಾಹ್ಮಣಯೋರ್ಹೋ ವೇದ ನಾಮಧೇಯಂ" ಎಂದು ನಿಚ್ಚಳವಾಗಿ ಹೇಳಿದೆ. ಅಂದರೆ ಕೇವಲ 'ಮಂತ್ರ ಬ್ರಾಹ್ಮಣ' ಗಳನ್ನು ಮಾತ್ರ, ವೇದವೆಂದು ಕರೆಯಬೇಕು" ಎಂದು. ಇದರಿಂದ ಉಪನಿಷತ್ತು ಅಥವಾ ಅರಣ್ಯಕಗಳನ್ನು ವೇದದಲ್ಲಿ ಸೇರಿಸಿರಲಿಲ್ಲ. ಉಪನಿಷತ್ತುಗಳನ್ನು "ವೇದಾಂತ" ವೆಂದು, ಆಮೇಲೆ ಸೇರಿಸಿಕೊಂಡರು. ಏಕೆಂದರೆ, ಉಪನಿಷತ್ತುಗಳು, ಯಾವ ಯಜ್ಞಕಾರ್ಯದ ಅಂಗವಾಗಿರಲಿಲ್ಲ.

ಯಾಗದಲ್ಲಿ, ಐದು ಬಗೆಯ ಮಂದಿ ಇರುತ್ತಾರೆ. ಒಬ್ಬ ಯಾಗ ಮಾಡಲು ಬಯಸುವವನು. ಇವನಿಗೆ "ಹೋತೃ" ಎನ್ನುತ್ತಾರೆ. ಇವನೇ ಯಜಮಾನ ಹೋತೃವಿನಿಂದಲೇ, ಇಂಗ್ಲೀಷ್‌ನ "ಹೋಸ್ಟ್" ಬಂದಿರುವುದು.

ಯಾಗದಲ್ಲಿ ಯಾವುದೇ ಅಪಚಾರವಾಗದಂತೆ ನೋಡಲು ಮೇಲ್ವಿಚಾರಕರಾಗಿರುವವರಿಗೆ "ಬ್ರಹ್ಮ" ಎನ್ನುತ್ತಾರೆ. ಈತನಿಗೆ ಮೂರೂ ವೇದಗಳ ತಿಳಿವು ಇರಬೇಕು.

ಮಂತ್ರಗಳನ್ನು ಘೋಷಿಸುವವರಿಗೆ "ಋತ್ವಿಕ"ರು ಎನ್ನುತ್ತಾರೆ. ಇವರೇ ದೇವತೆಗಳನ್ನು ಆಹ್ವಾನ ಮಾಡುವವರು. ಇವರಿಗೆ ಋಗ್ವೇದದ ತಿಳಿವಿರಬೇಕು.

ಯಾಗ ವಿಧಿಪೂರ್ವಕವಾಗಿ, ಅಗ್ನಿಯ ಮೂಲಕವಾಗಿ ನಡೆಯಬೇಕಾದರೆ, ಹೋತೃವಿಗೆ ತಿಳಿಸಿ ಅವನ ಕೈಯಿಂದ ಈ ವಿಧಿಗಳನ್ನು ಮಾಡಿಸುವವರಿಗೆ "ಅಧ್ವರ್ಯು" ಎನ್ನುತ್ತಾರೆ. ಇವರಿಗೆ ಯಜುರ್ವೇದದ ಬ್ರಾಹ್ಮಣದ ಪಾಂಡಿತ್ಯವಿರಬೇಕು.

ಮಂತ್ರಗಳನ್ನು ಹಾಡಿನಂತೆ ಹೇಳುವವರಿಗೆ "ಉದ್ಗಾತೃ" ಎನ್ನುತ್ತಾರೆ. ಇವರು ಸಾಮವೇದಿಗಳು.

ಬ್ರಾಹ್ಮಣವನ್ನು ತಿಳಿದಿರುವ ಈ ಅಧ್ವರ್ಯುಗಳಿಗೇ ಕಾಲಕ್ರಮೇಣದಲ್ಲಿ "ಬ್ರಾಹ್ಮಣ" ಎಂದು ಹೆಸರಾಯಿತು. ಈಗ ಇಂಜಿನಿಯರಿಂಗ್ ಬಲ್ಲವನಿಗೆ ಇಂಜಿನಿಯರ್ ಎಂದೋ ಲಾ ಬಲ್ಲವನಿಗೆ, ಲಾಯರ್ ಎಂದೋ ಆದ ಹಾಗೆ. ಆದರೆ, ಹುಟ್ಟಿದವನಿಗೆ ಮೊದಲ ಗುರು ತಂದೆಯೇ ಆಗುತ್ತಿದ್ದುದರಿಂದ, ಕ್ರಮೇಣ ಬ್ರಾಹ್ಮಣವನ್ನು ಅರಿತವನ ಮಗನೂ ಕೂಡ, ಬ್ರಾಹ್ಮಣ ವಿಧಿಗಳನ್ನು ಕಲಿಯುತ್ತಿದ್ದುದರಿಂದ, ಇದೊಂದು ಜಾತಿ ಆಯಿತು. ಇಂದು ಪ್ರಧಾನಮಂತ್ರಿಯ ಮಗನೇ ಪ್ರಧಾನಮಂತ್ರಿಯಾಗಬೇಕು, ವೈದ್ಯರ ಮಕ್ಕಳೇ ವೈದ್ಯರಾಗುವುದು, ಜಡ್ಜ್‌ಗಳ ಮಕ್ಕಳೇ ಜಡ್ಜ್‌ಗಳಾಗುವುದು, ರಾಜಕಾರಣಿಗಳ ಮಕ್ಕಳೇ ರಾಜಕಾರಣಿಗಳಾಗುವುದು, ಈ ಹೊತ್ತಿಗೂ ದಿಟ. ಆದ್ದರಿಂದ ಇವೂ ಕೂಡ ಜಾತಿಗಳಾಗುತ್ತಿವೆ.

"ದಲಿತ" ಎನ್ನುವುದು ಕಳೆದ 40–50 ವರ್ಷಗಳಲ್ಲಿ, ನಮ್ಮ ಸಾಹಿತಿಗಳು ಕಟ್ಟಿದ ಪದ. 'ದಲಿತ' ಎಂದರೆ ತುಳಿಯಲ್ಪಟ್ಟವನು ಎಂದೇ ತಿಳಿವು. ಹಿಂದೆ ವೇದ ಕಾಲದಲ್ಲಿ ಇದಕ್ಕೆ ಬೇರೆ ಹೆಸರಿತ್ತೇ? ಇತ್ತು. ಅಂದು ಹೀಗೆ ಯಜ್ಞಕಾರ್ಯದಲ್ಲೋ ಯುದ್ಧ ವಿದ್ಯೆಯಲ್ಲೋ, ಇಲ್ಲವೇ ವ್ಯಾಪಾರದಲ್ಲಿ ತೊಡಗದಿದ್ದ ಅಂತೆಯೇ ಆರ್ಯ ಸಂಪ್ರದಾಯಕ್ಕೆ ಸೇರಿಲ್ಲದವರನ್ನು "ಮಾತಂಗ" ರೆಂದು ಕರೆಯಲಾಗುತ್ತಿತ್ತು. ಇದರಿಂದಲೇ ಕನ್ನಡದ "ಮಾದಿಗ" ಹೆಸರು ಬಂದಿರುವುದು. ವೇದ ಕಾಲದಲ್ಲಿ ಅನೇಕ ಋಷಿಗಳು "ಮಾತಂಗ" ಬುಡಕಟ್ಟಿನಿಂದ ಬಂದವರು.

ಮಹಾಭಾರತದ ಅನುಸಂಧಾನ ಪರ್ವದಲ್ಲಿ, ಯುಧಿಷ್ಠಿರ, ವಸಿಷ್ಠ ಮಹರ್ಷಿಯನ್ನು, "ಈ ಮಹರ್ಷಿಗಳು ಯಾರು, ಅವರಿಗೆ ಈ ಬಲ ಎಲ್ಲಿಂದ ದೊರಕಿತು" ಎಂದು ಕೇಳುತ್ತಾನೆ. ವಸಿಷ್ಠ, ಅವನಿಗೆ "ಎಲ್ಲಾ ಮಹರ್ಷಿಗಳೂ ಕೂಡ, ಮಾತಂಗ ಕನ್ಯೆಯರ ಪುತ್ರರೇ. ಅವರು ತಮ್ಮ ವಿದ್ಯಾರ್ಜನೆಯಿಂದ, ತಪೋಬಲದಿಂದ, ಇಷ್ಟು ಮಹಾಪುರುಷರಾಗಿದ್ದಾರೆ ಎಂದು ತಿಳಿಸುತ್ತಾನೆ.

ಮೊಟ್ಟ ಮೊದಲ ಮಾತಂಗ ಋಷಿ, ಕರ್ದಮ. "ಕರ್ದಮ" ಎಂದರೆ ಕೀಳು ಎಂದೇ ತಿಳಿವು. ಕರ್ದಮ ಋಷಿಗೆ ಒಂಬತ್ತು ಮಂದಿ ಹೆಣ್ಣು ಮಕ್ಕಳು. ಕಲಾ, ಅರುಂಧತಿ, ಅನಸೂಯಾ, ಸುಕನ್ಯಾ, ಶ್ರದ್ಧಾ, ಹವಿರ್ಭಕ್, ಗತಿ, ಕ್ರಿಯಾ ಖ್ಯಾತಿ.

ಈ ಒಂಬತ್ತು ಮಂದಿಯೂ ಬ್ರಹ್ಮಮಾನಸ ಪುತ್ರರಾದ ಮಹರ್ಷಿಗಳನ್ನು ಮದುವೆಯಾಗುತ್ತಾರೆ. ಈ ಹೆಣ್ಣುಮಕ್ಕಳು ಎಂತಹ ಪತಿವ್ರತೆಯರೆಂದರೆ ಅವರ ಶಕ್ತಿಯನ್ನು ದೇವತೆಗಳೂ ತಡೆಯಲು ಆಗುವುದಿಲ್ಲ ಅನಸೂಯಾ, ತ್ರಿಮೂರ್ತಿಗಳನ್ನೇ ಮಕ್ಕಳಾಗಿಸಿ ಅವರಿಗೆ ಹಾಲು ಕುಡಿಸುತ್ತಾಳೆ. ಸುಕನ್ಯಾ, ಸೂರ್ಯನೇ ಮತ್ತೆ ಹುಟ್ಟದಂತೆ ತಡೆಯುತ್ತಾಳೆ. ಅರುಂಧತಿ ವಸಿಷ್ಠನ ಹೆಂಡತಿಯಾಗಿ ಮಹಾಪತಿವ್ರತೆಯೆಂದು ಹೆಸರಾಗಿ, ಇಂದಿಗೂ, ಹೊಸದಾಗಿ ಮದುವೆಯಾದ ಗಂಡ–ಹೆಂಡರಿಗೆ, ಮಾದರಿಯೆಂದು ತೋರಲ್ಪಡುತ್ತಾಳೆ.

ಇವರೇ ನಂತರದ ಜಗತ್ತಿನ ಪೀಳಿಗೆಗಳಿಗೆ ತಾಯಂದಿರು. ಇಂದು ನಮ್ಮ ನಾಡಿನಲ್ಲಿ ಎಲ್ಲರೂ ಮಹಿಮಾಶಾಲಿಗಳಾದ ಈ "ಮಾತಂಗ ಕನ್ಯೆಯರ ಮಕ್ಕಳೇ. 'ಪಾರ್ವತಿ' ಎಂದರೆ ಬೆಟ್ಟದ ಮಗಳು ಎಂದೇ ತಿಳಿವು. ಇಂದಿಗೂ ಪಾರ್ವತಿಯನ್ನು "ಮಾತಂಗಿ" ಎಂದೇ ಕರೆಯುವುದು. ಹೀಗಾಗಿ ಮಾತಂಗರು ಅಂದಿನ ಕಾಲದಲ್ಲಿ ಬಲಾಢ್ಯರಾಗಿದ್ದರು, ಇಂದು ವಿಪರ್ಯಾಸವೆಂದರೆ, ಎಷ್ಟೋ "ಬ್ರಾಹ್ಮಣ"ರೆಂದು ಕರೆದುಕೊಳ್ಳುವ ಮಂದಿ, ತಮ್ಮ ಗೋತ್ರ–ಪ್ರವರಗಳನ್ನೇ ಅರಿತಿರುವುದಿಲ್ಲ. ಸುಮನೆ ಗಟ್ಟು ಮಾಡಿಕೊಂಡು ಉದುರಿಸಿಬಿಡುತ್ತಾರೆ. ಹೀಗೆ "ವಾಸಿಷ್ಠ, ಆತ್ರೇಯ, ಆಂಗೀರಸ, ಭಾರ್ಗವ, ಕಾಶ್ಯಪ, ಗೋತ್ರದವರೆಂದು ಹೇಳಿಕೊಳ್ಳುವ ಬ್ರಾಹ್ಮಣರು. ತಾವೂ ಕೂಡ ಮಾತಂಗರೆಂಬುದನ್ನು ಮರೆತಿದ್ದಾರೆ.

ವಸಿಷ್ಠ, ಮಿತ್ರಾ ವರುಣರೆಂಬ ಇಬ್ಬರು ದೇವತೆಗಳಿಗೆ ಊರ್ವಶಿಯೆಂಬ ಅಪ್ಸರಸಿಗೆ ಹುಟ್ಟಿದವನು. ಇದು ಒಂದು ಕಾವ್ಯ ಪ್ರತಿಮೆ. ಮಿತ್–ರಾ, ಒಬ್ಬ ಆದಿತ್ಯ ದೇವತೆ, ವರುಣ, ನೀರಿನ ದೇವತೆ. ನೀರು–ಬೆಳಕು ಕೂಡಿದಾಗ ಜೀವ ಹುಟ್ಟುತ್ತದೆ. ಇದು ಇಂದಿನ ವೈಜ್ಞಾನಿಕ ತಿಳಿವು. ಆದರೆ ಅಂದೇ ನಮ್ಮ ಹಿರಿಯರು ಇದನ್ನು ಅರಿತಿದ್ದರು.

ಇನ್ನು ಕಶ್ಯಪನ ತಂದೆ ತಾಯಿಯರು, ಮರೀಚಿ, ಎಂದರೆ ಬೆಳಕು. "ಕ ಲಾ" ಎಂದರೆ 'ನೀರಿನವಳು' ಎಂದು ತಿಳಿವು. ನೀರು –ಬೆಳಕು ಕೂಡಿದಾಗ ಮೊದಲು ಹುಟ್ಟಿದ ಜೀವ, ಸಣ್ಣ ಮೀನು. ಇದಕ್ಕೇ ಸುಸಂಸ್ಕೃತದಲ್ಲಿ 'ಕ ಚ್ಛ ಪ' ಎಂದು ಹೆಸರು. ಕಚ್ಛಪ  ಕಶ್ಯಪ ಒಂದೇ.ಕಶ್ಯಪ ಮುನಿ ಹೀಗೆ ಹುಟ್ಟಿದವನು. ನಮ್ಮ ಹಿರಿಯರಿಗೆ ಜೀವ ಹೇಗೆ ಹುಟ್ಟಿತೆಂಬುದು, ಡಾರ್ವಿನ್‌ಗೆ ಅರಿವಾಗುವುದಕ್ಕಿಂತ ಐದು ಸಾವಿರ ವರ್ಷಗಳ ಮೊದಲೇ ತಿಳಿದಿತ್ತು. ತಿಳಿಯದೇ, ಟೀಕೆ ಮಾಡುತ್ತಿರುವುದು ನಾಚಿಕೆಗೇಡು.

ಹೀಗಾಗಿ, ಮಾತಂಗ "ಜೀವ ಬೀಜ" (DNA) ಇಲ್ಲದೇ ಇರುವ, ಯಾರೂ ನಮ್ಮ ನಾಡಿನಲ್ಲಿಲ್ಲ. ಋಗ್ವೇದವನ್ನು ಓದಿದಾಗ, ಅದರಲ್ಲಿ ಬೇರೆಡೆಯಿಂದ ಜನರು ವಲಸೆ ಬರುವ ಮುನ್ನವೇ ಸಿಂಧೂ– ಸರಸ್ವತಿ ಹೊಳೆಗಳ ನಡುವಿನ ನೆಲದಲ್ಲಿ, ಆಗಲೇ ಮಂದಿ ಬಾಳುತ್ತಿದ್ದರೆಂದ್ದುದು ನಿಚ್ಚಳವಾಗುತ್ತದೆ. ಋಗ್ವೇದದಲ್ಲಿ "ಇಲ್ಲಿ, ಕಂದು ಬಣ್ಣದ, ಚಪ್ಪಟೆ ಮೂಗಿನ, ತಿಳಿಯದ್ದಂತಹ ಮಾತನ್ನು ಆಡುವ, "ಮಂದಿ", "ಪುರ" ಎಂದು ಕರೆದುಕೊಳ್ಳುವ ಕೋಟೆಗಳಲ್ಲಿ ಬಾಳುತ್ತಿದ್ದರೆಂಬುದು ತಿಳಿಯುತ್ತದೆ. ಅವರುಗಳು ತಮ್ಮನ್ನು, "ದಾಸ, ಮತಂಗ"ರೆಂದು ಕರೆದುಕೊಳ್ಳುತ್ತಿದ್ದರೆಂಬುದೂ ತಿಳಿಯುತ್ತದೆ. ಹೀಗಾಗಿ, "ದಾಸ, ಮತಂಗ, ಪುರ" ಎನ್ನುವ ಪದಗಳು ಸಂಸ್ಕೃತವಲ್ಲ, ಹಿಂದಿನಿಂದ ಈ ನಾಡಿನಲ್ಲಿಯೇ ಇದ್ದ ನುಡಿಗಳಿಂದ ಬಂದವು. ಆದ್ದರಿಂದ, "ಮತಂಗ" ಎನ್ನುವ ಪದ "ಆದಿ ದ್ರಾವಿಡ""ಆದಿ ಕರ್ನಾಟಕ'ರೆಂಬ ಹೆಸರುಗಳಂತೆಯೇ, ಆದರೆ ಆ ಹೆಸರುಗಳಿಗಿಂತ ತುಂಬಾ ಹಳೆಯದು ಎನ್ನಬೇಕು.

ನಾವು "ವಸಿಷ್ಠ" ಗೋತ್ರದವರು, "ಭಾರದ್ವಾಜ" ಗೋತ್ರದವರು, "ಜಮದಗ್ನಿ" ಗೋತ್ರದವರು ಎಂದು ಯಾರೂ ಕೊಚ್ಚುವುದು ಬೇಡ. ಎಲ್ಲರ ಮೂಲ ಒಂದೇ. ಹೊಸ ಜನ ವಲಸೆ ಬಂದಾಗ, ಇಲ್ಲಿಯೇ ಮೊದಲಿದ್ದ ಮಂದಿಯೊಡನೆ ಬೆರೆಯುವುದು, ಅನೇಕ ನಾಡುಗಳ ಇತಿಹಾಸವಾಗಿದೆ. ನುಡಿಗಳೂ ಬೆರಕೆಯಾಗಿವೆ. ಸಂಸ್ಕೃತವೇ ಮೂಲಭಾಷೆ, ಮಿಕ್ಕೆಲ್ಲವೂ "ಅಭಿಜಾತ" ಭಾಷೆಗಳು ಎನ್ನುವ ಪಂಡಿತರ ಮೂಗು ನೆಗ್ಗಾಗಿದೆ.

ಹೀಗಾಗಿ ಇಂದು ನಮ್ಮ ನಾಡಿನಲ್ಲಿ, ಯಾರೂ "ನಾ ಮೇಲು, ತಾ ಮೇಲು" ಎನ್ನುವಂತಿಲ್ಲ. ಹಿಂದೆ ಕೆಲವರು "ಬ್ರಾಹ್ಮಣ" ಎಂದು ಕೊಚ್ಚಿಕೊಳ್ಳುತ್ತಿದ್ದಂತೆ, ಇಂದು ಹಲವರು "ನಾ ದಲಿತ" ಎಂದು ಕೊಚ್ಚಿಕೊಳ್ಳುತ್ತಿದ್ದಾರೆ. ಈಗ ತಿಳಿದವನು "ಬ್ರಾಹ್ಮಣ" ಎನ್ನುವುದಾದರೆ, ಕೇವಲ ಕೆಲವೇ ಹೆಸರುಗಳನ್ನು ನಾವಿಲ್ಲಿ ನೆನೆಯಬಹುದು ಅಷ್ಟೆ. ಕೇವಲ, ಐನ್‌ಸ್ಟೀನ್, ಹೈಸೆನ್‌ಬರ್ಗ್, ಜಗದೀಶ್ ಚಂದ್ರ ಬೋಸ್, ವಿವೇಕಾನಂದ, ಜಗ್ಗಿ ವಾಸುದೇವ್, ಅಂತಹವರು ಮಾತ್ರ "ಬ್ರಾಹ್ಮಣ" ಎಂದು ಕರೆಯಲು ತಕ್ಕವರು.

**ಮಿಕ್ಕವರೆಲ್ಲ ಕೇವಲ "ಮಂದಿ" ಅಷ್ಟೇ.**

## ಸದಸ್ಯರ ಗಮನಕ್ಕೆ :

**ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು** ಇದರ ಸದಸ್ಯತ್ವ ಪಡೆಯಲು ಇಚ್ಛಿಸುವವರು ಸದಸ್ಯತ್ವದ ಅರ್ಜಿಯನ್ನು ಮೈಸೂರು ಅಸೋಸಿಯೇಷನ್ ಮುಂಬೈ ಕಚೇರಿಯಲ್ಲಿ ಪಡೆಯಬಹುದಾಗಿದೆ.

ಪೋಷಕ ವರ್ಗ : ರೂ. 10000/–

ದಾತೃ ವರ್ಗ : ರೂ. 5000/–

ಅಜೀವ ಸದಸ್ಯತ್ವ : ರೂ. 260/–

ಅರ್ಹತೆ: ಪರಿಷತ್ತಿನ ಉದ್ದೇಶಗಳನ್ನು ಅಂಗೀಕರಿಸಿ ಅದರೊಡನೆ ಸಹಕರಿಸಲು ಬದ್ಧರಾಗುವ 18 ವರ್ಷ ಮೇಲ್ಪಟ್ಟ ವಯಸ್ಸಿನ, ಕನ್ನಡ ಓದು ಬರಹ ಬಲ್ಲ ಎಲ್ಲ ವ್ಯಕ್ತಿಗಳು ಸದಸ್ಯರಾಗಬಹುದು


## STATEMENT ABOUT OWNERSHIP AND OTHER PARTICULARS OF NESARU TINGALOLE

| | | | |
|---|---|---|---|
| 1. | Place of Publication | : | Mumbai |
| 2. | Perdiodicity of Publication | : | Monthly |
| 3. | Printer's Name | : | Aarati Art Printers |
| | Citizenship | : | India |
| | Address | : | 101, Varma Chambers, 11, Homji Street, Fort, Mumbai-400 001. |
| 4. | Publisher's Name | : | Dr. Girija Shastri |
| | Citizenship | : | India |
| | Address | : | C/o. The Mysore Association, 393, Bhaudaji Road, Matunga, Mumbai-400 019. |
| 5. | Editor's Name | : | Dr. Girija Shastri |
| | Citizenship | : | India |
| | Address | : | C/o. The Mysore Association, 393, Bhaudaji Road, Matunga, Mumbai-400 019. |
| 6. | Name & Address of the Owner of Newspaper | : | The Mysore Association, 393, Bhaudaji Road, Matunga, Mumbai-400 019. |

I, Dr. Girija Shastri hereby declare that the particulars given above are true to best of my knowledge and belief.

# Timing of Investment in Mutual Funds



✍ **K. Kamala**

We have now understood various aspects of investing in mutual funds. One of the questions that arises in our minds is whether investments in mutual funds are to be timed like that of investments in equities or is it time agnostic. Markets of late have surged significantly and mutual funds are flooded with inflow of funds. Mutual funds have also been worried about deployment of funds as there are very limited quality stocks for deployment and all funds chasing these stocks are driving the prices even higher.

As we have seen earlier, if you are having Systematic Investment Plan (SIP) running you need to continue these SIPs as over a period of time, costs average out and you will be able to get a return that is significantly different from the other traditional forms of investment. Since these SIPs are goal oriented, you should stick to your Goal and investment horizon.

If you have invested in Balanced Fund having mix of equity and debt then again you should be goal driven and hence you need to stay invested. If you have invested lump sum in Equity oriented funds you need to review your portfolio and systematically book profit in stages. Like SIP there is a concept of Systematic Withdrawal Plan (SWP) which facilitates systematic withdrawal of your investment. Using this opportunity, you may set a target for systematic withdrawal so that your risks get minimized with every further raise in market.

If you are looking at starting a fresh SIP, then probably you would be better off to wait till market corrects so that you could start your SIP plan little later. If you are looking at lump sum investment at the current juncture again you are better off to wait for a better opportunity.

Markets though are buoyant ahead of Budget there are other factors like oil price, Exchange rate, NPAs of banking sector, performance of Companies etc., which will have impact in the coming days. For a common investor it is always advisable to stay away from speculation and also stay away from very volatile period.

Mutual fund performances are available on website of AMFI and you are encouraged to study the performance on a continuous basis before investing. In the next set of articles we would focus on investment in equities, how the market functions, the factors that drive the markets at macro and micro levels.

For any queries on articles so far on mutual funds you may please email to kamalakantharaj@gmail.com

The opinion expressed herein are personal and does not represent the views of the Employer.

# ಅಸೋಸಿಯೇಷನ್ನಿನಲ್ಲಿ ಮಹಾ ಶಿವರಾತ್ರಿ ಪೂಜೆ



ಅಸೋಸಿಯೇಷನ್ನಿನ್ನಲ್ಲಿ "ಶಿವರಾತ್ರಿ" ಪೂಜೆ ದಿನಾಂಕ 13.02.2018 ರಂದು ನಡೆಯಿತು. ಶಾಸ್ತ್ರೋಕ್ತವಾಗಿ ಪೂಜೆಯ ನಂತರ, ರುದ್ರಪಠನವಾಯಿತು. ಅನಂತರ ಶ್ರೀಮತಿ ಶ್ಯಾಮಲಾ ರಾಧೇಶ್ ಅವರ ವಚನ ಗಾಯನವಾಯಿತು.

ಡಾ. ಮಂಜುನಾಥ್ ಅವರು, ಶಿವನ ಹಾಗೂ ಶಿವರಾತ್ರಿಯ ರಹಸ್ಯವನ್ನು ವಿವರಿಸಿದರು. ಆ ಮಹೇಶ್ವರ ನಿರಾಕಾರ ನಿಸ್ವರೂಪನಾಗಿರುವುದರಿಂದ ಅವನನ್ನು ಕಪ್ಪಾದ ದುಂಡು ಕಲ್ಲಿನ ರೂಪದಲ್ಲಿ ಆರಾಧಿಸುತ್ತೇವೆ. 'ಲಿಂಗ' ವೆಂದರೆ ಸಂಕೇತ. 'ಶಿವಲಿಂಗ'ವೆಂದರೆ ಶುಭದ ಸಂಕೇತ ಎಂದು ವಿವರಿಸಿದರು. ಶಿವ ನಿಷ್ಕಾಮ ನಾದವನಾದುದ ರಿಂದ ಅವನ ಭಕ್ತರಾದ ನಾವೂ ಕೂಡ ಶಿವರಾತ್ರಿಯ ಮಟ್ಟಿಗಾದರೂ ಒಂದು ದಿನ ಆಹಾರದ ಆಸೆಯನ್ನೂ ಕೂಡ ಬಿಡುವುದು ಒಂದು ವಾಡಿಕೆ ಎಂದರು.

## ಮುಂಬಯಿ ಕನ್ನಡ ಸಂಘದಲ್ಲಿ ಶ್ರೀ. ಪುರಂದರದಾಸರ ಆರಾಧನೆ

ದಿನಾಂಕ 04.02.2018 ರಂದು ಮಧ್ಯಾಹ್ನ 2.00 ರಿಂದ ಸಂಜೆ 8.00 ರವರೆಗೆ ಮುಂಬಯಿ ಕನ್ನಡ ಸಂಘ, ಶೀ ಪುರಂದರದಾಸರ ಆರಾಧನೆಯನ್ನು ಹಮ್ಮಿಕೊಂಡಿತು. ಇದೇ ಸಂದರ್ಭದಲ್ಲಿ ದಾಸರ ದೇವರ ನಾಮ ಸ್ಪರ್ಧೆ ಕೂಡ ಜರುಗಿತು. ಈ ಸ್ಪರ್ಧೆಯಲ್ಲಿ 30 ಕ್ಕೂ ಹೆಚ್ಚು ಜನರು ಪಾಲ್ಗೊಂಡಿದ್ದರು. ಅನಂತರ ಶ್ರೀಮತಿ ಪದ್ಮಜಾ ಜೋಷಿ ಮತ್ತು ಬಳಗದವರಿಂದ ಸಂಗೀತಾರಾಧನೆ ನಡೆಯಿತು.

ಸ್ಪರ್ಧೆಯ ತೀರ್ಪುಗಾರರ ಪರಿಚಯವನ್ನು ರಾಜೇಂದ್ರ ಗಡಿಯಾರ್ ಅವರು ಮಾಡಿಕೊಟ್ಟರು. ಸಭೆಗೆ ಮುಖ್ಯ ಅತಿಥಿಗಳಾಗಿ ಶ್ರಿ. ಶೇಖರ್ ಆರ್. ಶೆಟಿಯವರು ಬಂದಿದ್ದರು. ಅವರು ಸಂಘ ಕಳೆದ 81 ವರ್ಷಗಳಲ್ಲಿ ನಡೆಸುತ್ತಿರುವ ಕಾರ್ಯಕ್ರಮಗಳ ಬಗ್ಗೆ ತಮ್ಮ ಆನಂದವನ್ನು ವ್ಯಕ್ತಪಡಿಸಿದರು. ಸಂಗೀತಕ್ಕೆ ಆದ್ಯತೆ ಇತ್ತು ಸ್ಪರ್ಧೆಗಳನ್ನು ನಡೆಸುತ್ತಿರುವ ಕನ್ನಡ ಸಂಘಗಳಲ್ಲಿ ಕನ್ನಡ ಸಂಘ ಮುಂದಿದೆ ಎಂದರು.

ಮುಂಬಯಿ ವಿಶ್ವವಿದ್ಯಾಲಯದಲ್ಲಿ ಕನ್ನಡ ಎಂ.ಎ.ಯಲ್ಲಿ ಶ್ರೀಮತಿ ಗೀತಾ ಮುಂಬಯಿ ಸೆಕೆಂಡರಿ ಬೋರ್ಡಿನ ಎಸ್.ಎಸ್.ಸಿ. ಪರೀಕ್ಷೆಯಲ್ಲಿ ಕನ್ನಡದಲ್ಲಿ, ಕು.ಸುನೀತಾ ಗೌಡ ಮುಂಬಯಿ ಎಸ್. ಎಸ್. ಸಿ. ಬೋರ್ಡಿನಲ್ಲಿ ಅತಿ ಹೆಚ್ಚಿನ ಅಂಕ ಗಳಿಸಿದ ವಿದ್ಯಾರ್ಥಿಗಳು ಕುಮಾರಿ ಯಕ್ಷಿತಾ ವಿ. ಪೂಜಾರಿ, ಕುಮಾರಿ ಪೂಜಾ ಕುಟ್ಟಿ ಕುಂದರ್, ಕುಮಾರ ಮಾಲಿಂಗರಾಯ ಎಸ್. ಪೂಜಾರಿ, ಕುಮಾರಿ ಶ್ರೀದೇವಿ ಎಲ್. ಮಂಕೋಜಿ. ನಂತರ ಶ್ರೀ. ಪುರಂದರ ದಾಸರ ದೇವರನಾಮ ಹಾಡುವ ಸ್ಪರ್ಧೆಯಲ್ಲಿ ವಿಜೇತರಾದ ಈ ಕೆಳಗಿನ ಅಭ್ಯರ್ಥಿಗಳಿಗೆ ನಗದು ಬಹುಮಾನ ನೀಡಿ ಗೌರವಿಸಲಾಯಿತು.

**ವಿಭಾಗ I ವಯಸ್ಸು 8 ರಿಂದ 12:** ಪ್ರಥಮ– ಕುಮಾರಿ ನಿತ್ಯಶ್ರೀ ಜಯರಾಮನ್, ದ್ವಿತೀಯ – ಕುಮಾರ್ ಗಗನ್, ತೃತೀಯ– ಕುಮಾರಿ ಮಹತಿ ರಾಧೇಶ್, ಪ್ರೋತ್ಸಾಹಕ – ಕುಮಾರ್ ಕೃಷ್ಣ ಅತ್ರೇಯ.

**ವಿಭಾಗ II ವಯಸ್ಸು 13 ರಿಂದ 18:** ಪ್ರಥಮ– ಕುಮಾರಿ ಅಕ್ಷತಾ ಶೇಷನ್, ದ್ವಿತೀಯ – ಕುಮಾರ ಬಾಲಾಜಿ ನಟೇಶ್, ತೃತೀಯ – ಕುಮಾರಿ ಮಾತಂಗಿ ಮುರಳೀಧರನ್, ಪ್ರೋತ್ಸಾಹಕ – ಕುಮಾರಿ ವರ್ಶಿಣಿ ರಾವ್

**ವಿಭಾಗ III ವಯಸ್ಸು 19 ಮತ್ತು ಮೇಲ್ಪಟ್ಟವರು :** ಪ್ರಥಮ–ಕುಮಾರಿ ಶ್ರೇಯ ಸಾಹುಕಾರ್, ದ್ವಿತೀಯ – ಶ್ರೀಮತಿ ಲತಾ ರಾವ್, ತೃತೀಯ – ಶ್ರೀ ಸುಮಿಶ್ರೀ ಗೋಪಾಲ್, ಪ್ರೋತ್ಸಾಹಕ – ಶ್ರೀಮತಿ ರಮಾದೇವಿ ರಮಾದೇವಿ ರಾವ್. ಈ ಕಾರ್ಯಕ್ರಮಕ್ಕೆ ಸಹ ಪ್ರಯಾಣಿಕರಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು, ಭಾರತ್ ಕೋಪರೇಟಿವ್ ಬ್ಯಾಂಕ್, ಮುಂಬಯಿ, ಸಾರಸ್ವತ ಕೋಪರೇಟಿವ್ ಬ್ಯಾಂಕ್ ಮುಂಬಯಿ, ಶ್ರೀ. ಎಸ್. ಎಸ್. ಅಡೂರ, ಪುರುಷೋತ್ತಮ ವಿ.ಎಸ್., ಶ್ರೀಮತಿ ಪ್ರಫುಲ್ಲ ಉರ್ವಳ ಮತ್ತು ಪರಿವಾರ ಸಹಕರಿಸಿದ್ದರು. ಈ ಕಾರ್ಯಕ್ರಮದ ಯಶಸ್ಸಿಗೆ ಸಂಧ್ಯಾ ವಿ. ಪ್ರಭು, ಮಾಲತಿ ಆಚಾರ್ಯ, ಎಸ್. ಕೆ. ಪದ್ಮನಾಭ್ಹ, ನಾರಾಯಣ ರಾವ್ ಸಹಕರಿಸಿದರು. ಸೋಮನಾಥ ಎಸ್. ಕರ್ಕೇರ ಕಾರ್ಯಕ್ರಮದ ನಿರ್ವಹಣೆ ಮಾಡಿದರು. ರಾಜೇಂದ್ರ ಗಡಿಯಾರ್ ವಂದನಾರ್ಪಣೆ ಮಾಡಿದರು. ಮಂಗಳಾರತಿ ಆದಬಳಿಕ ಪ್ರಸಾದ ವಿನಿಯೋಗದೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು. ವರದಿ: ಜಿ. ಎಸ್. ನಾಯಕ್

# ಹೊರನಾಡು ಎರಡನೆಯ ರಾಷ್ಟ್ರೀಯ ಸಮಾವೇಶ

ಕನ್ನಡ ಸಾಹಿತ್ಯ ಪರಿಷತ್ತು, ಮುಂಬಯಿ ಕನ್ನಡ ಸಂಘಗಳ ಒಡಗೂಡಿ ಹೊರನಾಡೂ ಕನ್ನಡಿಗರ ಎರಡನೆಯ ರಾಷ್ಟ್ರೀಯ ಸಮಾವೇಶವನ್ನು ಮುಂಬಯಿಯ ಮೊಗವೀರ ಭವನದಲ್ಲಿ, ಇದೇ ಫೆಬ್ರವರಿ 10, 11, 2018 ಗಳಂದು ಜರುಗಿಸಿತು. ಬೆಳಿಗ್ಗೆ 9.00 ಗಂಟೆಗಳಿಗೆ, ಕನ್ನಡಾಂಬೆ – ಕಾನಡಾ ವಿಠಲನ ಮೆರವಣಿಗೆ ವೀರಾದೇಸಾಯಿ ರಸ್ತೆ, ಅಂಧೇರಿಯಲ್ಲಿ ಮೊದಲಾಯಿತು. ಡಾ. ಮನು ಬಳಿಗಾರ್, ಡಾ. ನಾರಾಯಣ್, ಕು. ಕಮಲಾ ಕಾಂತರಾಜ್, ಶ್ರೀ. ನಿತ್ಯಾನಂದ ಕೋಟ್ಯಾನ್



ಅವರ ಮುಂಚುಣಿಯಲ್ಲಿ ಶ್ರೀಮದ್ ಭಾಗವತ ಮಂಡಳಿಯ ಭಜನೆಯ ತಂಡ, ಅವರ ಹಿಂದೆ, ರಾಷ್ಟ್ರೀಯ ಕನ್ನಡ ಶಾಲೆಯ ವಿದ್ಯಾಪ್ರಸಾರಕ ಮಂಡಳಿ ಶಾಲೆಯ, ಚೆಂಬೂರು ಕರ್ನಾಟಕ ಸಂಘ ಶಾಲೆಯ ಮಕ್ಕಳು, ಬಗೆಬಗೆಯ ಬಣ್ಣದ ಉಡುಪುಗಳಲ್ಲಿ ತಾಳ ಮದ್ದಲೆಯ ಜೊತೆಗೆ, ಕುಣಿಯುತ್ತಾ ಹೊರಟಿದ್ದುದು, ಎಲ್ಲರ ಕಣ್ಣು ಕುಕ್ಕುವಂತಿತ್ತು. ಮೆರವಣಿಗೆ ಮೊಗವೀರ ಭವನವನ್ನು 9.40ಕ್ಕೆ ಸೇರಿದಾಗ ಮೊಗವೀರ ವ್ಯವಸ್ಥಾಪಕ ಮಂಡಳೀಯ ಐದು ಮುತ್ತೈದೆಯರು, ಪರಿಷತ್ತಿನ ಅಧ್ಯಕ್ಷರನ್ನು ಆರತಿಯಿಂದ ಸ್ವಾಗತಿಸಿ ಬರಮಾಡಿಕೊಂಡರು. ಮೊಗವೀರ ವ್ಯವಸ್ಥಾಪಕ ಮಂಡಳಿಯ ಅಧ್ಯಕ್ಷರಾದ ಶ್ರೀ. ಕೃಷ್ಣಕುಮಾರ ಬಂಗೇರ ಅವರು ಅಧ್ಯಕ್ಷರು ಹಾಗೂ ಇನ್ನಿತರ ಗಣ್ಯರನ್ನು ನಲವಿನಿಂದ ಒಳ ಬರಮಾಡಿಕೊಂಡರು.



ಉದ್ಘಾಟನೆಯನ್ನು ಶ್ರೀಮತಿ ಶ್ಯಾಮಲಾ ರಾಧೇಷ್ ತಂಡದವರಿಂದ ನಾಡಗೀತೆಯೊಡನೆ, ಕನ್ನಡದ ದೀಪವನ್ನು ಹಚ್ಚಿ, ಡಾ. ಎಸ್. ಎಲ್. ಭೈರಪ್ಪನವರು ನೆರವೇರಿಸಿದರು. ಡಾ. ಸುನೀತಾ ಶೆಟ್ಟಿಯವರು ತಮ್ಮ ಆಶಯ ಭಾಷಣದಲ್ಲಿ, ಮುಂಬಯಿಯ ಸಾಹಿತ್ಯ ಕ್ಷೇತ್ರಕ್ಕೆ ಈ ಸಮಾವೇಶ ಒಂದು ಪುಟವನ್ನು ಈಯುತ್ತದೆಂಬುದನ್ನು ಹೇಳಿದರು. ಡಾ. ಮನು ಬಳಿಗಾರ್ ಅವರು, ಹೊರನಾಡಿನಲ್ಲಿ ನಡೆಯುತ್ತಿರುವ ಕನ್ನಡದ ಕೆಲಸವನ್ನು ಗುರುತಿಸಿಯೇ ಪರಿಷತ್ತು ಹೊರನಾಡಿನಲ್ಲಿ ನಡೆಯುತ್ತಿರುವ ಕನ್ನಡದ ಕೆಲಸವನ್ನು ಗುರುತಿಸಿಯೇ ಪರಿಷತ್ತು ಹೊರನಾಡಿನಲ್ಲಿ ಸವಮಾವೇಶಗಳನ್ನು ಜರುಗಿಸುತ್ತದೆ. ಅದರಲ್ಲೂ ಮುಂಬಯಿಯಲ್ಲಿ, ಕನ್ನಡದ ಕೆಲಸ ಹೆಚ್ಚಾಗಿ ನಡೆಯುತ್ತಿದೆ ಎಂಬುದನ್ನು ಪರಿಷತ್ತು ಗುರುತಿಸಿಯೇ, ಬೃಹನ್ಮುಂಬಯಿಗೆ ಪ್ರತ್ಯೇಕವಾಗಿ ಘಟಕದ ಸ್ಥಾನವನ್ನು ನೀಡಿದೆ ಎಂದರು.

ಹೆಸರಾಂತ ಸಾಹಿತಿ, ಡಾ. ಎಸ್. ಎಲ್. ಭೈರಪ್ಪನವರು ದಿಟವಾಗಿ ನಾನೇನೂ ಅಣಿ ಮಾಡಿಕೊಳ್ಳದೆ ಇಲ್ಲಿ ಮಾತನಾಡಲು ಬಂದಿದ್ದೆನೆ ಎಂದರು. ನಾನೂ ಕೂಡ ಬಹಳ ಕಾಲ ಹೊರನಾಡಿನಲ್ಲಿದ್ದವನು. ದೆಹಲಿಯಲ್ಲಿ ಅನೇಕ ಕನ್ನಡಿಗರು ಹುದ್ದೆಗಾಗಿ ಬಂದು ಅಲ್ಲಿ ನೆಲಸಿರುತ್ತಾರೆ. ಆದರೆ ಮುಂಬಯಿಯಲ್ಲಿ, ಕನ್ನಡಿಗರು



ಉಳುಮೆಗಾಗಿ ಬಂದವರು. ಅದರಲ್ಲೂ ಕರಾವಾಳಿಯ ಜನದ ಹುಮ್ಮಸ್ಸಿಗೆ ಇನ್ನ್ಯಾರೂ ಎಣೆ ಇಲ್ಲ. ಸೃಜನಶೀಲ ಬರಹಗಾರ ಭಾಷಣ ಮಾಡಬಾರದು, ಭಾಷಣ ಮಾಡತೊಡಗಿದರೆ ಅವನ ಬರಹ ಸಾಯುತ್ತದೆ. ಇದು ಸ್ವಂತ ಅನುಭವ ಎಂದರು. ಅನುಭವಕ್ಕೂ ಒಂದು ಎಲ್ಲೆ ಇರುತ್ತದೆ. ಒಳನಾಡಿನ ಅನುಭವಕ್ಕಿಂತ ಹೊರನಾಡಿನ ಅನುಭವಕ್ಕೆ ಬೆಲೆ ಹೆಚ್ಚು. ಕರ್ನಾಟಕದಲ್ಲಿ ನಾನು ಬರೆಯುವುದನ್ನು ಬೇರೊಬ್ಬರು ಬರೆಯಬಲ್ಲ. ಆದರೆ ಹೊರನಾಡಿನಲ್ಲಿ ಬರೆದವನಂತೆ ಒಳನಾಡಿನವನಿಗೆ ಆಗುವುದಿಲ್ಲ ಎಂದರು.

ಪ್ರತಿ ಸಮಾಜಕ್ಕೂ ಒಂದು ಐಕಾನ್ ಬೇಕು. ನಮ್ಮ ಕರ್ನಾಟಕಕ್ಕೆ ಡಾ. ಸರ್. ಎಂ. ವಿಶ್ವೇಶ್ವರಯ್ಯನ್ವರು ಅಂತಹ ಒಂದು ಐಕಾನ್. ಕನಸನ್ನು ನನಸಾಗಿಸುವುದರಲ್ಲಿ ಅವರ ಸಾಧನೆ ನಾವು ಎಂದು ನೆನೆಯಬೇಕು. ಕರಾವಳಿಯ ಜನ ಕರ್ನಾಟಕಕ್ಕೇ ಒಂದು ಮಾದರಿ, ಅವರಿಂದ ಒಳನಾಡಿನವರು ಕಲಿಯುವುದು ಸಾಕಷ್ಟಿದೆ ಎಂದರು.

ಕರಾವಳಿಯ ಶಾಲೆಗಳಲ್ಲಿರುವ ಶಿಸ್ತು, ಒಳನಾಡಿನ ಶಾಲೆಗಳಲ್ಲಿಲ್ಲ. ಜಾತೀಯತೆಯಿಂದ ಕನ್ನಡದ ಸಾಹಿತ್ಯ, ರಾಜಕಾರಣ, ತುಂಬಿ ಹೋಗಿದೆ ಎಂದರು. ನಂತರದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ, "ಚಿಣ್ಣರ ಬಿಂಬ"ದ

ಸಾಹಿತ್ಯ ಸಮಾವೇಶ

ಮಕ್ಕಳು ತಮ್ಮ ಭಾವಪೂರ್ಣವಾದ ಕನ್ನಡ ದಾಸಪದಗಳಿಂದ ಹಾಗೂ ನೃತ್ಯಗಳಿಂದ ಎಲ್ಲರ ಮನಸೆಳೆದರು. ಅಂತೆಯೇ ವಿದ್ಯಾಪ್ರಸಾರಕ ಮಂಡಳಿಯ ಶಾಲೆಯ ಮಕ್ಕಳು, ತಮ್ಮ ಕುಣಿತದಿಂದ ಎಲ್ಲರನ್ನೂ ನಲಿಸಿದರು.

ಮೊದಲನೆಯ ಗೋಷ್ಠಿ: ಮುಂಬಯಿ ಕನ್ನಡಿಗರು – ಸೃಜನಶೀಲ ನೆಲೆಗಳು

ಶ್ರೀ. ಜಯಂತ ಕಾಯ್ಕಿಣಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ. ಶ್ರೀನಿವಾಸ ಜೋಕಟ್ಟೇಯವರು, ಯಕ್ಷಗಾನ, ನೃತ್ಯ, ಸಂಗೀತ, ತಾಳಮದ್ದಲೆ, ಚಿತ್ರಕಲೆಗಳಲ್ಲಿ, ಮುಂಬಯಿಯ ಕನ್ನಡಿಗರ ಸಾಧನೆಗಳನ್ನು ಗುರುತಿಸಿದರು. ಡಾ. ಮಮತಾರಾವ್ ಅವರು, ಚಿತ್ರರಂಗ ಹಾಗೂ ರಂಗಭೂಮಿಯಲ್ಲಿ ಕೆಲವು ಮುಂಬಯಿ ಕನ್ನಡಿಗರ ಸಾಧನೆಗಳ ಬಗ್ಗೆ ಹೇಳಿದರು. ಡಾ. ಗಣೇಶ ಉಪಾಧ್ಯರವರು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಮುಂಬಯಿ ಕನ್ನಡಿಗರ ಕೊಡುಗೆಗಳ ಬಗ್ಗೆ ವಿವರವಾಗಿ ಹೇಳಿದರು.







ಆದರೆ ದಿಟವಾಗಿ ಗಮನ ಸೆಳೆದಿದ್ದು ಡಾ. ಮಿತ್ರಾ ವೆಂಕಟರಾಜ್ ಅವರ ಪ್ರತಿಕ್ರಿಯೆ – ವಿಮರ್ಶೆಯಿಲ್ಲದೆ, ಸಾಹ್ತಿಯ, ರಂಗಭೂಮಿ ಮತ್ತು ಪ್ರದರ್ಶನ ಕಲೆಗಳು ಬೆಳೆಯುವುದೇ ಸಾಧ್ಯವಿಲ್ಲ. ಒಂದು ಕಾಲದಲ್ಲಿ ಮುಂಬಯಿಯಲ್ಲಿ ಇದ್ದ ವಿಮರ್ಶೆಗಳು ಈಗ ಇಂದು ಮಾಯವಾಗಿವೆ. ಹೀಗಿರುವಾಗ ಸಾಹಿತ್ಯ ಬೆಳೆಯುವುದಾದರೆ ಹೇಗೆ? ವಿಮರ್ಶೆ, ಸಾಹಿತ್ಯದ ಮೌಲ್ಯಕ್ಕೆ ಒರೆಗಲ್ಲು ಎಂದರು. ಜಯಂತ ಕಾಯ್ಕಿಣಿಯವರು, ಮುಂಬಯಿಗೆ ವಿಶಾಲ ಮನಸ್ಸಿದೆ, ಬೆಂಗಳೂರು ಒಂದು ಒಡೆದ ಹಾಲಿನಂತೆ. ಕವಿ ಭಾವುಕನಾದುದರಿಂದ ಅವನಿಗೆ ಸರಿಯಾದ ಸುತ್ತಮುತ್ತ ಇದ್ದರೆ ಮಾತ್ರ ಅವನ ಅಭಿವ್ಯಕ್ತಿ ಬೆಳೆಯುತ್ತದೆ ಎಂದರು. ಮುಂಬಯಿಯಲ್ಲಿ ಅನಾಮಿಕತೆಯಿಂದ ಸಾಹಿತ್ಯ ಹುಟ್ಟುತ್ತದೆ.

ಮುಂಬಯಿಗೆ ಬಂದವರೆಲ್ಲ ದುಡಿಮೆಗಾರರು, ನಿತ್ಯ ಲೋಕಲ್ ಯಾತ್ರಿಗಳು, ಇಲ್ಲಿ ಜಾತಿ–ಮತ ದ ಬೇಧವಿಲ್ಲ. ಜಾತೀಯತೆ, ಮೂಢನಂಬಿಕೆ, ಎಲ್ಲವೂ ಹಾವುಗಳಂತೆ ಕಲೆ–ಸಾಹಿತ್ಯ, ದುಡಿಮೆ, ಏಣಿಗಳಂತೆ. ಮನುಷ್ಯ ಹಾವಿನ ಸಂಪರ್ಕವಿಲ್ಲದೆ ವಿಕಾಸದ ಏಣಿಗಳನ್ನು ಏರಲಿ ಎಂದರು.

ಎರಡನೆಯ ಗೋಷ್ಠಿ:ಹೊರನಾಡ ಕನ್ನಡಿಗರ ಸವಾಲುಗಳು – ಪರಿಹಾರ.

ಕವಿ ಸಿದ್ಧಲಿಂಗಯ್ಯನವರ ಅಂತೆಯೇ ಸದಾನಂದ ಕೋಟ್ಯಾನ್ ಅವರ ಮಾತುಗಳು ಆಕರ್ಷಕವಾಗಿದ್ದವು. ಕನ್ನಡಿಗರ ಜಾಣ್ಮೆ, ಯಾವ ಅಡ್ಡಿ–



ತೊಂದರೆಗಳನ್ನೂ ದಾಟಿ ಅದೇ ತೊಂದರೆಗಳನ್ನು ಅವಕಾಶವಾಗಿ ಮಾಡಿಕೊಂಡು ಮುಂದುವರೆಯುವುದನ್ನು ಅವರುಗಳು ಹೇಳಿದರು. ಪ್ರಾ. ತೇಜಸ್ವಿ ಕಟ್ಟೀಮನಿಯವರು, ಯುಜಿಸಿ ನಡೆಸುವ ಕಾರ್ಯಕ್ರಮಗಳಲ್ಲಿ ಯಾವ ಹುದ್ದೆಗಳಿವೆ ಎನ್ನುವುದನ್ನು ವಿವರಿಸುತ್ತಾ ಅಲ್ಲಿ ಕನ್ನಡಿಗ ಅಭ್ಯರ್ಥಿಗಳೇ ಇಲ್ಲ ಎಂಬುದನ್ನು ಹೇಳಿದರು. ಅಂತೆಯೇ ಕೋಟಿಗಟ್ಟಲೆ ಹಣಕೊಟ್ಟು ಶಿಕ್ಷಣ ಪಡೆಯುವುದರನ್ನು ಬಿಟ್ಟು, ಅದನ್ನೇ ಬಂಡವಾಳವಾಗಿ ಹೂಡಿ ಉದ್ದಿಮೆ ಮಾಡುವುದನ್ನು ಮುಂಬಯಿಯ ಕನ್ನಡಿಗರು ತೋರಿದ್ದಾರೆ ಎಂದು ಹೊಗಳಿದರು. ಇಂದು ನಾವುಗಳೆಲ್ಲ ನಮ್ಮ ಕಾಲ ಮೇಲೆಯೇ ನಿಂತು, ಬೇರೆಯವರಿಗೂ ಆಸರೆಯಾಗುವುದು ಮುಖ್ಯ. ಇಂತಹ ಯಶಸ್ವಿ ಉದ್ಯಮಿಗಳನ್ನು ಕುರಿತು ಕಾಲೇಜಿನ ಪ್ರೊಫೆಸರ್‌ಗಳು ಕೇಸ್ ಹಿಸ್ಟರಿ ಬರೆಯಬೇಕು ಎಂದರು.

ವಿಶೇಷ ಅತಿಥಿಗಳಾದ ಡಾ. ಸಿದ್ಧಲಿಂಗಯ್ಯನವರು, ಕನ್ನಡಿಗರು ಟೂರಿಸಂ, ಆಹಾರ ಕ್ಷೇತ್ರಗಳಲ್ಲಿ ತಮ್ಮದೇ ಬ್ರಾಂಡ್ ಮಾಡಿರುವುದು ಗಮನಾರ್ಹ. ಕನ್ನಡಿಗರ ಶೋಧನೆಗಳನ್ನು ಬೇರೆಯವರು ಬಳಿಸಿಕೊಂಡು ಪ್ರಚಾರ ಮಾಡುತ್ತಿದ್ದಾರೆ. ಇದರ ಬಗ್ಗೆ ನಾವು ಎಚ್ಚೆತ್ತುಕೊಳ್ಳಬೇಕು ಎಂದರು. ಇಡ್ಲಿ, 9ನೆಯ ಶತಮಾನದ ವಡ್ಡಾರಾಧನೆಯಲ್ಲಿ ಉಲ್ಲೇಖವಾಗಿದ್ದರೆ, ಮಸಾಲೆ ದೋಸೆ 17 ನೆಯ ಶತಮಾನದ ತಮಿಳು ಗ್ರಂಥದಲ್ಲಿ, ಉಡುಪಿಯ ರಥಬೀಡಿಯ ಅರವಂಟಿಗೆಯಲ್ಲಿ, ಸಿಗುತ್ತದೆ ಎಂದು ಉಲ್ಲೇಖವಿದೆ. ದುಡಿಮೆಯ ಪರಿಚಯ ಹೀಗೆ ಹೋಟೆಲ್‌ಗಳಿಂದ ಮೊದಲಾಗಿದೆ. ಮುಂಬಯಿಗೆ ಬಂದ ಎಷ್ಟೋ ಬಡ ಹುಡುಗರು, ಹೋಟೆಲ್‌ನಲ್ಲಿ ಕೆಲಸ ಮಾಡುತ್ತಾ, ರಾತ್ರಿ ಶಾಲೆಗಳಲ್ಲಿ ಓದಿಕೊಂಡು ನಂತರ ಸ್ವಂತ ಉದ್ದಿಮೆಯನ್ನೇ ಹಾಕಿದ, ಕಥೆಗಳು ಹತ್ತು ಸಾವಿರಕ್ಕೂ ಹೆಚ್ಚು ಎಂದರು.




ಸಾಯಂಕಾಲದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಡಾ. ಮೃತ್ಯುಂಜಯುಅ ಅವರಿಂದ ಸುಶ್ರಾವ್ಯ ಹಿಂದೂಸ್ತಾನಿ ಗಾಯನವಾದರೆ, ನಂತರ ಶ್ರೀ. ಗುರುನಾರಾಯಣ ಯಕ್ಷಗಾನ ಮಂಡಳಿ ಅವರಿಂದ ಯಕ್ಷಗಾನ ಪ್ರಸಂಗ ನಡೆಯಿತು.

## ಮೂರನೆಯ ಗೋಷ್ಠಿ: ಹೊರನಾಡ ಕನ್ನಡಿಗರ ಭಾಷಾ ಬಿಕ್ಕಟ್ಟು – ಸಾಮರಸ್ಯ

ಭಾನುವಾರ ಬೆಳಿಗ್ಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪ್ರಾ. ಸಿದ್ಧರಾಮಪ್ಪನವರ ಅಧ್ಯಕ್ಷತೆಯಲ್ಲಿ ಭಾಷಾ ಬಿಕ್ಕಟ್ಟು –ಸಾಮರಸ್ಯದ ವಿಷಯದಲ್ಲಿ ಪ್ರಬಂಧಗಳು ಮಂಡಿಸಲಾಯಿತು. ಪ್ರಾ. ಸಿದ್ಧರಾಮಪ್ಪನವರ ಪ್ರಕಾರ ಶಿಕ್ಷಣ ನೀತಿ, ಈ ಕೇವಲ ಮೂರು ವರ್ಷಗಳಲ್ಲಿ ದೇಶದಲ್ಲಿ ಹಾಳಾಗಿದೆ ಎಂದು ಕಳೆದ 65 ವರ್ಷಗಳಲ್ಲಿ ಶ್ರಮ ಮಾಡಿ ರಚಿಸಿದ ಉದ್ಯೋಗ ನೀತಿಯೂ ಹಾಳಾಗಿದೆ. ಶಿಕ್ಷಣದ ವಿಷಯದಲ್ಲಿ ಕೋರ್ಟ್ ಕೂಡ ತಪ್ಪು ತೀರ್ಮಾನ ಕೊಡುತ್ತಿರುವುದು ದುರ್ದೈವ. ಗಡಿನಾಡಾದ ಕಾಸರಗೋಡು ಕನ್ನಡಿಗರು ಎಚ್ಚೆತ್ತವರು, ಕಣ್ಣೂರಿನವರು ಎಚ್ಚರವಿಲ್ಲದವರು. ರಾಜಕೀಯ ಇಚ್ಛಾಶಕ್ತಿ ದಿನೇ ದಿನೇ ಕ್ಷೀಣವಾಗುತ್ತಿದೆ. ತಮಿಳುನಾಡಿನಿಂದ ನಾವು ಕಲಿಯಬೇಕಾದುದು ಬೇಕಾದಷ್ಟಿದೆ. ಅವರು ತಮ್ಮ ಸಾಂಸ್ಕೃತಿಕ ನೆಲೆಗಳನ್ನು ಕಾಪಾಡಿಕೊಂಡು ಬಂದಿದ್ದಾರೆ. ದ್ರಾವಿಡ ಭಾಷೆಗಳ ಒಕ್ಕೂಟದ ಅಗತ್ಯ ಈಗ ಇದೆ ಇಲ್ಲದಿದ್ದರೆ ಹಿಂದಿಯವರು ನಮ್ಮ ಭಾಷೆಗಳ ಇತಿಶ್ರೀ ಹಾಡುತ್ತಾರೆ ಎಂದರು. ಆಡಳಿತದಲ್ಲಿ, ಡಿಜಿಟಲ್ ಕಾರ್ಯಗಳಲ್ಲಿ ಇಂಗ್ಲೀಷ್ ಅನ್ನು ಬಿಟ್ಟು ಕನ್ನಡವನ್ನೇ ಬಳಸಬೇಕು ಎಂದರು.

ಸಿದ್ದರಾಮಯ್ಯನವರಿಗೆ ಹೊತ್ತಿನ ಅರಿವೇ ಇಲ್ಲದದ್ದು ಎಲ್ಲರೂ ಕಂಡ ವಿಚಾರ. ಅವರಿಗೆ ಮೂರು ಬಾರಿ "ಸಾಕು" ಎಂದು ಚೀಟಿಕೊಟ್ಟರು ಕೂಡ ಅದನ್ನು ತಳ್ಳಿ ಹಾಕಿ, ಕೊರದೇ ಕೊರದರು. ಮುಂದಿನ ಗೋಷ್ಠಿಯು. ರಾಷ್ಟ್ರೀಯ ಶಿಕ್ಷಣ ನೀತಿಯ ಮೇಲಿದ್ದರೂ, ತಾವೇ ಆ ವಿಷಯದಲ್ಲಿ ಹೆಚ್ಚು ಹೇಳಿದರು ಆದರೆ ಇದರಲ್ಲಿ ಭಾಷಾ ಸಾಮರಸ್ಯವೇನೂ ಕಾಣಲಿಲ್ಲ.

## ನಾಲ್ಕನೆಯ ಗೋಷ್ಠಿ: ರಾಷ್ಟ್ರೀಯ ಶಿಕ್ಷಣ ನೀತಿಯ ಮೇಲಿತ್ತು.

ಶಿವರಾಂ ಪಡಿಕ್ಕಲ್ ಅವರು, ತ್ರಿಭಾಷಾ ಸೂತ್ರವನ್ನೇ ನಾವು ಈಗ ಪರಿಶೀಲಿಸಬೇಕು. ಮೊದಲ ಶಿಕ್ಷಣ ತಾಯಿ ನುಡಿಯಲ್ಲಿಯೇ ಆಗಬೇಕು. ಇಂಡು ಟೆಕ್ಸ್ಟ್ ಪುಸ್ತಕಗಳನ್ನು ಅಚ್ಚು ಹಾಕಿಸುವ ಅಗತ್ಯವೇ ಇಲ್ಲ. ಎಲ್ಲಾ ಡಿಜಿಟಲ್ ರೂಪದಲ್ಲಿ ಒದಗಿದೆ ಎಂದರು. ಹೇಮಲತಾ ಮಹಿಷಿಯವರು ಶಿಕ್ಷಣಕ್ಕೆ ಎರಡು ಕೆಲಸಗಳಿವೆ. ಒಂದು, ಒಳ್ಳೆಯ ಮನುಷ್ಯನನ್ನಾಗಿ ಮಾಡಬೇಕು, ಎರಡು, ಅದು ಅವನಿಗೆ ಅನ್ನವನ್ನು ಕೊಡಬೇಕು. ಈಗ ಎಲ್ಲಾ ವಸ್ತುಗಳೂ ಚೀನಾದಿಂದಲೇ ಬರುತ್ತವೆ. ಸೊಳ್ಳೆ ಹೊಡೆಯಬೇಕಾದರೂ, ಅದಕ್ಕೆ ಬ್ಯಾಟು ಚೀನಾದಿಂದಲೇ ಬರುತ್ತವೆ ಈಗ ರಾಮದೇವರ "ಪತಂಜಲಿ" ಕಾರ್ಪೋರೇಟ್‌ಗಳಿಗೆ ಸಡ್ಡೂ ಹೊಡೆಯುತ್ತಿದೆ ಎಂದರು. ಆದರೆ ಅವರ ಮಾತಿನಲ್ಲಿ ಬಹಳ ಗೊಂದವಿರುವುದು ಕಾಣುತ್ತಿತ್ತು. ಅಧ್ಯಕ್ಷತೆ ವಹಿಸಿದ ಮಹೇಶ್ವರಯ್ಯನರು, ನಮ್ಮ ಶಿಕ್ಷಣ ನೀತಿ ಕಾರ್ಪೋರೇಟ್‌ಗಳ ಉದ್ಯೋಗಕ್ಕೆ ಹೊಂದುವಂತಹ ನೀತಿಯಾಗುತ್ತಿದೆ ನಾವು ಭಾಷೆಯ ಬಗ್ಗೆ ಎಚ್ಚರ ವಹಿಸುವುದ್ ಅಗತ್ಯ ಎಂದರು.







ಇದರ ನಂತರದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಕನ್ನಡ ಶಿಕ್ಷಣ ಸಂಸ್ಥೆಯ ಶಾಲೆಯ ಮಕ್ಕಳು "ಪುಣ್ಯಕೋಟಿ ಗೋವಿನ ಕಥೆ"ಯನ್ನು ನೃತ್ಯರೂಪಕವಾಗಿ ತೋರಿಸಿದರು. ಆಗ ಸಭಾಂಗಣದಲ್ಲಿ ಒದ್ದೆಯಾಗದ ಕಣ್ಣುಗಳೇ ಇರಲಿಲ್ಲ. ಸತ್ಯ, ನಿಷ್ಠೆ ಹಾಗೂ ಪ್ರೀತಿಯ ದ್ಯೋತಕವಾಗಿದ್ದ ಈ ಮಕ್ಕಳ ನಾಟಕ, ಎಲ್ಲರನ್ನೂ ಗೆದ್ದಿತು. ಅದರ ನಂತರ ಚೆಂಬೂರು ಕರ್ನಾಟಕ ಸಂಘದ ಶಾಲೆಯ ಮಕ್ಕಳು, ಕನ್ನಡ ಜಾನಪದ ನೃತ್ಯಗಳನ್ನಾಡಿ ಎಲ್ಲರನ್ನೂ ರಂಜಿಸಿದರು. ಅವರ ಯಕ್ಷಗಾನ, ಕಂಸಾಳೆ ಮುಂತಾದ ವೈವಿಧ್ಯಮಯ






ನೃತ್ಯಗಳಿಂದ ಅವರು ಅದ್ಭುತವಾಗಿ ಎಲ್ಲರ ಮನ ಸೆಳೆದರು.

ಕವಿಗೋಷ್ಠಿಯಲ್ಲಿ ಹೇಳಿಕೊಳ್ಳುವಂತಹ ಕವಿತೆಗಳ್ಯಾವುದೂ ಇರಲಿಲ್ಲ. ಶ್ರೀ. ರಂಗರಾಜ ವನದುರ್ಗ ಅವರು, ಕುವೆಂಪು, ಬೇಂದ್ರೆ, ಅಡಿಗ, ಕೆ.ಎಸ್.ನ.. ಅವರ ಕವಿತೆಗಳ ಇದಿರಾಗಿ, ಈಗಿನ ಕವಿಗಳ ಕೆಲ್ಸ ಕಾರಣವಾಗಿದೆ. ವರ್ತಮಾನವನ್ನು ಹೇಗೆ ಮಾತನಾಡಿಸಬೇಕು ಎಂಬುದನ್ನು ಇಂದಿನ ಕವಿಗಳು ಯೋಚಿಸಬೇಕು.



ವರ್ತಮಾನದ ಬದುಕು, ಭಯದಿಂದ ಕೂಡಿದೆ. ಆದ್ದರಿಂದ ಕವಿಗಳು ವರ್ತಮಾನಕ್ಕೆ ಮುಖಾಮುಖಿ ಯಾಗಬೇಕು. ಬಿಕ್ಕಟ್ಟುಗಳಿಗೆ ಎದುರಾಗಿ ಕವಿಗಳು ಬರೆಯ ಬೇಕಾಗಿದೆ ಎಂದರು.

ಸಮಾರೋಪ ಸಮಾರಂಭ ದಲ್ಲಿ, ಮುಖ್ಯ ಅತಿಥಿ – ಮಲ್ಲಿಕಾ ಘಂಟಿಯುವರು ಮಾತನಾಡಿ, ಅಹಂಕಾರಕ್ಕೆ, ಇತಿಹಾಸದುದ್ದಕ್ಕೂ ಪ್ರತಿಭಟನೆ ನಡೆದೇ ಇದೆ. ಈ ಅಹಂಕಾರಕ್ಕೆ ಪಂಪನಿಂದ ಹಿಡಿದು ಇವತ್ತಿನವರೆಗೂ, ಬರಹದ ಮೂಲಕ ಉತ್ತರ ನೀಡುತ್ತಾ ಬಂದಿದ್ದಾರೆ. ಬರಹದಿಂದ ನಾವೆಲ್ಲಾ ಒಟ್ಟಾಗಿದ್ದೇವೆ. ಅಕ್ಷರದ ಅಧಿಕಾರದ ಗುತ್ತಿಗೆದಾರಿಯುನ್ನು ಕಳೆದು ಕೊಂಡರೂ ಮೇಲು ಜಾತಿಯವರ ಅಹಂಕಾರ ಇಳಿದಿಲ್ಲ. ಅದನ್ನು ನಾವು ಇಳಿಸಬೇಕು ಎಂದರು.

ವಿಶ್ವೇಶ್ವರಯ್ಯನ್ವರು ಮಾಡಿದ್ದು ಬರಿಯ ಕೂಲಿ, ಒಡೆಯರಿಗೆ ಸಲ್ಲಬೇಕಾದ ಕೀರ್ತಿಯನ್ನು ವಿಶ್ವೇಶ್ವರಯ್ಯನವರಿಗೆ ಸಲ್ಲಿಸುವ ಹೀನ ಕೆಲಸ ಜಾತಿಯವರು ಮಾಡುತ್ತಿದ್ದಾರೆ ಎಂದರು. ಒಟ್ಟಾರೆ ಇವರು ಉದ್ಘಾಟನಾ ಸಮಾರಂಭದಲ್ಲಿ ಉದ್ಘಾಟನಾ ಸಮಾರಂಭದಲ್ಲಿ ಡಾ. ಎಸ್. ಎಲ್. ಬೈರಪ್ಪನವರು ವಿಶ್ವೇಶ್ವರಯ್ಯನವರು ಕರ್ನಾಟಕದ ಐಕನ್, ಎಂದು ಹೇಳಿದ ಪ್ರತಿಕ್ರಿಯೆ ಇದು ಎನಿಸಿತು. ಜಾತಿಯ ಮೇಲೆಯೇ ಹೆಚ್ಚು ಒತ್ತುಕೊಟ್ಟು ಹೇಳಿದ್ದು, ಮುಂಬಯಿಗೆ ಅನುಚಿತವೆನಿಸಿತ್ತು.

ನಿವೃತ್ತ ಐ.ಎ.ಎಸ್ ಅಧಿಕಾರಿ ಶ್ರೀ. ಎನ್. ಕೆ. ನಾರಾಯಣ್ ಅವರು 3 ಲಕ್ಷದ 10 ಸಾವಿರ ಸದಸ್ಯರಿರುವ ಕನ್ನಡ ಸಾಹಿತ್ಯ ಪರಿಷತ್ತಿಗೆ ಸಾಟಿ ಜಗತ್ತಿನಲ್ಲಿ ಇನ್ನೆಲ್ಲಿಯೂ ಇಲ್ಲವೆಂದರು.

ಸಮಾರೋಪ ನುಡಿಯುತ್ತಾ ಮೋಹನ್ ಆಳ್ವಾರವರು, ತಾನು ಬಯಲು ಶಾಲೆಯಲ್ಲಿ ಕಲಿತವ. ಆದರೆ ಈಗ



ಜಗತ್ತೇ ನನಗೆ ಬಯಲಾಗಿ ಕಾಣುತ್ತಿದೆ ಎಂದರು. ಕನ್ನಡ ಸಂಜೀವಿನಿ, ಈ ಭಾಷೆಗೆ ಸಾವಿಲ್ಲ. ಸಾಹಿತಿ– ಸಾಹಿತ್ಯ ಗಳನ್ನು ಮೀರಿ ಕನ್ನಡ ಬೆಳೆಯಬೇಕಾಗಿದೆ. ಕನ್ನಡ ಅಳಿದರೆ ನಮ್ಮ ಸಂಸ್ಕೃತಿಯ ನಾಶವಾಗುತ್ತದೆ ಎಂಬ ಎಚ್ಚರಿಕೆಯ ಮಾತನ್ನು ಆಡಿದರು.

**ಸನ್ಮಾನ :** ಶ್ರೀ. ಎಚ್. ಬಿ .ಎಲ್. ರಾವ್, ಡಾ. ಜಿ. ಡಿ .ಜೋಶಿ, ಡಾ. ಜಿ.ವಿ.ಕುಲಕರ್ಣಿ, ಡಾ. ಸುನೀತಾ ಶೆಟ್ಟಿಯವರಿಗೆ ಪರಿಷತ್ತು ಸನ್ಮಾನ ಮಾಡಿತು.

32 ಕ್ಕೂ ಹೆಚ್ಚು ಮುಂಬಯಿಯ ಕನ್ನಡ ಸಂಸ್ಥೆಗಳು ಒಡಗೂಡಿ ಆಯೋಜಿಸಿದ ಈ ಸಮಾವೇಶ ಮುಂಬಯಿಯ ಒಗ್ಗಟ್ಟಿಕೆಗೆ ಹೆಗ್ಗಳಿಕೆಯಾಗಿದೆ. ಮೈಸೂರು ಅಸೋಸಿಯೇಷನ್, ಮೊಗವೀರ ವ್ಯವಸ್ಥಾಪಕ ಮಂಡಳಿ, ಕರ್ನಾಟಕ ಸಂಘ, ಬಿಲ್ಲವರ ಸಂಘ, ಬಿ.ಎಸ್.ಕೆ.ಬಿ ಅಸೋಸಿಯೇಷನ್, ಕನ್ನಡ ಕಲಾಕೇಂದ್ರ, ನವಿ ಮುಂಬೈ ಕನ್ನಡ ಸಂಘ, ಚೆಂಬೂರು ಕರ್ನಾಟಕ ಸಂಘ ಮುಂಚೂಣಿಯಲ್ಲಿದ್ದು, ಎಲ್ಲಾ ಸಂಘಗಳನ್ನೂ ಹುರಿದುಂಬಿಸಿ ಒಟ್ಟಾಗಿಸಿದ್ದುದು, ಎಲ್ಲರೂ ಅನೋನ್ಯವಾಗಿ ಎಲ್ಲ ಕೆಲಸಗಳಲ್ಲೂ ಭಾಗಿಯಾಗಿ ನಲಿದಾಡುತ್ತಿದ್ದುದನ್ನು ನೋಡಿದಾಗ, ಮುಂಬಯಿಯಲ್ಲಿ ಕನ್ನಡದ ಭವಿಷ್ಯ ಭದ್ರವಾಗಿದೆ ಎನ್ನುವುದರಲ್ಲಿ ಸಂಶಯವಿಲ್ಲ.

*(ಶ್ರೀನಿವಾಸ ಜೋಕಟ್ಟೆ ಯವರ ವರದಿಯನ್ನು ಅನುಸರಿಸಿ.)*

---

# ಸಮಾವೇಶದ ಬಗ್ಗೆ ನೋಡುಗರ ಅನಿಸಿಕೆಗಳು

*(ನಮ್ಮ ವರದಿಗಾರರಿಂದ)*

ಇದೇ ಕಳೆದ ಫೆಬ್ರವರಿ 10, 11, 2018 ರಂದು ಕನ್ನಡ ಸಾಹಿತ್ಯ ಪರಿಷತ್ತು, ಹಾಗೂ ಮುಂಬಯಿಯ 30 ಕನ್ನಡ ಸಂಘಗಳು ಒಡಗೂಡಿ ಜರುಗಿಸಿದ ಸಮಾವೇಶ, ಮೊಗವೀರ ಭವನ, ಅಂಧೇರಿ (ಪ) ಮುಂಬಯಿಯಲ್ಲಿ ನಡೆಯುತ್ತಿದ್ದಾಗ ನಾನೂ ಅಲ್ಲಿದ್ದು, ಅಲ್ಲಿಯೇ ನೆರೆದಿದ್ದ ಹಾಗೂ ಊಟದ ಸಮಯದಲ್ಲಿ ಹೊರಾಂಗಣದಲ್ಲಿದ್ದ ಜನರು ಮಾತನಾಡುತ್ತಿದ್ದುದ್ದನ್ನು ಕೇಳಿ, ಅವರ ಕೆಲ ಅನಿಸಿಕೆಗಳನ್ನು ವರದಿ ಮಾಡುತ್ತಿದ್ದೇನೆ.

ಮೊದಲ ದಿನದ, ಉದ್ಘಾಟನೆ, ಡಾ. ಭೈರಪ್ಪನವರ ಭಾಷಣವನ್ನು ಎಲ್ಲರೂ ಮೆಚ್ಚಿದ್ದುದು ಕೇಳಿಬರುತ್ತಿತ್ತು.

**ನಾರಾಯಣ:** ಅವರ ಹೇಳಿದ್ರಲ್ಲಾ ಬರೆಯೋವ್ರೆಲ್ಲಾ ಸಾಹಿತಿಗಳಲ್ಲ ಅಂತ, ಅದು ನೂರಕ್ಕೆ ನೂರು ನಿಜ.

**ರಾಘು:** ಅವರೇ ಹೇಳಿಕೊಂಡ್ರಲ್ಲಾ, ನಾನು ಹೊರನಾಡಿನವನಾಗಿದ್ದೇಂತ. ಹಾಗೆ ಕರ್ನಾಟಕದ ಜನರಲ್ಲಿ ಕರಾವಳಿಯವರ ಹುಮ್ಮಸ್ಸನ್ನು ಅವರು ಹೇಳಿದ್ದು ಸರಿ. ನಮಗೆ ಹುಮ್ಮಸ್ಸಿಲ್ಲ ಅನ್ನೋದು ನಿಜ.

**ಆಲದಕಟ್ಟಿ :** ವಿಶ್ವೇಶ್ವರಯ್ಯನವರು ಹೊರನಾಡಿನಲ್ಲಿ ಕೆಲಸ ಮಾಡಿ ಆಮ್ಯಾಗೆ ಒಳನಾಡ್ನಲ್ಲಿ ಕೆಲ್ಸ ಮಾಡಿದ್ರು ಅಂದ್ರು, ಅದು ಖರೆ ಏನ್ರಿ?

**ನಾರಾಯಣ:** ಅದು ಹೌದೌದು. ಇಲ್ಲಿ ಮುಂಬೈನಲ್ಲೇ ಅವರು 38 ವರ್ಷ ಕೆಲಸ ಮಾಡ್ತಿದ್ರು. ನಾನು ಪೂನಾದಲ್ಲಿ ಪ್ರವಾಹವಾದಾಗ ಅಲ್ಲೇ ಇದ್ದೆ. ಎಲ್ಲಾ ಕೊಚ್ಕೊಂಡು ಹೋದ್ರೂ ಅವರ ಕಟ್ಟಿದ ಖಡಕ್‌ವ್ಯಾಸಾ ಡ್ಯಾಮ್ ಭದ್ರವಾಗಿ ನಿಂತ್ಕೋತು. ಬೆಂಗಳೂರಿನಲ್ಲಿ ಈಗ ಮಾಡಿದ ರಸ್ತೆಗಳಲ್ಲಿ ಗುಂಡಿಬಿದ್ದು ಎಷ್ಟೋ ಜನ ಸತ್ತು ಹೋಗಿದಾರೆ.

**ಸುವರ್ಣ:** ಸುನೀತಾ ಶೆಟ್ಟಿ ಚೆಂದ ಮಾತಾಡಿದ್ರು, ಷಡಕ್ಷರಿಯವರೂ ಮಾತನಾಡಿದ್ರು. ಆದರೆ ಸ್ವಲ್ಪ ಉದ್ದ ಆಯ್ತು.

**ಹೊರಗಿನವರು:** ಭಾರಿ ಖುಷಿ ಆತರಿ. ಮುಂಬಯಿ ಮಂದಿ ಈಟು ಕನ್ನಡದ ಬಗ್ಗೆ ಹೆಮ್ಮೆ ತೋರಿಸ್ತವ್ರೆ ಅನ್ನಾದ ಕಂಡು. ಬೆಂಗ್ಳೂರಾಗೆ ಈಟು ಚಲೋ ಕನ್ನಡ ಮಾತಾಡಲ್ರೀ. ಮಕ್ಕಳೂ ದಾಸರ ಪದ ಹ್ಯಾಂಗ ಹಾಡ್ತಾರಾ ಅಂದ್ರೆ, ಕೇಳಾಕೇ ಒಂದು ಖುಷಿ ಆತ್ರೀ.

**ಇನ್ನೊಬ್ರು:** ಕಾಯ್ಕಿಣಿ ಅವರು ಹೇಳಿದ್ದೇ ಹೇಳಾಕೆ ಹತ್ತಾರ್ರೀ. ಇದಕ್ಕ ಮದ್ಲು ಮುಂಬಯ್ಯಾಗೆ ಹೋದ ವರ್ಸ ಆಡಿದ್ದೇ, ಮೈಸೂರು ಸಮ್ಮೇಳನದಾಗೂ ಆಡಿದ್ರಿ. ಈ ಹೊತ್ನಾಗೂ ಅದೇರಿ.

**ನಾರಾಯಣ:** ಎರಡನೇ ಗೋಷ್ಠಿ ಚೆನ್ನಾಗಿತ್ತು. ಪ್ರೊ. ತಾರಕೇಶ್ವರ್ ಹಾಗೂ ಸದಾನಂದ ಕೋಟ್ಯಾನ್ ಅವರು ವಿಷಯ ಕುರಿತು ಮಾತನಾಡಿದ್ರು.

**ಚಂದ್ರು:** ಪೋಕಳೆಯವರು ಏನೇನೋ ಮಾತಾಡಿದ್ರು. ಬಿಡಿ ಅದನ್ನ. ಈ ಜನ ಎಲ್ಲಾ ಮಾತಾಡೋಡು ನೋಡಿದ್ರೆ, ಹಿಂದಿನ ಈ ಕೇವಲ ಮೂರು ವರ್ಷದಿಂದ ಹೇರ್ತಾ ಇದಾರೆ ಅನ್ನೋ ಹಾಗೆ ಮಾತಾಡ್ತಾರೆ. ಕಾಂಗ್ರೆಸ್‌ನವರ 1960 ರಿಂದ ಮಾಡ್ತಾ ಇರೋದೇನು. ಹಿಂದೀನೇ ನಮ್ಮ ರಾಷ್ಟ್ರಭಾಷೆ ಅಂತ ಎಲ್ಲಾ ಸ್ಕೂಲ್ ಮಕ್ಕಳಿಗೂ ಬ್ರೈನ್ ವಾಷ್ ಮಾಡ್ತವ್ರೇ ಇವರಲ್ವೆ? ತಮಿಳಿನವರು ಮಾತ್ರ ಎದುರು ಬಿದ್ರು. ಯಾವ ಕನ್ನಡ ಸರ್ಕಾರವೂ ಉಸರೆತ್ತಿಲ್ಲ?

**ಸಿದ್ಧ:** ನೋಡಿ ಅಪ್ಪಾ, ಇದೆಲ್ಲಾ ಈಗ ರಾಜಕೀಯ ಆಗ್ಯಾದೆ. ಮುಂಬೈನಾಗೆ ಈ ಜಂಜಟ್ ಇಲ್ಲ ಬಿಡ್ರಿ. ನಮ್ಮ ಹುಡುಗರು ನಾಲ್ಕು ಭಾಷೆ ಕಲೀತಾವೆ. ಈಗ ಎಲೆಕ್ಷನ್ ಕರ್ನಾಟಕದಾಗ ಬರ್ತೈತಿ ಅಂತ ಇವ್ರೆಲ್ಲಾ ಮಾತಾಡಿಕ್ಕೆ ಹತ್ತವ್ರೆ. ಅದ್ಯಾರೋ, ಅನಂತಪುರದಿಂದ ಬಂದಾರಲ್ಲ, ಅವರು ನೆಟ್ಟಗೆ ಮಾತಾಡಿದ್ರುರೀ. ಆ ಭಾಷೆ ಈ ಭಾಷೆ ಅಂತಾ ಕಾದಾಡೋದು ಬಿಟ್ಟು ನಮ್ಮ ನಮ್ಮ ಭಾಷೆ ನಮ್ಮ ಮಕ್ಕಳಿಗೆ ಕಲಿಸಿದ್ರೆ ನಮ್ಮ ಭಾಷೆ ಉಳೀತಾದೆ.

**ಕೋಟ್ಯಾನ್:** ಅದೇ ನಾನು ಹೇಳೋದು. ಈಗ ಮುಂಬಯಿನಲ್ಲಿ ಎಷ್ಟು ಕನ್ನಡ ಶಾಲೆಗಳಿದ್ವು, ಅವನ್ನೇನು, ಮಹಾರಾಷ್ಟ್ರ ಸರ್ಕಾರನೋ, ಮುಂಬಯಿ ಕಾರ್ಪೋರೇಷನೋ ಮುಚ್ಚಲಿಲ್ಲ. ಕನ್ನಡ ತಂದೆ–ತಾಯಿಗಳೇ ತಮ್ಮ ಮಕ್ಕಳನ್ನ ಇಂಗ್ಲೀಷ್ ಸ್ಕೂಲಿಗೆ ಕಳಿಸ್ಬಿಟ್ಟು, ಇಲ್ಲಿ ಬಂದು ಕನ್ನಡ ಶಾಲೆಗಳನ್ನ ಸರ್ಕಾರ ನಡೆಸ್ತಿಲ್ಲ ಅಂದ್ರೆ, ಸರ್ಕಾರ ಏನು ಖಾಲಿ ಗೋಡೆಗಳಿಗೆ ಕನ್ನಡ ಹೇಳಿ ಕೊಡಬೇಕಾ? ಇವತ್ತೇ ಸ್ಟೇಜ್ ಮೇಲೆ ಕೂತವ್ರಲ್ಲಿ ಎಷ್ಟು ಜನ ತಮ್ಮ ಮಕ್ಕಳನ್ನ ಕನ್ನಡ ಶಾಲೆಗಳಿಗೆ ಕಳಿಸ್ತಾ ಇದ್ದಾರೆ, ಅಂತ ಕೇಳಿದ್ರೆ ನಿಜ ಗೊತ್ತಾಗುತ್ತೆ.

**ಚಂದ್ರು:** ಶಾಸ್ತ್ರ ಹೇಳೋಕೆ, ಬದನೆಕಾಯಿ ತಿಂಬೋಕೆ.

**ಮತ್ತೊಬ್ರು:** ಅಲ್ಲ, ಇವರು ಏಕೆ ಕರ್ನಾಟಕದಿಂದ, ಮುಂಬೈಗೆ ಬಂದು ಜಾತಿ ವಿಷಯ ಕೂಗಾಡ್ತಿದಾರೆ. ಮುಂಬೈಯಲ್ಲಿ ನಾವ್ಯಾರೂ ಜಾತಿ ವಿಷಯ ಮಾತಾಡೋದೇ ಇಲ್ಲ. ಆಕೆ, ಆ ಮಲ್ಲಿಕಾ ಘಂಟಿ ಮೇಲು ಜಾತಿಯವರ ಅಹಂಕಾರ ಇಳಿಸ್ಬೇಕು ಅಂತಾಳೆ.

**ನಾರಾಯಣ:** ಹಾಗಾದ್ರೆ ಆಕೇನ ಒಪ್ಪೊಂಡ್ಹಾಗೆ ಆಯ್ತಲ್ಲ ಅವರು ಮೇಲು ಜಾತ್ರಿಯವ್ರು ಅಂತಾ.

**ಸುಶೀಲ:** ಆದ್ರು, ಅವರು ವಿಶ್ವೇಶ್ವರಯ್ಯನವರನ್ನ ಹಾಗೆಲ್ಲ ಬೈಬಾರದಿತ್ತು, 'ಕೂಲಿ' ಅಂತ ಕೂಡ ಅಂದ್ರು.

**ಮತ್ತೊಬ್ರು:** ಈಕೇನೂ ಕೂಲೀನೇ ತಾನೆ. ಯಾವುದೋ ವಿಶ್ವವಿದ್ಯಾಲಯದಲ್ಲಿ ಸರ್ಕಾರದಿಂದ ಕೂಲಿ ತಗೋತಾ ಇದಾಳೆ. ಕೂಲಿ ತಗೊಂಡ್ರೂ ನಿಯತ್ತಿಂದ ಕೆಲಸ ಮಾಡ್ಬೇಕು. ಈಕೆ ಮಾಡ್ತಾ ಇದಾಳಾ? ವಿಶ್ವವಿದ್ಯಾಲಯದ ಕುಲಪತಿ ಅಂದರೆ ಎಷ್ಟು ಮರ್ಯಾದೆ ಇಂದ ಮಾತಾಡ್ಬೇಕು? ಬಾಯಿ ಬಿಟ್ರೆ ಅವಲಕ್ಷಣ.

**ಧಾರವಾಡದಿಂದ ಬಂದವರು:** ಸುಮ್ಮನೆ ನೀವು ಅಪ್‌ಸೆಟ್ ಆಗ್ಬೇಡ್ರಿ. ಇವರೆಲ್ಲಾ ಈಗಿನ ಸರ್ಕಾರದ ಗಂಟಿ ಹೊಡ್ಕೊಂಡು ತಿರ್ಗಾವ್ರು. ಅದ್ಕೇ ಗಂಟಿ ಅಂತ ಹೆಸರಿಟ್ಕಂಡಾರೆ. ನಾವು ಕರ್ನಾಟಕದಾಗೆ ದಿನಾ ಇಂಥವರನ್ನ ಕಾಣ್ತೀವಿ. ಸಿದ್ಧರಾಮಯ್ಯನವರ ಕೋಟಾದಾಗೆ ಇರ್ಬೇಕ್ರಿ. ಅದ್ಕೆ ಕರ್ಕಂಡು ಬಂದಾರೆ. ಆ ಸಿದ್ಧರಾಮಪ್ಪನೂ ಹಾಂಗಾ. . . ಅವರು ಹೀಂಗೆ ರಾಜಕಾರಣ ಜಾತಿ, ಹಿಂದಿ ಮಾತಾಡಿದ್ರು ಅಂದರ, ಏನೂ ಆಶ್ಚರ್ಯ ಅಲ್ಲ ಬಿಡ್ರಿ.

**ವಾಪಿಯಿಂದ ಬಂದಾಕೆ:** ಬಿಡಿ ಅದೆಲ್ಲಾ ಪುರಾಣ ಏಕೀಗ. ಆ ಮಕ್ಕಳು ಡಾನ್ಸ್ ಮಾಡಿದ್ರಲ್ಲಾ, ಗೋವಿನ ಕಥೆ, ನನಗಂತೂ ಅಳು ಬಂತು. ಅಷ್ಟು ಚೆನ್ನಾಗಿ ಮಾಡಿದ್ರು.

**ಸಿದ್ಧ:** ನೋಡಿದ್ರಾ ಆ ಬೇಕಿದ್ದು – ಬ್ಯಾಡದೇ ಇದ್ದ ಮಾತೆಲ್ಲಾ ಕೇಳಿ ತಲೆ ಚಿಟ್ಟು ಹಿಡಿದಿತ್ತೀರಿ. ಆ ಹುಡುಗ್ರು ಮಾಡಿದ ನಾಟಕ ನೋಡಿದ ಮ್ಯಾಗೆ ಮನಸ್ಸು ಹಗೂರ ಆತು.

**ಧಾರವಾಡದವರು:** ಆ ಮಕ್ಕಳೆಲ್ಲಾ ಜಾನಪದ ಕುಣಿತ ಹ್ಯಾಂಗ ಮಾಡಿದ್ರು. ಕರ್ನಾಟಕದಾಗೇ ಅಷ್ಟು ಚಲೋ ಮಾಡಾದಿಲ್ಲ. ನೀವು ಮುಂಬೈನವರೆಲ್ವಾ. ನೀವು ಈಸು ಚಲೋ ಕನ್ನಡ ಮಾತಾಡಾದು ಕೇಳಿದ್ರೆ ನಮಗೇ ಅಂಜಿಕೆಯಾಗ್ತದ್ರೀ. ನೀಮು ವಾಪಿಯಿಂದ ಬಂದಿರೇಣು? ನೀವೂ ಹೀಂಗ ಕಾರ್ಯಕ್ರಮ ಮಾಡ್ತೀರಿ?


**ವಾಪಿಯಿಂದ ಬಂದಾಕೆ:** ಹೌದು. ಪ್ರತಿತಿಂಗಳು ನಾವು ಏನಾದ್ರೂ ಒಂದು ಕಾರ್ಯಕ್ರಮ ಮಾಡ್ತೀವಿ. ಎಲ್ಲಾ ಕನ್ನಡ ಜನ ಒಂದಾಗ್ತೀವಿ.

**ಚಂದ್ರು:** ನಾನ್ಹೀಗೆ ಅಂತೀನಿ ಅಂತ ಬೇಸರ ಮಾಡ್ಬೇಡಿ. ಈ ಒಳನಾಡಿನಿಂದ ಪ್ರತಿನಿಧಿಗಳೆಲ್ಲಾ ಉದ್ಘಾಟನೆ ಆದ ಮೇಲೆ ಗಾಯಬ್. ಎಲ್ಲರೂ ಸಾಹಿತ್ಯ ಕೇಳೋಕಿಂತ, ಮುಂಬೈ ಪ್ರವಾಸ ಬಂದವ್ರ ಹಾಗೆ ಕಾಣ್ತಾರಲ್ಲ

**ಒಳನಾಡಿನವರು:** ನನ್ನ ಮಟ್ಟಿಗೆ ನಾನು ಈ ಸಮಾವೇಶ ನೋಡೋಕೆ ಕೇಳೋಕೆ ಬಂದಿದೀನಿ. ಬೇರೆಯವರು ಡೆಲ್ಲಿಲ್ಲೂ ಹಾಗೇ ಮಾಡಿದ್ರು. ಇಲ್ಲೂ ಹೀಗೆ ಮಾಡ್ತಾರೆ. ಆದರೆ ಅವರನ್ನ ಬೈಯೋದು ತಪ್ಪು. ಕೇಳಿದ್ದೇ ಕೋಳೋಕೆ ಎಲ್ಲರಿಗೂ ಬೇಸರವಾಗುತ್ತೆ. ನೀವೇ ಹೇಳಿ ಈಸಮಾವೇಶದಲ್ಲಿ ಮೂರು ಜನ ಬಿಟ್ರೆ, ಈ ಮಕ್ಕಳು ಕುಣಿಯೋದು ಬಿಟ್ರೆ, ಮಿಕ್ಕವರೆಲ್ಲಾ ಸಾಹಿತ್ಯ ಬಿಟ್ಟು ಬೇರೆಯೇ ಹರಟಿದ್ರು. ಯಾರು ಕೂತು ಕೇಳ್ತಾರೆ. ಆದರೆ ಮುಂಬಯಿನವರಿಗೆ ಹ್ಯಾಟ್ಸ್ ಆಫ್. ಏನು ಸಡಗರದಿಂದ ಹುಮ್ಮಸ್ಸಿಂದ ನೀವೆಲ್ಲಾ ಓಡಾಡ್ತಾ ಇದೀರ. ಯಾರೋ ಅವರಿಗೆ 80 ವಯಸ್ಸು ಅಂದರು., ಅವರೇ ಜಿಂಕೆ ಮರಿಹಾಗೆ ಅಲ್ಲಿ ಇಲ್ಲಿ ಓಡಾಡಿ ಎಲ್ಲಾರನ್ನೂ ನೋಡ್ಕೋತಾ ಇರೋ ಅಭಿಮಾನ ಕಂಡರೆ ನಮಗೆ ಅಳುಕುತ್ತೆ. ಪ್ರತಿ ಸಂಘದವರೂ ಒಂದೊಂದು ತಮ್ಮದೇ ಮಾಸಪತ್ರಿಕೆ ಹೊರಡಿಸ್ತೀರಿ ಅಂದರೆ, ಚಿಕ್ಕ ಕೆಲಸನಾ? ಯಾರೋ ಹೇಳಿದ್ರು, ಮುಂಬಯಿನಲ್ಲಿ ಪ್ರತಿ ವರ್ಷ, 800 ರಿಂದ ಸಾವಿರ ತನಕ ಕನ್ನಡ ಪುಸ್ತಕ ಬಿಡುಗಡೆ ಆಗುತ್ತೇಂತ ನನಗೆ ತೃಪ್ತಿ ತಂದಿದೆ.

**ಮುಂಬೈ:** ಎಲ್ಲಾ ಬನ್ನಿ ಒಳಗೆ. ಅಪ್ಪಗೆರೆ ತಿಮ್ಮರಾಜು ಅವರು ಹಾಡೋಕೆ ಶುರು ಮಾಡಿದಾರೆ. ●


## CONDOLENCE



Shri. B. G. Navile, as he was know, was a life member of the Mysore Association since a long time. Being the Son of Shri. B. G. Achar (Garudachar) and staying just across Mysoe Association on Bhau Daji Road in Vishvwadeep's Bldg., one can say Navile almost grew up in Mysore Association. While he was quite popular and active in late 50's and early 60's with Job and family responsibilities, his attendance at Association had become restiricted to attending music functions with his wife Kantamami. He was a music lover and attend Karnatic Music concerts.

In his sad demise, the Association has lost a good friend. He passed away on 23.01.2018 in Mumbai. Nesaru offers heartfelt condolences to the bereaved family.

## ಅಗಲಿಕೆ




ಮೈಸೂರು ಅಸೋಸಿಯೇಷನ್ನಿನ ಅಧ್ಯಕ್ಷರಾದ ಶ್ರೀಮತಿ ಕಮಲರವರ ಪೂಜ್ಯ ತಂದೆಯುವರಾದ ಶ್ರೀ. ಕಾಂತರಾಜ್‌ರವರು ಫೆಬ್ರವರಿ 27ನೇ ದಿನಾಂಕದಂದು ನಮ್ಮೆಲ್ಲರನ್ನು ಅಗಲಿದ್ದಾರೆ.

ಕಾಂತರಾಜ್‌ರವರು ಮೂಲತಃ ತುಮಕೂರು ಜಿಲ್ಲೆಯ ಕಡಬದವ ರಾಗಿದ್ದು, ಬೆಳೆಯುವ ದಿನಗಳನ್ನು ಶ್ರೀರಂಗಪಟ್ಟಣ, ಹಾಸನ, ಮತ್ತು ಕೆ. ಆರ್. ಪೇಟೆಯಲ್ಲಿ ಕಳೆದರು. 37 ವರ್ಷಗಳು ಸುದೀರ್ಘ ಸೇವೆಯನ್ನು ಪೋಲೀಸ್ ಇಲಾಖೆಯಲ್ಲಿ ಸಲ್ಲಿಸಿ, ವೃತ್ತ ನಿರೀಕ್ಷಕರಾಗಿ 1994 ರಲ್ಲಿ ನಿವೃತ್ತಿ ಹೊಂದಿದವರು. ತಮ್ಮ ಸೇವಾ ಅವಧಿಯನ್ನು ತುಮಕೂರು, ಕೋಲಾರ ಹಾಗೂ ಬೆಂಗಳೂರು ಜಿಲ್ಲೆಗಳಲ್ಲಿ ಸಲ್ಲಿಸಿರುತ್ತಾರೆ. ಮೃತರು ತಮ್ಮ ಕುಟುಂಬ ವರ್ಗದಲ್ಲಿ ಪತ್ನಿ, ಪುತ್ರಿಯರು, ಪುತ್ರ ಹಾಗೂ ಮೊಮ್ಮಗಳನ್ನು ಅಗಲಿದ್ದಾರೆ. ದೇವರು ಅವರ ಆತ್ಮಕ್ಕೆ ಶಾಂತಿಯನ್ನು ಕರುಣಿಸಲಿ ಎಂದು ಅಸೋಸಿಯೇಷನ್ ಪ್ರಾರ್ಥಿಸುತ್ತದೆ.

ಶ್ರೀ

# ದೇವರು



✍ ಜಿ.ವಿ.ರಾವ್

ಸಾವಿರಾರು ವರ್ಷಗಳ ಹಿಂದೆಯೇ ಮಾನವರಿಗೆ ದೇವರ ಬಗ್ಗೆ ಹೆಚ್ಚು ತಿಳುವಳಿಕೆ ಇತ್ತು. ಮೊದಲಿಗೆ ಭೂಮಿ, ನೀರು, ಬೆಂಕಿ, ಗಾಳಿ ಹಾಗೂ ಆಕಾಶಗಳ ಶಕ್ತಿಯನ್ನು ಗಮನಿಸಿ ಅವುಗಳನ್ನೇ ದೇವರು ಎಂದು ಭಾವಿಸಿದ್ದರು. ಕ್ರಮೇಣ ತನ್ನ ಜ್ಞಾನೇಂದ್ರಿಯಗಳು, ಕರ್ಮೇಂದ್ರಿಯಗಳು, ಜೀರ್ಣಾಂಗಗಳು, ಹಾಗೂ ಬುದ್ಧಿ ಸೂಕ್ಷ್ಮತೆಗಳಲ್ಲಿ ಪರಮಾತ್ಮನಿರುವಿಕೆಯನ್ನು ಕಂಡರು. ಆಮೇಲೆ ಸಪ್ತ ಪಾತಾಳಗಳು, ಸಪ್ತ ಊರ್ಧ್ವಲೋಕಗಳು, ಬ್ರಹ್ಮಾಂಡದಲ್ಲಿ ಆಗಿಹೋಗುವ ಕಾರ್ಯಗಳನ್ನೂ ಗಮನಿಸಿದರು. ಅಲ್ಲದೆ ನಾಲ್ಕು ವೇದಗಳು, ಪುರಾಣಗಳು, ಪುಣ್ಯಕಥೆಗಳಲ್ಲಿ ದೇವರ ಮಹಿಮೆಯನ್ನು ಕೊಂಡಾಡಿದ್ದಾರೆ.

ಭಾರತ ದೇಶಕ್ಕೆ ಪರಕೀಯರ ಅಕ್ರಮಣದ ನಂತರ, ಇಲ್ಲಿನ ಜನಸಾಮಾನ್ಯರಿಗೆ ದೇವರ ಬಗ್ಗೆ ಸರಿಯಾದ ತಿಳುವಳಿಕೆ ಕಡಿಮೆ ಆಗುವ ಸಮಯ ಬಂದಿತು.


ಆದರೆ ನೂರು ವರ್ಷಗಳ ಹಿಂದೆ ಮ್ಯಾಕ್ಸ್ ಮುಲ್ಲರ್ ಎಂಬ ಜರ್ಮನ್ ನಿವಾಸಿ ಸಂಸ್ಕೃತದಲ್ಲಿದ್ದ ಋಗ್ವೇದವನ್ನು ಇಂಗ್ಲೀಷಿಗೆ ಅನುವಾದಿಸಿದನು.

ಸ್ವಾಮಿ ಚಿನ್ಮಯಾನಂದರು ಸುಮಾರು 70 ವರ್ಷಗಳ ಹಿಂದೆ ಭಗವದ್ಗೀತೆ, ಉಪನಿಷತ್, ಬ್ರಹ್ಮಸೂತ್ರ ಇತ್ಯಾದಿಗಳ ಬಗ್ಗೆ ಇಂಗ್ಲೀಷ್‌ನಲ್ಲಿ ವಿವರಿಸಿದರು. ಜಃಜಜ ಪುಸ್ತಕಗಳನ್ನು ಪ್ರಕಟಿಸಿದರು. ಈಗ ವೇದಗಳ ಸಾರವು 17 ಭಾಷೆಗಳಲ್ಲಿ ಹೊರಬಂದಿದೆ.

ದೇವರು ಯಾರು?

ಪ್ರತಿಯೊಂದು ಅಣು (Atom) ವಿನೊಳಗೂ ಇದ್ದು ಅದರಲ್ಲಿರುವ Electrons ಹಾಗೂ Proton ಗಳನ್ನು ವೇಗವಾಗಿ ಓಡಿಸಿ; ಪ್ರತಿಯೊಂದು ಜೀವಿಯಲ್ಲೂ ಇದ್ದು ಚಿ ಜ ಜ ಅಂಗಾಂಗಗಳನ್ನು ಚಲಿಸುವಂತೆ ಮಾಡುತ್ತಾ; ಪ್ರತಿಯೊಂದು ಹೂವಿನಲ್ಲೂ ಮಕರಂದವನ್ನು ತಂದಿರಿಸಿ ಕೋಟ್ಯಾಂತರ ವರ್ಷಗಳಿಂದ ಬ್ರಹ್ಮಾಂಡವನ್ನು ನಡೆಸುತ್ತಿರುವವನೇ ದೇವರು.

ದೇವರ ವೈಶಿಷ್ಟ್ಯವೇನು, ಪರಮಾತ್ಮನ 65 ಎಷ್ಟು ವಿಧಗಳದ್ದು ಎಂದು ಯೋಚಿಸಿದಾಗ ಸೂರ್ಯನಿಂದ ಹೊರಟು ಬರುತ್ತಿರುವ ಕಿರಣಗಳ ಸಂಖ್ಯೆ ಎಷ್ಟು ಎಂದು ಕೇಳಿದರೆ Infinite (ಅನಂತ, ಅಪಾರ, ಅಪರಿಮಿತ, ಅಗಣಿತ) ಎಂದಂತೆ.



ಆದರೂ ದೇವರನ್ನು ಹೀಗೆ ಬಣ್ಣಿಸಬಹುದು.

| | | | |
|---|---|---|---|
| ಅಗೋಚರ | – Invisible | ಪ್ರಚೋದಕ | – Catalyst |
| ಅಜೇಯ | – Invincible | ಸರ್ವ ವ್ಯಾಪಿ | – Omnipresent |
| ಸರ್ವಜ್ಞ | – Omniscient | ಸರ್ವಶಕ್ತ | – Omnipotent |
| ನಿರಂತರ | – Everlasting | | |

ದೇವರ ಲಿಂಗ ಯಾವುದು?

ವಿದ್ಯುಚ್ಛಕ್ತಿಯಂತಿರುವ ಶಕ್ತಿಯು ಯಾವ ಲಿಂಗದ್ದು?

ದೇವರಿಗೆ ಲಿಂಗದ ಗುರುತುಗಳು ಕಾಣುವುದಿಲ್ಲ. ವೇದಗಳಲ್ಲಿ ದೇವರನ್ನು ನಿರಾಕಾರ ಬ್ರಹ್ಮನೆಂದು, ಶಕ್ತಿಯನ್ನು ಸ್ತ್ರೀ ಲಿಂಗ ರೂಪಿ ಎಂದೂ, ಶಕ್ತಿ ಪ್ರೇರಕ (Promoter) ನನ್ನು ಪುಲ್ಲಿಂಗ ರೂಪಿ ಎಂದೂ, ನಿರ್ದಿಷ್ಠ ಕಾರ್ಯವನ್ನು ಮಾಡುವ ದೇವರುಗಳನ್ನು ಸಾಕಾರ ಬ್ರಹ್ಮರೆಂದು ಸೂಚಿಸಿರುವರು.

ಪರಮಾತ್ಮನ ಶಕ್ತಿಗಳನ್ನು ಮೇಲೆ ಕಾಣುವ ಶ್ರೀ ಚಕ್ರದಲ್ಲಿ ಕಾಣುತ್ತೇವೆ. ನಿರಾಕಾರ ಬ್ರಹ್ಮವನ್ನು ಓಂ ಎಂದು ಕರೆದಿದ್ದಾರೆ.

ಸಾಕಾರ ಬ್ರಹರಿಗೆ ಅವರವರ ಶಕ್ತಿಯೊಡನೆ ವಿವಾಹವಾಗಿರುವುದು. (ಉದಾ. ಶ್ರೀನಿವಾಸಕಲ್ಯಾಣ) ಕಂಡು ಬರುತ್ತದೆ. ಆದರೆ, ದತ್ತಾತ್ರೇಯರಿಗೆ ವಿವಾಹವಾಗಿಲ್ಲವೆಂದೂ, ಅವರು ಯಾವ ಕಾಲಕ್ಕೂ ಇರುವರೆಂದು ಹೇಳಲಾಗಿದೆ, ಸಾಕಾರ ಬ್ರಹ್ಮರನ್ನು ವಿಶ್ವರೂಪ ದರ್ಶನ ಚಿತ್ರದಲ್ಲಿ ಕಾಣಬಹುದು.

ಪ್ರತಿಯೊಬ್ಬರಲ್ಲೂ ದೇವರು ಇದ್ದಾನೆ. ಅವರವರಿಗೆ, ಅವರವರ ಮನಸ್ಸಿನಲ್ಲಿ ಕಾಣುವ ರೂಪವೇ ದೇವರ ರೂಪ. ಪ್ರಪಂಚದಲ್ಲಿ Technology ಸಾವಿರಾರು ಜನರಿಗೆ ದೇವರು ಸಾವಿರಾರು ರೂಪದಲ್ಲಿ ಕಂಡುಬರುತ್ತಾನೆ. ಎಲ್ಲವೂ ಸರಿಯಾದುದೇ. ಇನ್ನೂ ಹೊಸರೂಪ ನಾಮಗಳು ದೇವರಿಗೆ ಬರುವ ಸಾಧ್ಯತೆ ಇದೆ.

ಮನುಷ್ಯ ಬದುಕುವುದಕ್ಕೆ ತನಗೆ ತಿಳಿದ ವ್ಯಕ್ತಿಗಳನ್ನು ಅವಲಂಬಿಸಿ, ಹಣ ಸಂಪಾದಿಸಿ ಜೀವನ ಮಾಡುವುದು ಸಹಜ. ವೃತ್ತಿಯು ಸಾವಿರಾರು ತರಹದ್ದಾಗಿರಬಹುದು. ಉದಾ:– ಉಪಾಧ್ಯಾಯ, ವೈದ್ಯ, ಇಂಜಿನಿಯರ್, ವಕೀಲ ತಾನೇ ಶ್ರೇಷ್ಠ ಅಂದುಕೊಂಡು, ಇತರ ವೃತ್ತಿಗಳ ಜನ ಪೆದ್ದರು ಅನ್ನುವುದಾದರೆ ಮನಸ್ತಾಪಕ್ಕೆ ಆಸ್ಪದ ಕೊಟ್ಟು, ಶಾಂತಿಯನ್ನು ಕೆಡಿಸುತ್ತದೆ.

ಅದೇ ರೀತಿ ಹೋಟೇಲ್‌ಗೆ ಹೋದಾಗ ಒಬ್ಬ ಮಸಾಲೆ ದೋಸೆ, ಮತ್ತೊಬ್ಬ ರವೆ ಇಡ್ಲಿ ಇತ್ಯಾದಿ ಅಪೇಕ್ಷಿಸಿ ಸಂತೋಷವಾಗಿರುತ್ತಾರೆ. ಒಬ್ಬ ಇನ್ನೊಬ್ಬನ ಆಸೆ ಸರಿಯಲ್ಲ ಎಂದು ಹೇಳಿದಾಗ, ಇಬ್ಬರಿಗೂ ಶಾಂತಿ ಭಂಗವಾಗುತ್ತದೆ.

ಹಾಗೆಯೇ ಒಬ್ಬ ಸೂರ್ಯನ ಕೆಲಸವನ್ನು ಶ್ಲಾಘಿಸುವ ಸಾಧ್ಯತೆ ಇದ್ದರೆ, ಬೇರೆಯವನಿಗೆ ಮಳೆಯಿಂದಾಗುವ ಉಪಕಾರ ಶ್ರೇಷ್ಠವಾಗಿ ಕಾಣಬಹುದು. ಮಳೆಯಂತೆ, ಬೆಳೆ, ಗಿಡಗಳು, ಪಂಚಭೂತಗಳು, ತನ್ನ ಕುಶಲತೆ ಬುದ್ಧಿ ಶಕ್ತಿ ಇತ್ಯಾದಿ ವಿಷಯಗಳು ಸಾವಿರಾರು ಇವೆ. ಇಲ್ಲಿಯೂ ಸಹ ಒಬ್ಬನು ಇತರರೊಂದಿಗೆ ಜಗಳವಾಡಿದರೆ ಸುಖವಿಲ್ಲ.

ಸಾರಾಂಶವೇನೆಂದರೆ ಪ್ರತಿಯೊಬ್ಬ ವ್ಯಕ್ತಿಯೂ ತನ್ನದೇ ಆದ ವಿಶಿಷ್ಟಗುಣ, ಆಸೆ, ಮಾರ್ಗ, ನಡೆ, ನುಡಿ ಇತ್ಯಾದಿಗಳನ್ನು ಹೊಂದಿರುತ್ತಾನೆ. ಅದನ್ನು ಬದಲಾಯಿಸುವ ಅಗತ್ಯವಿಲ್ಲ ಹಾಗೂ ಸಾಧ್ಯವಿಲ್ಲ. ಎಲ್ಲರೂ ಸಂತೋಷದಿಂದ ಬದುಕ ಬೇಕಾದರೆ ಅವರವರು, ಅವರವರ ವಿಚಾರದಂತೆ ನಡೆಯುವುದು

ಅಗತ್ಯ ಅಂತೆಯೇ ದೇವರ ವಿಚಾರದಲ್ಲೂ ತಮ್ಮ ನಂಬಿಕೆಯಂತೆ ನಡೆಯಬೇಕು.

ಆದಿ ಶಂಕರಾಚಾರ್ಯರು ನಿರಾಕಾರ ಬ್ರಹ್ಮನ ವೈಶಿಷ್ಟ್ಯವನ್ನು ಪ್ರಶಂಸಿದರೆ, ರಾಮಾಜುಜಾಚಾರ್ಯರು ನಿರಾಕಾರ ಬ್ರಹ್ಮನನ್ನು ಶ್ಲಾಘಿಸಿ, ಇತರ ವಿವಿಧ ಸಾಕಾರ ಬ್ರಹ್ಮದಲ್ಲಿರುವ ಮೂಲ ವಿಶಿಷ್ಟ ಶಕ್ತಿಯನ್ನು ಕಂಡು ತಿಳಿಸಿರುವರು. ಮಧ್ವಾಚಾರ್ಯರು ಸಾಕಾರಬ್ರಹ್ಮರ ತಾರತಮ್ಯವನ್ನೂ ಕಾಣಿಸಿರುವರು.

ಒಟ್ಟಾರೆ, ಪರಮಾತ್ಮನನ್ನು ಮೂವರು ಆಚಾರ್ಯರೂ ಕೊಂಡಾಡಿದ್ದಾರೆ. ಮಾನವನು ತನಗೆ ಯಾವ ದೇವರು ಹಿತವೆಂದು ಕಾಣುತ್ತಾನೊ ಆ ದೇವರನ್ನು ಪ್ರಾರ್ಥಿಸುತ್ತಾ ಮುಂದುವರೆದರೆ ಹಿತ, ಬೇರೆಯದರ ಬಗ್ಗೆ ಯೋಚಿಸಲು ಪ್ರಾರಂಭಿಸಿದಾಗ ತನ್ನ ಮನಃ ಶಾಂತಿ ಕೆಡುತ್ತದೆ.

ಪ್ರತಿಯೊಬ್ಬರೂ ದಿನವಹಿ ಸ್ವಲ್ಪ ಸಮಯ ಪರಮಾತ್ಮನನ್ನು ಚಿಂತಿಸಿ, ಶಾಂತಚಿತ್ತರಾಗಿ ಬದುಕುವುದು ಮುಖ್ಯ ಅವರ ಅನುಭವವನ್ನು ಮುಂದಿನ ಪೀಳಿಗೆಗೆ ತಿಳಿಯಪಡಿಸಿದಾಗ, ಕಿರಿಯರಿಗೂ ಅನುಭವ ಉಂಟಾಗುತ್ತದೆ. ಮನುಷ್ಯ ಮುಂದಾಲೋಚನೆ, ಮನೋಧೈರ್ಯ, ವಿವೇಕ, ವೈರಾಗ್ಯಗಳನ್ನು ಆದಷ್ಟು ಬೇಗ ಪಡೆಯಬೇಕು.

ಪರಮಾತ್ಮ: ಪರಮಾತ್ಮನ ಬಗ್ಗೆ ಮನುಷ್ಯರು, ತಿಳಿವಳಿಕೆ ಬಂದಾಗಿನಿಂದ ಪರಿಸರದಲ್ಲಿ ಸಾಮಾನ್ಯವಾಗಿ ಕಾಣುವ ವಿಚಾರ ಅಂದರೆ, ರಾತ್ರಿ–ಹಗಲು; ಸೂರ್ಯ/ಚಂದ್ರ/ನಕ್ಷತ್ರ; ಮೋಡ/ಮಳೆ/ಬೆಳೆ/; ಬೆಂಕಿ/ಗಾಳಿ; ಶೀತ/ಉಷ್ಣ; ಹುಟ್ಟು/ಸಾವು; ಇತ್ಯಾದಿ ಇವುಗಳನ್ನು ಅನುಭವಿಸಿ, ಅವುಗಳಾಗುವುದಕ್ಕೆ ಕಾರಣಗಳನ್ನು ಕಂಡುಹಿಡಿಯುವ ಪ್ರಯತ್ನ ಸಾವಿರಾರು ವರ್ಷಗಳ ಹಿಂದಿನಿಂದ ನಡೆಸುತ್ತಿದ್ದಾರೆ.

ಪುರಾತನರು ತಮ್ಮ ಒಳಗೆ ಆಗುವ ಕಾರ್ಯಕ್ರಮಗಳ (ಭಯ / ಭಕ್ತಿ; ಸಂತೋಷ/ಸುಖ; ಮರವು/ಜ್ಞಾಪಕ ಶಕ್ತಿ; ಆಸೆ/ನಿರಾಶೆ; ಉತ್ಸಾಹ/ ಸೋಮಾರಿತನ;) ಅನುಭವವನ್ನು ಗಮನಿಸಿ ಅವುಗಳಿಗೆ ಕಾರಣ ಕಂಡು ಹಿಡಿಯಲು ಮಾಡಿದ ಪ್ರಯತ್ನ ಅದ್ಭುತವಾಗಿದೆ. ಚೈನಾದಲ್ಲಿ ಲಾವ್‌ಕ್ಸೆ; ಇರಾನ್‌ನಲ್ಲಿ ಸೊರೊಅಸ್ತರ್; ಇಸರೇಲ್‌ನಲ್ಲಿ ಪ್ರೊಪ್‌ಗಳು; ಭಾರತದಲ್ಲಿ ಉಪನಿಷದ್ ಕಾಲದ ಋಷಿಗಳು, ಅಲ್ಲದೆ ಪೈಥಾಗರಸ್, ಸಾಕ್ರಟಿಸ್, ಪ್ಲೇಟೋ ತರಹಾ ಮಹಾತ್ಮರುಗಳು ನಮ್ಮ ಬದುಕಿಗೆ ಮಾರ್ಗದರ್ಶನ ಮಾಡಿದ್ದಾರೆ.

ಎಲ್ಲಾ ಮಹನೀಯರು ಮಾಡಿದ ಪ್ರಯತ್ನ ಪರಮಾತ್ಮನ (ಆದಿಶಕ್ತಿಯ) ಬಗ್ಗೆ. ಅವರವರಿಗೆ ತೋಚಿದ ಅನುಭವಗಳನ್ನು ಅವರವರ ಭಾಷೆಯಲ್ಲಿ ವಿವರಿಸುವರು. ಆ ಅಭಿಪ್ರಾಯಗಳು ಅವರವರ ಜೊತೆಯಲ್ಲಿದ್ದ ಜನರಿಗೆ ಅರ್ಥವಾಗಿರುವುದರಲ್ಲಿ ಅನುಮಾನವಿಲ್ಲ. ಆದರೆ ಆ ಭಾಷೆಗಳೆ ಇಂದು ಇಲ್ಲದಿರಬಹುದು. ಇಂದು, ಹೊಸ ಅನುಭವಗಳಿಂದ ಅಂದಿನ ಅಭಿಪ್ರಾಯಗಳು ಹೊಸ ರೂಪ ತಾಳೀರಬಹುದು. ಏನೇ ಆದರೂ ಪರಮಾತ್ಮನಲ್ಲಿ ವ್ಯತ್ಯಾಸಗಳಿಲ್ಲ.

ಇಂದಿನ ಪರಿಸ್ಥಿತಿಯು – ಹಿಂದೆ 1180 ಉಪನಿಷತ್‌ಗಳ ಮೂಲಕ ಪರಮಾತ್ಮನನ್ನು ಅಂತರ್ದೃಷ್ಟಿಯಿಂದ ಕಾಣುತ್ತಿದ್ದ ಕಾಲ ಇತ್ತು. ಈಗ ಕೇವಲ 108 ಉಪನಿಷತ್‌ಗಳು ಕಾಣಿಸುತ್ತಿವೆ. ಅದರಲ್ಲೂ, 16 ಪ್ರಮುಖ ಉಪನಿಷತ್ (ಈಶ, ಕೇನ, ಕಠ, ಐತರೀಯ, ಬೃಹದಾರಣ್ಯಕ, ಪ್ರಶ್ನ, ಮಾಂಡೂಕ್ಯ, ತೈತ್ರರೀಯ, ಛಾಂದೋಗ್ಯ, ಮುಂಡಕ, ಶ್ವೇತಾಶ್ವರ, ಕೈವಲ್ಯ, ಮಹಾನಾರಾಯಣ, ಜೌಬಾಲ, ಕೌಶಿತಃಕಿ ಮತ್ತು ಮೈತ್ರಯಾಣೀ) ಮತ್ತು (2) 92 ಸಾಮಾನ್ಯ ಉಪನಿಷತ್‌ಗಳು ಉಳುದುಕೊಂಡೀವೆ ಎಂದು ಕೆಲವರ ಅಭಿಪ್ರಾಯ.

ಮಗುವು ಮುದುಕನಾಗುವುದರಲ್ಲಿ, ಅದರ ವಯಸ್ಸಿಗೆ ತಕ್ಕಂತೆ ಬುದ್ಧಿ ಬೆಳವಣಿಗೆ ಆಗಬೇಕು. ಸಮಯಕ್ಕೆ ತಕ್ಕಂತೆ ಪರಮಾತ್ಮನ ಇರುವನ್ನು ಸೂಚಿಸಿದರೆ ಅನುಕೂಲವಾಗುವುದೂ ಸಹಜ. ಪುರಾಣ, ಪುಣ್ಯಕಥೆ, ಸಂಗೀತ, ಹರಿಕಥೆ, ನಾಟಕ, ಸಂಭಾಷಣೆ, ಪ್ರವಚನ, ಪವಾಡಗಳ ಮೂಲಕ ಪರಮಾತ್ಮನ ಬಗೆ ತಿಳಿವಳಿಕೆ ಪಡೆಯುವ ಸಾಧ್ಯತೆ ಇದೆ.

ನಿರಾಕಾರ ಬ್ರಹ್ಮ:– ಎಲ್ಲೆಲ್ಲು (ಅಸಂಖ್ಯಾತ ಜಾಗಗಳಲ್ಲಿ) ನೆಲೆಸಿರುವ; ಎಲ್ಲಾ ಕೆಲಸಗಳನ್ನೂ ಮಾಡಿಸುತ್ತಿರುವ, ತ್ರಿಕಾಲದಲ್ಲೂ ಇರುವ; ಅಗೋಚರವಾದ; ವಿರೋಧಿ ಇಲ್ಲದಿರುವ; ಲಿಂಗಾತಿತ; ಅಂಗಾತೀತ; ಅಸಂಖ್ಯಾತ ಶಕ್ತಿ ಪಡೆದಿರುವ; ನಿಪುಣ ಅಸ್ತಿತ್ವ. ಸಾಕಾರ ಬ್ರಹ್ಮ: ಬ್ರಹ್ಮಾಂಡವನ್ನು ಸ್ಥಾಪಿಸಲು ನಡೆಸಲು; ಮೇಲ್ವಿಚಾರಣೆ ಮಾಡಲು; ತಪ್ಪು ದಾರಿಗೆ ಹೋದಾಗ ತಿದ್ದಲು ಬೇಕಾಗುವ ಸಹಾಯಕರೇ ಸಾಕಾರ ಬ್ರಹ್ಮರು. ಸೃಷ್ಟಿ, ಸ್ಥಿತಿ, ಲಯಕ್ಕೆ ಬ್ರಹ್ಮ, ವಿಷ್ಣು, ಮಹೇಶ್ವರರು ಇದ್ದಾರೆ. ಅವರನ್ನು ಪುರುಷರೆಂದೂ ಅವರುಗಳಲ್ಲಿರುವ ಶಕ್ತಿಯನ್ನು ಅವರ ಪತ್ನಿಯರೆಂದೂ ಭಾವಿಸಲಾಗಿದೆ.

ಪ್ರಳಯ: ನಿರಾಕಾರ ಬ್ರಹ್ಮವು ತನ್ನ ಶಕ್ತಿಗಳನ್ನು ಉಪಯೋಗಿಸಿಕೊಂಡು, ಸಾಕಾರ ಬ್ರಹ್ಮರ ರೂಪತಾಳಿ ಬ್ರಹ್ಮಾಂಡದ ಸೃಷ್ಟಿ. ಸ್ಥಿತಿ, ಲಯದ ಕಾರ್ಯಕ್ರಮ ನಡೆಸುವುದಕ್ಕೆ ಕಾರಣ. ತನ್ನ ಇರವು ಎಲ್ಲೆಲ್ಲೂ ಪ್ರಜ್ವಲಿಸಬೇಕೆನ್ನುವ ಆಸೆ. ಆ ಆಸೆ ಪೂರೈಸಿದ ಮೇಲೆ; ತನ್ನ ಸಾಕಾರ ಬ್ರಹ್ಮಗಳ ರೂಪದ ಅವಶ್ಯಕತೆ ಇರುವುದಿಲ್ಲ. ಆದ ಕಾರಣ, ನಿರಾಕಾರ ಬ್ರಹ್ಮ ತನ್ನ ಎಲ್ಲಾ ಶಕ್ತಿಗಳನ್ನೂ ಅಡಗಿಸಿ (ಇಂಗಿಸಿ)ಕೊಳ್ಳುವ ಸಮಯವೇ ಪ್ರಳಯಕಾಲ.

ಋಷಿಗಳಿಗೂ ದೇಹ ವಾಸನೆ ಇದ್ದ ಸಮಯದಲ್ಲಿ, ಭೃಗು ಮುನಿಗಳು ಬ್ರಹ್ಮಶಿವ, ವಿಷ್ಣು ಲೋಕಗಳಿಗೆ ಹೋಗಿ ಅಲ್ಲಿಯೂ ಸಾಕಾರ ಬ್ರಹ್ಮರ ದರ್ಶನವಾದ ನಂತರ, ಪ್ರಕೃತಿ (ಲಕ್ಷ್ಮೀ)ಯನ್ನು ಭೇದಿಸಿ ನಿರಾಕಾರದ ರೂಪ – ಶ್ರೀನಿವಾಸನ ದರ್ಶನ ಪಡೆದರು. ಅಂದರೆ ಆವಾಗ ಭೃಗು ಮುನಿಗಳಲ್ಲಿದ್ದ ದೇಹ ವಾಸನೆಯೂ ಕ್ಷಯಿಸಿ, ಅವರಿಗೆ ಮನಸ್ಸಿನಲ್ಲಿ ಶಾಂತಿ ದೊರೆಯಿತು.

ಸರಸ್ವತೀ, ಲಕ್ಷ್ಮೀ, ಪಾರ್ವತೀ (ಬ್ರಹ್ಮ ವಿಷ್ಣು ಮಹೇಶ್ವರರ ಶಕ್ತಿ)ಗಳಿಗೆ ತಾವೇ ಶ್ರೇಷ್ಠ. ತಮ್ಮಿಂದಲೇ ಎಲ್ಲಾ ಕೆಲಸಗಳೂ ನಡೆಯುತ್ತಿವೆ ಎನ್ನುವ ಭಾವನೆ ಇದ್ದಾಗ, ತ್ರಿಮೂರ್ತಿಗಳನ್ನು ದೇವಿ ಅನಸೂಯದೇವಿಯ ಬಳಿ ಕಳುಹಿಸಿ; ಅವರಿಂದ ನಿರಾಕಾರ ಬ್ರಹ್ಮಕ್ಕೂ ಸಾಕಾರ ಬ್ರಹ್ಮಕ್ಕೂ ಇರುವ ವ್ಯತ್ಯಾಸ; ಅವರುಗಳ ಮಧ್ಯ ಇರುವ ತೆರೆ (ಪರದೆ–ವಸ್ತ್ರ) ಯನ್ನು ಕಂಡು, ನಿರಾಕಾರ ಬ್ರಹ್ಮದ ಅರಿವು ಪಡೆದರು. ಅಂದರೆ ಅವರಿಗಿದ್ದ ಶಾಸ್ತ್ರವಾಸನೆಗಳನ್ನು ಕಳೆದುಕೊಂಡರು.

ಮಾನವನು, ವಿದ್ಯಾಭ್ಯಾಸ, ನೌಕರಿ, ವಿವಾಹ, ಸಂತಾನ, ಮಕ್ಕಳ ಪೋಷಣೆ, ಮೊಮ್ಮಕ್ಕಳ ಅಭಿವೃದ್ಧಿಯಲ್ಲಿ. ಜೀವಮಾನವನ್ನೆಲ್ಲಾ ಕಳೆಯುವುದು ವಾಡಿಕೆ. ಅವನಿಗೆ ವಿಷಯ, ದೇಹ, ಶಾಸ್ತ್ರ ವಾಸನೆಗಳು (ಅಜ್ಞಾನ) ಹೇರಳವಾಗಿರುವ ಕಾರಣ, ತನ್ನ ಒಳಗಿರುವ ನಿರಾಕಾರ ಬ್ರಹ್ಮರಿಂದ ಸಾಕಾರ ಬ್ರಹ್ಮರ ಶಕ್ತಿ ಹೊಂದಿ, ಚಟುವಟಿಕೆಗಳನ್ನೂ ನಡೆಸುತ್ತಾನೆ. ಅವನಿಗೆ, ಅಜ್ಞಾನ ಕಳೆದು, ಜ್ಞಾನ ಬಂದಾಗ, ತಾನು ಯಾವ ಕೆಲಸವನ್ನೂ ನಡೆಸಬೇಕಾಗಿಲ್ಲ ಎನ್ನುವ ಜ್ಞಾನೋದಯವಾಗಿ ನಂತರ ತನ್ನಲ್ಲಿ ನಿರಾಕಾರ ಬ್ರಹ್ಮದ ಇರುವಿಕೆಯನ್ನು ಗಮನಿಸಿ, ತನ್ನ ಇರುವಿಕೆಯನ್ನು ಮರೆತಿರುತ್ತಾನೆ. ಆ ಸಮಯವೂ ಪ್ರಳಯದ ಸಮಯದಂತೆಯೇ ಹಾಗಾದಾಗ ಅವನು "ಅಹಮ್ ಬ್ರಹ್ಮಾಸ್ಮಿ" ಆಗುತ್ತಾನೆ ಅಂದರೆ ಅದು ಬಹುಶಃ ತಪ್ಪಾಗಲಾರದು.

# ಒಡೆಯರ ಆಳ್ವಿಕೆಯಲ್ಲಿ ಸಂಗೀತ ಮತ್ತು ಸಾಹಿತ್ಯ



✍ ಡಾ. ಲೀಲಾ ಜೋಯಿಸ್

ಇದು ವಿದುಷಿ ಶ್ರೀಮತಿ ವೀಣಾ ಜಿ. ಶಾಸ್ತ್ರಿಯವರ M.Phil ಪ್ರಬಂಧದ ಪುಸ್ತಕ ರೂಪ. 227 ಪುಟದ ಪುಸ್ತಕ. ಸಮಗ್ರ ಒಡೆಯರ ಕಾಲದ ಅಂದರೆ (1399–1956), ಸಾಹಿತ್ಯ ಮತ್ತು ಸಂಗೀತವನ್ನು ಓದುಗರ ಮುಂದೆ ತೆರೆದಿಟ್ಟಿದೆ. ಇದನ್ನು ಆರು ಅಧ್ಯಾಯಗಳಾಗಿ ವಿಂಗಡಿಸಿದೆ.

ಪ್ರಪಂಚದ ಯಾವುದೇ ಸಂಸ್ಕೃತಿಯನ್ನು ವೀಕ್ಷಿಸಿದಾಗ ಅದು ಕಲೆಗೆ ಕೊಟ್ಟ ಪ್ರೋತ್ಸಾಹದಿಂದ ತಿಳಿಯಬಹುದು ಎಂಬುದು ವಿದಿತ. ಮಾನವ ತನ್ನ ಎಲ್ಲಾ ಭಾವನೆಗಳನ್ನೂ ವ್ಯಕ್ತಪಡಿಸಲು ಕಲೆಯಿಂದ ಸಾಧ್ಯ.

ಬಿ.ವಿ.ಕೆ.ಶಾಸ್ತ್ರಿಗಳ ಮುರಳಿವಾಣಿ ಕ.19 ಸಂಗೀತದ ಬಗ್ಗೆ ಬರೆಯುತ್ತಾ "ಅನುಭವ ವೇದ್ಯವಾದ ಕಲೆ ಸಂಗೀತ. ಇದು ಹಾಡುವವರಿಗೂ ಕೇಳುವವರಿಗೂ ಇಬ್ಬರಿಗೂ ಅನ್ವಯಿಸುತ್ತದೆ. ಈ ಅನುಭವಗಳಿಗೆ ಪ್ರೇರಕವೂ, ಪೋಷಕವೂ ಆದ ಶಕ್ತಿಗಳು ಭಾವ ಮತ್ತು ರಸ. ಸಂಗೀತದ ಮುಖ್ಯ ಅಂಗಗಳಾದ ರಾಗ, ಲಯಗಳು ಭಾವ ರಸಗಳನ್ನು ಅಭಿವ್ಯಕ್ತಪಡಿಸಿದರೂ ಅದಕ್ಕೆ ಬಹುತೇಕ ವ್ಯಂಜಕವಾದ ಸಾಮಗ್ರಿ ಮಾತು ಅಥವಾ ಸಾಹಿತ್ಯ ಈ ರಸಾನುಭಾವವು ಕೆಲವು ವೇಳೆ ಕೇವಲ ರಾಗಲಯಗಳಿಂದಲ್ಲ ವ್ಯಂಗದಲ್ಲಿ ಅನುಭವವಾಗಬಹುದು., ನಿಜ. ಆದರೆ ಬಹುಪಾಲು ಸಾಹಿತ್ಯವು ಅದಕ್ಕೆ ಖಚಿತ ರೂಪವೀಯುತ್ತದೆ. ರಾಗ, ಲಯಗಳು ಅದಕ್ಕೆ ವರ್ಧಕವಾಗುತ್ತವೆ".

ತ್ಯಾಗರಾಜರ "ಶೋಬಿಲ್ಲು ಸಪ್ತಸ್ವರ' ಕೃತಿಯಲ್ಲಿ ಸಪ್ತ ಸ್ವರಗಳ ಅಧಿದೇವತೆಯನ್ನು ಪೂಜಿಸಬೇಕೆಂದೂ, ಇದು ಪ್ರಾಣವಾಯುಗಳ ಮೇಲೆ ಚಲಿಸುತ್ತಾ ನಾಭಿ, ಹೃದಯ, ಗಂಟಲು, ನಾಲಿಗೆಯ ಮೇಲೆ ನಾದವಾಗಿ ಚಲಿಸುತ್ತೆ. ಈ ನಾದವೇ ಋಗ್ ಮತ್ತು ಸಾಮವೇದಕ್ಕೆ ಆಧಾರ ಮತ್ತು ಗಾಯತ್ರಿ ಮಂತ್ರಕ್ಕೆ ಸಾಧನ ಎಂಬುದಾಗಿ ತಿಳಿಸಿದೆ. ಹೀಗೆ ಸಂಗೀತ ಮತ್ತು ಸಾಹಿತ್ಯ ಇಲ್ಲಿ ಒಟ್ಟುಗೂಡಿದೆ.

ವೀಣಾ ಶಾಸ್ತ್ರಿಯವರ ಪುಸ್ತಕದಲ್ಲಿ ಒಡೆಯರ ಕಾಲದಲ್ಲಿ ಬೆಳೆದ ಸಂಗೀತ, ಸಾಹಿತ್ಯ ಎರಡರ ಬಗ್ಗೆ ಸಾಕಷ್ಟು ವಿವರ ಇದೆ. ಆದರೆ ವಿಷಯ ವಿಸ್ತಾರವಾದುದರಿಂದ ಇದನ್ನು ಎರಡು ಭಾಗವಾಗಿ ವಿಂಗಡಿಸಿದೆ. ಸಂಗೀತವನ್ನು ಮಾತ್ರ ಇಲ್ಲಿ ಚರ್ಚಿಸಿದೆ.

ತಮ್ಮ ಅಧ್ಯಾಯ ಒಂದರಲ್ಲಿ (1) ಹಲವು ಉತ್ತಮ ಉದಾಹರಣೆಯೊಂದಿಗೆ, ಸಂಗೀತ ಗ್ರಂಥಗಳ ಮಹತ್ವವನ್ನು ತಿಳಿಸಿದ್ದಾರೆ. ಹಾಗೆಯೇ ಹಲ್ಮಿಡಿ ಶಾಸನದಿಂದ 20ನೇ ಶತಮಾನದವರೆಗೂ ಕನ್ನಡ ಸಾಹಿತ್ಯ ಕೃಷಿ ಮತ್ತು ಸಂಗೀತಕ್ಕೆ ಒಡೆಯರು ಕೊಟ್ಟ ಪ್ರೋತ್ಸಾಹ, ಇವುಗಳ ಮಿಳಿತವನ್ನು ಇಲ್ಲಿ ತೋರಿಸಲಾಗಿದೆ.

ಅಧ್ಯಾಯ (2) ಸಾಂಸ್ಕೃತಿಯ ಕೇಂದ್ರವಾಗಿ ಮೈಸೂರಿನ ವಿಶ್ಲೇಷಣವನ್ನು ಚಾರಿತ್ರಿಕ ಹಿನ್ನೆಲೆಯಲ್ಲಿ ವಿವರಿಸಿದ್ದಾರೆ. ಮೈಸೂರಿನ ಒಂದು Panoramic view ಈ ಅಧ್ಯಾಯದಲ್ಲಿ ಸಿಗುತ್ತದೆ. ಸಂಗೀತ, ಸಾಹಿತ್ಯ, ದಸರಾ, ದರ್ಬಾರ್, ಅರಮನೆಯ ಒಳನೋಟ, ದೇವಸ್ಥಾನದ ಜೀರ್ಣೋದ್ಧಾರ ಮೈಸೂರಿನ ಸರ್ವತೋಮುಖದ ಬೆಳವಣಿಗೆಯ ಪಕ್ಷಿನೋಟ ಇಲ್ಲಿದೆ. ಲಲಿತಕಲೆ, ಶಿಲ್ಪಕಲೆ, ನಾಟ್ಯಕಲೆ, ಸಂಗೀತ ಕಲೆ, ಚಿತ್ರಕಲೆ ಇವುಗಳ ವಿವರವಾದ ಸಮ್ಮಿಳನ ಇಲ್ಲಿದೆ.

ಅಧ್ಯಾಯ 3: ಒಡೆಯರ ಆಳ್ವಿಕೆಯ ಅಂದರೆ, 1399–1947 ಅಂದರೆ ಸುಮಾರು 5 ದಶಕಗಳ ಆಳ್ವಿಕೆಯನ್ನು ವೀಣಾರವರು ಐತಿಹಾಸಿಕವಾಗಿ ವಿವರಿಸಿದ್ದಾರೆ. ಚರಿತ್ರೆ ಸುಧೀರ್ಗವಾಗಿರುವದರಿಂದ ಇದರ ಹೆಚ್ಚಿನ ವಿಶ್ಲೇಷಣೆ ಇಲ್ಲಿ ಮಾಡಿಲ್ಲ. ಚೊಕ್ಕದಾಗಿ ವಿವರ ನೀಡಿರುವುದರಿಂದ ಸೊಗಸಾಗಿ ಮೂಡಿಬಂದಿದೆ. ಒಟ್ಟಿನಲ್ಲಿ ಹೇಳುವದದರೆ, ಮೈಸೂರು ಚರಿತ್ರೆಯ ಇಣುಕು ನೋಟ ಇಲ್ಲಿದೆ.

ಸಂಗೀತಕ್ಕೆ ಸಂಬಂಧ ಪಟ್ಟ ಹಲವಾರು ಕೃತಿಗಳ ಪರಿಚಯವಿದೆ. ಇದಕ್ಕೆಲ್ಲಾ ರಾಜರಿತ್ತ ಪ್ರೋತ್ಸಾಹವೇ ಕಾರಣ. "ಮಾನಸೋಲ್ಲಾಸ" ಸಂಗೀತ ವರ್ಗೀಕರಣ ಶಾಸ್ತ್ರಗ್ರಂಥ, ಭರತಮುನಿಯ ನಾಟ್ಯಶಾಸ್ತ್ರ, ಮತಂಗ ಮುನಿಯ ಬ್ರುಹದೇಶಿ ಹಾಗೂ ಶಾರ್ಙ್ಗದೇವನ ಸಂಗೀತ ರತ್ನಾಕರ. ಇವೆಲ್ಲ ಸಂಗೀತ ಲಕ್ಷಣ ಪ್ರಮುಖ ಗ್ರಂಥಗಳು. ನಾರಾಯಣ ತೀರ್ಥರ – "ಕೃಷ್ಣಲೀಲಾ ತರಂಗಿಣಿ, ನಿಜಗುಣ ಶಿವಯೋಗಿ ವಿವೇಕ ಚಿಂತಾಮಣಿ. ತಂಜಾವೂರಿನ ಆಸ್ಥಾನದಲ್ಲಿ ಮಂತ್ರಿಯಾಗಿದ್ದ ಗೋವಿಂದ ದೀಕ್ಷಿತರ "ಸಂಗೀತ ಸುಧಾ", ಅವರ ಮಗ ವೆಂಕಟಮುಖಿ ಚತುರ್ದಂಡಿ ಪ್ರಕಶಿಕಾ ಇವೆಲ್ಲಾ ಪ್ರಮುಖ ಆಕಾರ ಗ್ರಂಥಗಳು. 72 ಮೇಳಕರ್ತ ಪದ್ಧತಿಯನ್ನು ರೂಪಿಸಿದ ಕೀರ್ತಿ ವೆಂಕಟಮುಖಿಗೆ ಸಲ್ಲಬೇಕು.

ಮುಖ್ಯವಾಗಿ ಹೇಳಬೇಕೆಂದರೆ ಚಿಕ್ಕ ದೇವರಾಜ ಒಡೆಯರ "ಗೀತಗೋಪಾಲ ರಚನೆ" ಜಯದೇವ ಕವಿಯ ಗೀತಗೋವಿಂದದ ಪ್ರೇರಣೆ. ಗೀತ ಗೋಪಾಲದಲ್ಲಿ ಉಪಯೋಗಿಸಿರುವ ರಾಗಗಳನ್ನು ಕೊಟ್ಟಿರುವರು ವೈಶಿಷ್ಟ್ಯ.

"ಅಪ್ರತಿಮ ವೀರಚರಿತ್ರೆ" ಆಸ್ಥಾನಕವಿ ತಿರುಮಲಾಚಾರ್ಯನ ರಚನೆ. ಕಂಠೀರವ ನರಸರಾಜ ಒಡೆಯರು ಸಂಗೀತಜ್ಞ ಆಗಿದ್ದರು. ಮತ್ತು ವೀಣೆ ನುಡಿಸುವದು ಅವರಿಗೆ ಕರಗತವಾಗಿತ್ತು. ಇವರ ಆಸ್ಥಾನದಲ್ಲಿದ್ದ ವೀಣಾ ವೆಂಕಟ ಸುಬ್ಬಯ್ಯನವರು ಕನ್ನಡ ನಾಡಿನ ವೀಣೆಯನ್ನು ಮೆರೆಯಿಸಿದ ಮಹಾ ವೈಣಿಕ ವಿದ್ವಾಂಸರು.

ಮುಮ್ಮಡಿ ಕೃಷ್ಣರಾಜ ಒಡೆಯರು: ತಂಜಾವೂರಿನ ಪಥನದ ನಂತರ ಮುಮ್ಮಡಿ ಕೃಷ್ಣರಾಜ ಒಡೆಯರು ತಂಜಾವೂರಿನ ಕಲಾವಿದರಿಗೆ ಪೋಷಕರಾದರು. ಅವರ ಅತ್ಯುತ್ತಮ ಕೃತಿ, ಶ್ರೀತತ್ವನಿಧಿ. ವಿಶ್ವಕೋಶ ಗ್ರಂಥ. ಇದರಲ್ಲಿ ಸುಂದರ ಚಿತ್ರಗಳಿವೆ. ಹಲವಾರು ರಾಗಗಳ ವಿವರಣೆ ಇದೆ. ಮತ್ತೂ ಹೆಚ್ಚಿನ ವಿವರವನ್ನೂ ವೀಣಾರವರು ವಿವರಿಸಿದ್ದಾರೆ.

ಮುಮ್ಮಡಿ ಕೃಷ್ಣರಾಜರ ಅನುಭವ ಪಂಚರತ್ನ ಮತ್ತು ಹಲವಾರು ವೈರಾಗ್ಯ ಜಾವಳಿಗಳನ್ನು ರಚಿಸಿರುವರು. ಹಲವಾರು ಉತ್ತಮ ಕಲಾವಿದರು ಇವರ ಆಸ್ಥಾನದಲ್ಲಿದ್ದರು. ಅಳಿಯ ಲಿಂಗರಾಜು, ಧರ್ಮಪುರಿ ಸುಬ್ಬರಾಯರು, ಬಳ್ಳಾರಿ ರಾಜರಾಯರು ಮುಖ್ಯರು.

ಅಟ್ಟತಾಳದ "ವೀರಿಬೋಣಿ ವರ್ಣ" ಯಾರಿಗೆ ತಾನೆ ಗೊತ್ತಿಲ್ಲ. ಈ ವರ್ಣದ ಕರ್ತ್ಸು ಆದಿ ಅಪ್ಪಯ್ಯ, ಹೈದರಾಲಿಯ ಆಸ್ಥಾನದಲ್ಲಿ ಪ್ರಮುಖವಾದ ವಿದ್ವಾಂಸರಾಗಿದ್ದರೆನ್ನುವ ಅಪರೂಪದ ಸಮಾಚಾರ ತಿಳಿಸಿದ್ದಾರೆ. (P.60) ಆದಿ ಅಪ್ಪಯ್ಯನವರು ವೀಣೆಯಲ್ಲಿ ಒಂದು ರಾಗ, ಕಂಠದಲ್ಲಿ ಇನ್ನೊಂದು ರಾಗ, ಹೀಗೆ ಎರಡು ರಾಗಗಳನ್ನು ಒಮ್ಮೆಗೆ ನುಡಿಸುವ ಅದ್ಭುತ ಕಲಾವಿದ. ಇವರ ಮರಿಮಕ್ಕಳು ವೀಣೆ ಶೇಷಣ್ಣ.

ಮುಮ್ಮಡಿಯವರ ಕಾಲದಲ್ಲಿ ಇದ್ದ ಹಲವಾರು ವಿದ್ವಾಂಸರ ವಿವರವನ್ನು ವೀಣಾರವರು ತೋರಿಸಿದ್ದಾರೆ. ವೀಣೆ ವೆಂಕಟಸುಬ್ಬಯ್ಯ, ವೀಣಾ ಕುಪ್ಪಯ್ಯ, ವೀಣೆಸಾಂಬಯ್ಯ, ವೀಣೆ ಪದ್ಮನಾಭಯ್ಯ, ಮತ್ತು ಸಪ್ತತಾಳೇಶ್ವರ (ಚತಿಸ್ವರ) ತೋಡಿರಾಗದಲ್ಲಿ ರಚಿಸಿರುವರು. ವೀಣೆ ಶೇಷಣ್ಣ, ಮೈಸೂರು ಸದಾಶಿವರಾಯರು, ಹೀಗೆ ಒಬ್ಬರೆ, ಇಬ್ಬರೆ ನವರತ್ನಗಳಂತೆ ಮೈಸೂರು ಆಸ್ಥಾನದಲ್ಲಿ ವಿರಾಜಿಸಿದ್ದ ರಾಜಾಶ್ರಯ ಪಡೆದಿದ್ದ ಎಲ್ಲಾ ಕಲಾವಿದರ ವಿವರ ಇಲ್ಲಿ ಸಂಗ್ರಹವಾಗಿದೆ. ಇದೆಲ್ಲವನ್ನೂ ಸಹೃದಯದಿಂದ ಓದಿ ಆಸ್ವಾದಿಸಬೇಕು.

ವೀಣಾ ಶಾಸ್ತ್ರಿಯವರ ತಿಲ್ಲಾನಗಳ ಬಗ್ಗೆ ಹೆಚ್ಚಿನ ಪ್ರಸ್ತಾಪ ಮಾಡಿದ್ದಾರೆ. ಇನ್ನು ಮೈಸೂರು ವಾಸುದೇವಾಚಾರ್ಯರು ಯಾರಿಗೆ ತಾನೆ ಗೊತ್ತಿಲ್ಲ. ಸುಂದರವಾದ ಲೇಖನ ಇಲ್ಲಿದೆ. ಕರಿಗಿರಿರಾಯರು ಸುಂದರ ಶಾಸ್ತ್ರಿಗಳು, ಬೆಂಗಳೂರು ನಾಗರತ್ನಮ್ಮ, ಪಟ್ನಂ ಸುಬ್ರಹ್ಮಣ್ಯ ಐಯ್ಯರ್, ಗೋಹರಜಾನ್ ಇವರೆಲ್ಲಾಮಹಾರಾಜರಿಂದ ಪುರಸ್ಕೃತರು. ಈ ಅಧ್ಯಾಯ ಉತ್ತಮವಾಗಿದೆ.

## ನಾಲ್ವಡಿ ಕೃಷ್ಣರಾಜರ ಆಳ್ವಿಕೆಯಲ್ಲಿ ಸಂಗೀತ

ಮಾದರಿ ಸಂಸ್ಥಾನ ಮೈಸೂರು ಎಂದು 1902ರಲ್ಲೇ ಮೈಸುರಿಗೆ ಖ್ಯಾತಿ ಇತ್ತು. ಪ್ರಸಿದ್ಧ ಕಲಾಕ್ಷೇತ್ರವೂ ಆಗಿತ್ತು. ಪಾಶ್ಚಾತ್ಯ, ಭಾರತೀಯ ಸಂಗೀತದ ಔಚಿತ್ಯಗಳ ಪರಿಚಯವಾಗಿತ್ತು. ಹಿಂದೂಸ್ತಾನಿ, ಪಾಶ್ಚಾತ್ಯ, ಕರ್ನಾಟಕ ಮೂರು ಶೈಲಿಗಳ ಪ್ರೋತ್ಸಾಹದಿಂದ “Progressive State” ಎನಿಸಿತ್ತು. ಸ್ವತಃ ನಾಲ್ವಡಿಯವರು ವಾದ್ಯಗಳನ್ನೂ ಪ್ರೌಢವಾಗಿ ನುಡಿಸಬಲ್ಲವರಾಗಿದ್ದರು.

ಹರಿಕೇಶನಲ್ಲೂರ್, ಮುತ್ತಯ್ಯಭಾಗವತರ ಬಗ್ಗೆ ಧೀರ್ಘವಾದ ವಿವರಣೆಯೊಂದಿಗೆ, ರಚಿಸಿದ ಕೀರ್ತನಗಳ ಬಗ್ಗೆ ವಿವರಣೆಯೊಂದಿಗೆ, ವಿವರಣೆ ಉಪಯುಕ್ತವಾಗಿದೆ. ಹಲವು ಅಪರೂಪದ ರಾಗದ ಪರಿಚಯ ಕೊಟ್ಟಿದೆ. ಉದಾ: ನಿರೋಷ್ಠಿ ರಾಗದ ಪರಿಚಯ. ಸಂಗೀತ ಬಲ್ಲ ರಸಿಕರಿಗೆ ಇದು ಸಂತಸ ತರುತ್ತದೆ. ಮತ್ತೊಬ್ಬ ಕಲಾವಿದರಾದ ಶಿವರಾಮಯ್ಯನವರು ಒಡೆಯವರಿಗೆ ಪ್ರಿಯವಾದ ರಚನೆಗಳನ್ನೆಲ್ಲ ಪಾಶ್ಚಾತ್ಯ ಸಂಗೀತ ಲಿಪಿಯಲ್ಲಿ ಬರೆದಿಡುವ ಜವಾಬ್ದಾರಿ ಅವರದಾಗಿತ್ತು ಎಂಬುದನ್ನು ವೀಣಾರವರು ತಿಳಿಸಿದ್ದಾರೆ. ಅಪರೂಪ ರಾಗಗಳ ಕೃತಿಗಳನ್ನೂ ಇವರ ರಚನೆಯಲ್ಲಿ ಕಾಣಬಹುದು. ಉದಾ: ಬಾಲಚಂದ್ರಿಕಾ, ಶುದ್ಧರತ್ನಬಾನು, ನಾದಮೂರ್ತಿ ಪದ್ಮಕಾಂತಿ, ಹಂಸಬ್ರಮರಿ, ಸತ್ಯಭೂಷಣ.

ಈ ಶತಮಾನದಲ್ಲಿ ಆಗಿ ಹೋದ ನಮಗೆ ಪರಿಚಯವಿರುವ ಹಲವಾರು ಮೆಚ್ಚಿನ ಕಲಾವಿದರ ಪರಿಚಯ ಅಚ್ಚುಕಟ್ಟಾಗಿ ಮಾಡಿರುವದು ವೀಣಾರವರ ಕಲಾನೈಪುಣ್ಯತೆಯನ್ನು ತೋರಿಸುತ್ತದೆ. ಮತ್ತೊಂದು ಮುಖ್ಯವಾದ ಸಂಗತಿ. ಸಂಗೀತದಲ್ಲಿ ತಬಲ ತಾಳವಾಗಿತ್ತು. ಸಂಗೀತ ಕಛೇರಿಗಳಲ್ಲಿ ಮೃದಂಗ ಒಂದು ಅವಿಭಾಜ್ಯ ತಾಳವನ್ನಾಗಿ ಮಾಡಿದ ಮೊದಲಿಗರೆಂದರೆ ಮುತ್ತುಸ್ವಾಮಿ ತೇವರ್ ಮತ್ತು ಕಾಲಕ್ರಮದಲ್ಲಿ ಮೃದಂಗ ಪಕ್ಕವಾದ್ಯದಲ್ಲಿ ಸೇರಿತು ಎಂಬುದನ್ನು ತಿಳಿಸಿರುವರು.

ಸಂಗೀತ ಬೆಳವಣಿಗೆ ತೋರಿಸುವ ಉತ್ತಮ ಪ್ರಬಂಧವೆನಿಸುವ, ಹಲವಾರು ಕಲಾವಿದರ ಸಾಧನೆ ಇಲ್ಲಿದೆ. ವೀಣೆ ವೆಂಕಟಗಿರಿಯಪ್ಪ, ಬಿಡಾರಂ ಕೃಷ್ಣಪ್ಪ, ರಾಳ್ಳಪಲ್ಲಿ ಅನಂತ ಕೃಷ್ಣ ಶರ್ಮ, ತಿಟ್ಟೆ ಕೃಷ್ಣ ಅಯ್ಯಂಗಾರ್, ಸ್ವರಮೂರ್ತಿ ವಿ.ಎನ್. ರಾವ್, ಆರ್.ಎಸ್.ಕೇಶವಮೂರ್ತಿ (ವೀಣೆ), ಡಾ। ಬಿ. ದೇವೇಂದ್ರಪ್ಪ, ಡಾ. ವಿ. ದೊರೆಸ್ವಾಮಿ, ಚಿಂತನಪಲ್ಲಿ ವೆಂಕಟರಾವ್, ಹುಲಗೂರು ಕೃಷ್ಣಚಾರ್, ಟಿ. ಚೌಡಯ್ಯ, ಡಿ. ಸುಬ್ಬರಾಮಯ್ಯ ಇವು ಹಲವು ಹೆಸರುಗಳು.

1915 ರಲ್ಲಿ ನಾಲ್ವಡಿಯವರು ಸ್ಥಾಪಿಸಿದ ಅರಮನೆ ಚಂದ್ರಶಾಲೆ ತೊಟ್ಟಿಯಲ್ಲಿ ಸಾರ್ವಜನಿಕವಾಗಿ ಸಂಗೀತ ಶಾಲೆಯನ್ನು ಸ್ಥಾಪಿಸಿ ಸಂಗೀತಾಸಕ್ತಿ ಮತ್ತು ಯೋಗ್ಯತೆಯುಳ್ಳ ಸಾರ್ವಜನಿಕರಿಗೆ ಉಚಿತ ಸಂಗೀತ ವ್ಯವಸ್ಥೆ ಮಾಡಿದರು.

ಪ್ರಿನ್ಸೆಸ್ ಕೃಷ್ಣಾಜಮ್ಮಾಣಿ ಸ್ಯಾನಿಟೋರಿಯಂನಲ್ಲಿ ಇರುವಂತ ರೋಗಿಗಳಿಗಾಗಿ ವಾರಕ್ಕೊಮ್ಮೆ ಸಂಗೀತ ಕಛೇರಿಗಳನ್ನೂ, ಆಸ್ಥಾನ ವಿದ್ವಾಂಸರೂ ಅರಮನೆಯ ಬ್ಯಾಂಡನವರೂ ನಡೆಸಬೇಕೆಂದು ಆಜ್ಞೆ ಮಾಡಿದರು. ಈ ಮಾಹಿತಿ ಅತ್ಯಂತ ಉಪಯೋಗವಾಗಿದೆ. ಇದು ನಾಲ್ವಡಿಯವರ ಕಾಲದಲ್ಲಿ ನಡೆದದ್ದು ಉಲ್ಲೇಖನೀಯ. ಗ್ರಾಮಫ್ರೋನ್ ತಟ್ಟೆಯ ಸಂಗ್ರಹ ಪಾಶ್ಚಿಮಾತ್ಯ ಸಂಗೀತ ವಾದ್ಯಗಳು ಇದರ ಸಂಗ್ರಹ ಕೂಡ ನಡೆದಿತ್ತು.

ಹಿಂದೂಸ್ತಾನಿ ಆದಾನ ಪ್ರಧಾನ ಕೂಡ ಚೆನ್ನಾಗಿ ಮೂಡಿಬಂದಿದೆ. ನಾಲ್ವಡಿಯವರ ಪಾಶ್ಚಿಮಾತ್ಯ ಸಂಗೀತದ ಪರಿಚಯ ಮೆಚ್ಚುವಂತದ್ದು ಮತ್ತು ಸರ್ವತೋಮುಖವಾದ ಸಂಗೀತ ಬೆಳವಣಿಗೆಗೆ ಕೊಟ್ಟ ಪ್ರೋತ್ಸಾಹ ಅನನ್ಯವೆಂಬುದನ್ನು ವೀಣಾರವರು ತೋರಿಸಿಕೊಟ್ಟಿದ್ದಾರೆ.

ನರಸಿಂಹರಾಜ ಒಡೆಯರ್: ನರಸಿಂಹರಾಜ ಒಡೆಯರ್ ಕಾಲದ ಕಲಾವಿದರ ಪ್ರೋತ್ಸಾಹ ಗೊತ್ತಿದೆ. ತಮ್ಮ ಮಕ್ಕಳುಗಳಿಗೆ ಪಾಶ್ಚಾತ್ಯ ಸಂಗೀತ ಶಿಕ್ಷಣ ಕೊಡಿಸಿ, ವಿದೇಶದಲ್ಲಿ ಕೂಡ ಖ್ಯಾತಿ ಪಡುವಂತೆ ಮಾಡಿದರು.

ಮತ್ತೊಂದು ವಿಶೇಷ. ಪುಂಡರೀಕ ವಿಠಲನ ಸದ್ರಾಗ ಚಂದ್ರೋದಯ, ರಾಗಮಾಲ, ರಾಗಮಂಜರಿ ಗ್ರಂಥಗಳನ್ನು ಮತ್ತು ಮಧ್ಯಪ್ರದೇಶದ ಹೃದಯನಾರಾಯಣನ ಹೃದಯಪ್ರಕಾಶನ, ಹೃದಯ ಕೌತುಕ ಎಂಬ ಕೃತಿ ಪ್ರಕಟವಾಗಲು ಉದಾರ ಸಹಾಯ ಮಾಡಿದಲ್ಲದೆ ಬಹು ಕಡಿಮೆ ಬೆಲೆಗೆ ದೊರೆಯುವಂತೆ ಮಾಡಿದ್ದು ವೀಣಾ ದಾಖಲೆ ಮಾಡಿದ್ದಾರೆ.

ಜಯಚಾಮರಾಜೇಂದ್ರ ಒಡೆಯರ್: ಶ್ರೀವಿದ್ಯಾ ಉಪಾಸಕ, ವಾಗ್ಗೇಯಕಾರ, ಪಿಯಾನೊವಾದಕ ಮತ್ತು ತತ್ವಶಾಸ್ತ್ರ ಪ್ರವೀಣರು. ಮೆಡಟ್ನರ್ ಎಂಬ ರಷ್ಯದ ಸಂಗೀತಗಾರನಿಗೆ ಮಹಾರಾಜರು ಕೊಟ್ಟ ಪ್ರೋತ್ಸಾಹದಿಂದ ಗ್ರಾಮ ಫೋನ್ ಕಂಪೆನಿಯವರು ಮೆಡಟ್ನರ್ ರವರ ಸಂಗೀತ ಮುದ್ರೆಗಳನ್ನು ಧ್ವನಿ ಮುದ್ರಿಸಿ ಪ್ರಕಟಿಸುವಂತಾಯ್ತು ಎಂಬ ವಿಚಾರ ತಿಳಿಸುವ ಮೂಲಕ ಒಡೆಯರವರ ಪಾಶ್ಚಾತ್ಯ ಸಂಗೀತ ದ ಕಳಕಳಿಯನ್ನು ವ್ಯಕ್ತ ಪಡಿಸಿದ್ದಾರೆ. ಇಲ್ಲಿ ಹಲವಾರು ಅಪರೂಪದ ರಾಗಗಳ ಪರಿಚಯ ಕೂಡ ಮಾಡಿಸಿದ್ದಾರೆ. ಉದಾ: ಜಯಸಂವರ್ದಿನಿ, ದೂರ್ವಾಂಕಿ. ಅಪರೂಪ ರಾಗಗಳ ಸಮ್ಮೇಳನ ಇಲ್ಲಿದೆ. ಒಂದೆರಡು ಕೃತಿಗಳ ವಿಶ್ಲೇಷಣೆ ಕೂಡ ವಿಶೇಷವಾಗಿದೆ. ಉದಾ: ಹಂಸನಟಿನಿ, ಕಲ್ಯಾಣವಸಂತ.

ಜಯಚಾಮರಾಜ ಒಡೆಯರು ಹಲವಾರು ಕಲಾವಿದರನ್ನು ಪ್ರೋತ್ಸಾಹಿಸಿದರು. ಹೆಸರಿಸಬೇಕಾದರೆ, ಟೈಗರ್ ವರದಾಚಾರ್, ವೆಂಕಟ ತೇವರ್, ಕೆ. ಎನ್. ನಾರಾಯಣ ಅಯ್ಯಂಗಾರ್, ಆರ್. ಎನ್. ದೊರೆಸ್ವಾಮಿ, ಎಸ್. ಎನ್. ಮರಿಯಪ್ಪ, ಎನ್. ಚೆನ್ನಕೇಶವಯ್ಯ, ಬಿ. ಕೆ. ಪದ್ಮನಾಭರಾವ್ ಇವರೆಲ್ಲ ಶತಮಾನದ ಶ್ರೇಷ್ಠ ಕಲಾವಿದರಾಗಿ ಮೆರೆದರು.

ಹೀಗೆ ಮೈಸೂರು ಕಲಾವಿದರ ಸಂಪನ್ನ ಕ್ಷೇತ್ರವಾಗಿದ್ದಲ್ಲದೆ ಮೈಸೂರು ಅರಸರಿಂದ ಕಲೆಯ ಗೌರವ ಹೆಚ್ಚಾಗಿತ್ತು. ಆದರೆ ಕಾಲಕ್ರಮೇಣ ಕಲಾವಿದರ ಪೋಷಣೆಗೆ ಪ್ರೋತ್ಸಾಹ ಕಡಿಮೆ ಮಾಡಬೇಕಾಯಿತು. ಇದಕ್ಕೆ ಕಾರಣ ಹಲವಾರು.

ಮೈಸೂರು ಕಲೆಯ ಬೀಡಾಗಿ ಕರ್ನಾಟಕ, ಹಿಂದೂಸ್ತಾನಿ ಪಾಶ್ಚಾತ್ಯ ಸಂಗೀತ ಆದಾನ ಪ್ರಧಾನವಾಗಿ ಮೆರೆದದ್ದು ಸರಿ,. ಪಾಶ್ಚಾತ್ಯ ವಿದ್ವಾಂಸರು ಕೂಡ ಭಾರತದ ಸಂಗೀತ ಕಲೆಯನ್ನು ಮೆಚ್ಚಿ ಅದನ್ನು ಪಾಶ್ಚಾತ್ಯ ವಾದ್ಯಗಳಲ್ಲಿ ಅಳವಡಿಸಿ ಹೊರನಾಡಿನಲ್ಲಿಯೂ ನಮ್ಮ ಸಂಗೀತವನ್ನೂ ಪ್ರತಿನಿಧಿಸಿದರು.

ಸ್ಪರ್ಧೆಗಳು ಹೆಚ್ಚಾಗಿ ಇರುವಂತೆ ತೋರುವುದಿಲ್ಲ. ಸ್ವತಂತ್ರ ಸ್ವಾಭಿಮಾನತೆಗಿಂತ, ರಾಜಪ್ರೇಮ ಹೆಚ್ಚಾಗಿ ಕಂಡುಬರುತ್ತೆ. ಪರಸ್ಪರ ನಂಬಿಕೆ ಉತ್ತಮಗುಣವನ್ನು ಮೆಚ್ಚುವ ಸೌಹಾರ್ದತೆ ಇರುವುದನ್ನು ಕಾಣುತ್ತೇವೆ. ಕಲಾಕಾರರಲ್ಲಿ ತಾವು ಮಹಾರಾಜರಿಗೆ ಹತ್ತಿರವಾದವರೆಂಬ ನಂಬಿಕೆ ಇತ್ತು. ಆರ್ಥಿಕ ಭದ್ರತೆಯಿಂದ ಕಲಾವಿದರು ಹೊಸ ಹೊಸ ಪ್ರಯೋಗ ಮಾಡಲು ಸಾಧ್ಯವಾಯಿತು. ತನ್ನ ಶೈಲಿಯಿಂದ ಬೇರೆ ಶೈಲಿ, ವೈವಿಧ್ಯ ಪ್ರಯೋಗ ಮಾಡಲು ಸಹಾಯವಾಯಿತು. ಹೀಗೆ ಮೈಸೂರು ಒಡೆಯರು ಕಲೆಗೆ ಪ್ರೋತ್ಸಾಹ ಕೊಟ್ಟು ಕಲೆಯನ್ನೂ, ಕಲಾಕಾರರನ್ನೂ ಬೆಳೆಸಿದರೆಂದು ಖಂಡಿತಾ ಹೇಳಬಹುದು.

ಒಟ್ಟಿನಲ್ಲಿ ಹೇಳುವುದಾದರೆ ವೀಣಾ ಶಾಸ್ತ್ರಿಯವರು ಬೆಟ್ಟದ ಚಾಮರಾಜರಿಂದ ಜಯಚಾಮರಾಜರ ತನಕ ಸಂಗೀತಕ್ಕೆ ಕೊಟ್ಟ ಪ್ರೋತ್ಸಾಹದ ವಿವರಣೆ ಕೊಡುವುದರ ಜೊತೆಗೆ ಹಲವು ಅಪರೂಪದ ಐತಿಹಾಸಿಕ ವಿವರಣೆಯನ್ನು ದಾಖಲಿಸಿರುವುದು ಮಹತ್ವವೆನಿಸುತ್ತದೆ. ಮತ್ತು ಈ ಪುಸ್ತಕ ಕರ್ನಾಟಕ ಸಂಗೀತ ರಸಿಕರಿಗೆ ಒಂದು ಅತ್ಯುತ್ತಮವಾದ ಕೊಡುಗೆಯಾಗಿದೆ. ಈಗಾಗಲೇ ಪ್ರಕಟವಾಗಿರುವ ಕರ್ನಾಟಕ ಸಂಗೀತದ ಗ್ರಂಥಲೋಕಕ್ಕೆ ಒಂದು ಉತ್ತಮ ಕೊಡುಗೆ ಕೊಟ್ಟ ವೀಣಾ ಶಾಸ್ತ್ರಿಯವರಿಂದ ಇನ್ನೂ ಹೆಚ್ಚಿನ ಕೃತಿಗಳು ಹೊರಬರಲಿ ಎಂದು ಆಶಿಸುವ. ●

# ಮುಂಬಯಿ ರಂಗಭೂಮಿಗೆ
# ಮೈಸೂರು ಅಸೋಸಿಯೇಶನ್‌ನ ಕೊಡುಗೆ



✍ ಡಾ. ಮಮತಾ ರಾವ್

ಮುಂಬಯಿ ರಂಗಭೂಮಿಗೆ ತನ್ನದೇ ಆದಂತಹ ಸುದೀರ್ಘವಾದ ಅಷ್ಟೇ ರೋಚಕವಾದ ಇತಿಹಾಸವಿದೆ. ಮುಂಬಯಿಯಲ್ಲಿ ನೆಲೆನಿಂತು ತಮ್ಮ ಅಸ್ಮಿತೆಯ ಹುಡುಕಾಟದಲ್ಲಿ ಸಂಘ-ಸಂಸ್ಥೆಗಳನ್ನು ಕಟ್ಟಿಕೊಂಡ ಕನ್ನಡಿಗರು ಕನ್ನಡ ಸಾಹಿತ್ಯ ಹಾಗೂ ಸಂಸ್ಕೃತಿಯನ್ನು ಉಳಿಸಿ-ಬೆಳೆಸಿದ ಪರಿ ಅನನ್ಯವಾದುದು. ಅದರಲ್ಲೂ ರಂಗಭೂಮಿಯ ಹವ್ಯಾಸಕ್ಕಾಗಿ ತಮ್ಮ ಬದುಕಿನ ಅಮೂಲ್ಯ ಕ್ಷಣಗಳನ್ನು ಧಾರೆಯೆರೆದ ಚೇತನಗಳಿಗೆ ಆಸರೆ ನೀಡಿ ಪೋಷಿಸಿ ಪ್ರೋತ್ಸಾಹಿಸಿದ ಸಂಘ-ಸಂಸ್ಥೆಗಳ ಹೆಸರು ಮುಂಬಯಿ ರಂಗಭೂಮಿಯ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ನಮೂದಿಸುವಂತಹದ್ದು. ಅವುಗಳಲ್ಲಿ ಮೈಸೂರ್ ಅಸೋಸಿಯೇಶನ್ ಮಹತ್ವದ ಸ್ಥಾನವನ್ನು ಪಡೆಯುತ್ತದೆ.

19ನೇ ಶತಮಾನದ ಪ್ರಾರಂಭದಲ್ಲಿ ವಾಣಿಜ್ಯಕೇಂದ್ರವಾಗಿ ಬೆಳೆಯುತ್ತಿದ್ದ ಮುಂಬಯಿಗೆ ಉದ್ಯೋಗ ನಿಮಿತ್ತ ಬರುತ್ತಿದ್ದವರಲ್ಲಿ ಮೈಸೂರು ರಾಜ್ಯದವರೂ ಸಾಕಷ್ಟು ಜನರಿದ್ದರು. ಇವರೆಲ್ಲರೂ ವಿದ್ಯಾವಂತರಾಗಿದ್ದು ಮೈಸೂರಿನಿಂದಲೇ ಕಲೆ, ಸಾಹಿತ್ಯ ಹಾಗೂ ರಂಗಭೂಮಿಯ ಅನುಭವಗಳನ್ನು ಮೈಗೂಡಿಸಿಕೊಂಡವರು. ಇವರಿಗೆ ಕರ್ನಾಟಕದ ಕರಾವಳಿ ಭಾಗದಿಂದ ಮುಂಬಯಿಗೆ ವಲಸೆ ಬಂದ ಜನರಿಗಿಂತ ಸುಲಭದಲ್ಲಿ ಉದ್ಯೋಗ ಪಡೆದು ಬದುಕು ಕಟ್ಟಿಕೊಳ್ಳುವುದು ಸಾಧ್ಯವಾಯಿತು. ಹಾಗೂ ತಮ್ಮ ಪ್ರತಿಭೆಯನ್ನು ಒರೆಗೆ ಹಚ್ಚುವ ಅವಕಾಶಗಳೂ ಬಹುಬೇಗ ಕೂಡಿಬಂದವು.

ಮುಂಬಯಿಯ ಗಿರಗಾಂವ ಪುಟ್ಟ ಕೊಠಡಿಯಲ್ಲಿ 1926ರಲ್ಲಿ ಉದಯವಾದ ಮೈಸೂರ್ ಅಸೋಸಿಯೇಶನ್ ಇಂದು 93ನೇ ವಸಂತಕ್ಕೆ ಪದಾರ್ಪಣೆ ಮಾಡುತ್ತಿದೆ. ಸ್ಥಾಪನೆಯಾದಂದಿನಿಂದಲೂ ಇಂದಿನವರೆಗೆ ನಿರಂತರವಾಗಿ ರಂಗಚಟುವಟಿಕೆಗಳಲ್ಲಿ ತೊಡಗಿಸಿಕೊಂಡ ಮೈಸೂರ್ ಅಸೋಸಿಯೇಶನ್ ಮುಂಬಯಿ ರಂಗಭೂಮಿಯ ಇತಿಹಾಸದಲ್ಲಿ ವಿಶೇಷ ಸ್ಥಾನವನ್ನು ಪಡೆಯುತ್ತದೆ. ಅಸೋಸಿಯೇಶನ್‌ನ ಪ್ರಾರಂಭದ ಉಪಾಧ್ಯಕ್ಷರಾಗಿದ್ದ ಅಡ್ವೋಕೇಟ್ ಶ್ರೀ ಗಂಗಾಧರಯ್ಯನವರ ನೇತೃತ್ವದಲ್ಲಿಯೇ ರಂಗಚಟುವಟಿಕೆಗಳು ಪ್ರಾಂಭವಾಗಿತ್ತು. ಶ್ರೀ ಗಂಗಾಧರಯ್ಯನವರ ನಾಟಕ ತಂಡವು 1929ರಲ್ಲಿ ಶ್ರೀ ಬಸವಪ್ಪ ಶಾಸ್ತ್ರಿಗಳ 'ಶಾಕುಂತಲ' ನಾಟಕವನ್ನು ಮಾತುಂಗಾದಲ್ಲಿರುವ ನೆಪ್ಚೂ ಹಾಲ್‌ನಲ್ಲಿ ಪ್ರದರ್ಶಿಸಿತು. ಮುಂಬಯಿಯ ರಂಗಭೂಮಿಯಲ್ಲಿ ಮುಂಬಯಿಯ ರಂಗಾಸಕ್ತರಿಂದ ಪ್ರದರ್ಶನಗೊಂಡ ಮೊಟ್ಟಮೊದಲ ನಾಟಕವಿದು ಎಂದು ಗುರುತಿಸಿಕೊಳ್ಳುತ್ತದೆ. ಈ ನಾಟಕಕ್ಕೆ ಸಿಕ್ಕ ಪ್ರೋತ್ಸಾಹದಿಂದ ಮುಂದೆ ಇದೇ 'ಶಾಕುಂತಲ' ನಾಟಕ ಹಾಗೂ ಗುಬ್ಬಿ ಕಂಪನಿಯ ಶ್ರೀ ನಾಗೇಂದ್ರರಾವ್ ಹಾಗೂ ಚಲನಚಿತ್ರ ನಟ ಹನುಮಂತರಾವ್ ಇವರ ನಿರ್ದೇಶನದ 'ವಿರಾಟ ಪರ್ವ'ಎಂಬ ಎರಡು ನಾಟಕಗಳನ್ನು 'ಯಮುನಾಬಾಯಿ ನಾಯರ್' ಆಸ್ಪತ್ರೆಯ ನೆರವಿಗಾಗಿ ಮೈಸೂರ್ ಅಸೋಸಿಯೇಶನ್ ಸಾರ್ವಜನಿಕವಾಗಿ ಗಿರಗಾಂವನಲ್ಲಿ ಪ್ರಯೋಗಿಸಿತು.

1931ರಲ್ಲಿ ಕರ್ನಾಟಕದಿಂದ ಗರೂಡ ಸದಾಶಿವರಾಯರ ವೃತ್ತಿನಾಟಕದ ತಂಡವು ಮುಂಬಯಿಗೆ ಆಗಮಿಸಿ ಎಚ್ಚಮ ನಾಯಕ ಹಾಗೂ ಪಾದುಕಾ ಪಟ್ಟಾಭಿಷೇಕ ಎಂಬ ನಾಟಕಗಳನ್ನು ಪ್ರದರ್ಶಿಸಿ ಮುಂಬಯಿ ಕನ್ನಡಿಗರನ್ನು ಮಂತ್ರಮುಗ್ಧರನ್ನಾಗಿಸಿತ್ತು. ಆಧುನಿಕ ಕನ್ನಡ ರಂಗಭೂಮಿಯ ಪ್ರವರ್ತಕರಾದ ಟಿ ಪಿ ಕೈಲಾಸಂ 1933-36ರಲ್ಲಿ ಮುಂಬಯಿಯಲ್ಲಿದ್ದಾಗ ಮೈಸೂರು ಅಸೋಸಿಯೇಶನ್‌ನಲ್ಲಿ ನೆಲೆಸಿದ್ದು ಹಲವು ನಾಟಕಗಳನ್ನು ಬರೆದಿದ್ದರು. ಅವರು ಬರೆದ ಅಮ್ಮಾವ್ರ ಗಂಡ ಹಾಗೂ ನಮ್ ಕ್ಲಬ್ ನಾಟಕಗಳ ಪ್ರಯೋಗವು ಮೊದಲಿಗೆ ಮುಂಬಯಿಯಲ್ಲಿ ಮೈಸೂರ್ ಅಸೋಸಿಯೇಶನ್‌ನವರಿಂದಾಯಿತು.

ಛಾಯಾಗ್ರಹಣದಲ್ಲಿ ತರಬೇತಿ ಪಡೆಯಲೆಂದೇ ಮುಂಬಯಿಗೆ ಆಗಮಿಸಿ ಮುಂದೆ ಛಾಯಾಗ್ರಹಣಕ್ಕಾಗಿಯೇ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಪಡೆದ ವಿ.ಕೆ.ಮೂರ್ತಿ'ಕುಟ್ಟಿ'ಎಂದೇ ಚಿರಪರಿಚಿತರು. 1947ರಿಂದ 1971ರ ತನಕ ಮೂರ್ತಿಯವರು ಅಸೋಸಿಯೇಶನ್‌ನ ನಾಟಕರಂಗದಲ್ಲಿ ಸಕ್ರೀಯರಾಗಿದ್ದು ಮೈಸೂರು ಅಸೋಸಿಯೇಶನ್‌ನ ನಾಟಕ ತಂಡವನ್ನು ಕಟ್ಟುವಲ್ಲಿ ಇವರ ಯೋಗದಾನ ಅಪೂರ್ವವಾದುದು. ಮುಂಬಯಿಗೆ ಬರುವ ಮೊದಲೇ ರಂಗಭೂಮಿಯಲ್ಲಿ ಪಳಗಿದ್ದ ಇವರಿಗೆ ಕೈಲಾಸಂನವರ ಪರಿಚಯವಿತ್ತು. ಆರಂಭದಲ್ಲಿ ಅಭಿನಯ ಮಾಡಿದ್ದರೂ, ಮುಂದೆ ನಿರ್ದೇಶನದತ್ತ ಒಲವು ಹರಿಸಿದ ಇವರ ಮೊದಲ ನಾಟಕ ನಾ ಕಸ್ತೂರಿಯವರ 'ಗಗ್ಗಯ್ಯನ ಗಡಿಬಿಡಿ'. ಅದರಲ್ಲಿ ಸಂಪತ್, ಪುಟ್ಟಣ್ಣಯ್ಯ, ರಮಣ್ ಮುಂತಾದವರು ಅಭಿನಯಿಸಿದ್ದರು. ಮುಂದೆ ದಾಶರಥ ದೀಕ್ಷಿತ್, ಕೈಲಾಸಂ, ಜಿ.ಪಿ ರಾಜರತ್ನಂ, ಪರ್ವತವಾಣಿಯವರ ಹಲವು ನಾಟಕಗಳನ್ನು ಆಡಿಸಿದ್ದರು. 1950ರ ಡಿಸೆಂಬರ್ ತಿಂಗಳಲ್ಲಿ ರಾಷ್ಟ್ರಕವಿ ಗೋವಿಂದ ಪೈಗಳ ಅಧ್ಯಕ್ಷತೆಯಲ್ಲಿ ಮೂರುದಿನಗಳ ಸಾಹಿತ್ಯ ಸಮ್ಮೇಳನವು ಕಾವಸ್ಜೀ ಜಹಾಂಗೀರ್ ಹಾಲನಲ್ಲಿ ಜರುಗಿತು. ಅದರ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ 35 ಸಂಸ್ಥೆಗಳಿಂದ ಪ್ರತಿದಿನ ಸಂಜೆ ನಾಟಕಗಳನ್ನು ಪ್ರದರ್ಶಿಸಲಾಗಿತ್ತು. ಮೈಸೂರು ಅಸೋಸಿಯೇಶನ್‌ನ ತಂಡವು ಮೂರ್ತಿಯವರ ನಿರ್ದೇಶನದಲ್ಲಿ ಸಿ ಕೆ ಪುಟ್ಟಣ್ಣಯ್ಯನವರ 'ಭಂಡ್ವಾಳು' ನಾಟಕವನ್ನು ಪ್ರದರ್ಶಿಸಿತ್ತು.

ವಿ.ಕೆ.ಮೂರ್ತಿಯವರು ಕನ್ನಡ ಕಲಾಕೇಂದ್ರದ ನಾಟಕೋತ್ಸವಕ್ಕಾಗಿ ನವಗ್ರಹ, ನಂದಿಮಹಲ್, ಗಂಡಾಂತರ, ವರ್ಣಾಂಧ, ಪ್ರಗತಿ ಮುಂತಾದ ನಾಟಕಗಳನ್ನು ಇಂಗ್ಲೀಷ್ ಕಾದಂಬರಿ ಹಾಗೂ ಇಂಗ್ಲೀಷ್ ಚಲನಚಿತ್ರಗಳನ್ನು ರೂಪಾಂತರಿಸಿ ಬರೆದಿದ್ದು ಸ್ವತಃ ನಿರ್ದೇಶಿಸಿದ್ದರು. ರಂಗವಿನ್ಯಾಸಕ್ಕೆ ಹೆಚ್ಚು ಮಹತ್ವ ನೀಡುತ್ತಿದ್ದ ಮೂರ್ತಿಯವರು ತಮ್ಮ ನಾಟಕಗಳಲ್ಲಿ ಕೈಯಾರೆ ತಯಾರಿಸಿ ಬಳಸುತ್ತಿದ್ದ ವರ್ಣಮಯ ರಂಗಸಜ್ಜಿಕೆ ಹಾಗೂ ಉತ್ತಮ ಸಂಗೀತ ಸಂಯೋಜನೆಯಿಂದ ಪ್ರೇಕ್ಷಕರನ್ನು ಆಕರ್ಷಿಸಿದರು. ಜಯಭೀಮರಾವ್, ಸಿ. ಕೆ. ಶಂಕರನಾರಾಯಣ್ ರಾವ್, ಸಂಪತ್ ರಮಣ್, ಗುರುಸ್ವಾಮಿ, ನಾಗರಾಜನ್, ದೇವರಾಜ್, ಕೃಷ್ಣ, ರಾಘವೇಂದ್ರರಾವ್, ಪದ್ಮನಾಭ ಮುಂತಾದವರೆಲ್ಲ ಇವರ ಗರಡಿಯಲ್ಲಿ ಪಳಗಿ ಮುಂದೆ ರಂಗಭೂಮಿಯಲ್ಲಿ ಉತ್ತಮ ಕಲಾವಿದರೆಂದು ಗುರುತಿಸಿಕೊಂಡರು. ವಿ. ಕೆ. ಮೂರ್ತಿಯವರು ಅಸೋಸಿಯೆಶನ್‌ನ ತಂಡವನ್ನು ಒಂದು ವೃತ್ತಿ ನಾಟಕ ತಂಡದ ಮಟ್ಟಕ್ಕೇರಿಸಿ, ಮುಂಬಯಿ ಮಾತ್ರವಲ್ಲ ಗುಜರಾತ, ದೆಹಲಿ ಹಾಗೂ ಕರ್ನಾಟಕಾದ್ಯಂತ ಪ್ರದರ್ಶನಗಳನ್ನು ನೀಡಿ ಜನಪ್ರಿಯತೆಯನ್ನು ಗಳಿಸುವುದಕ್ಕೂ ಕಾರಣೀಭೂತರಾಗಿದ್ದರು.

ಪಿ. ಎಸ್. ಪುಟ್ಟಣ್ಣಯ್ಯ, ಎಂ.ಎನ್.ರಾಮಚಂದ್ರರಾವ್(1955–57), ಎ.ಟಿ.ಪದ್ದಣ(1957–71), ಬಿ.ಎನ್.ದುಗ್ಗಪ್ಪಯ್ಯ ಮುಂತಾದವರು ಮೈಸೂರ್ ಅಸೋಸಿಯೇಶನ್‌ನ ರಂಗ ಚಟುವಟಿಕೆಗಳಿಗೆ ನೀರೆರೆದರು. ಮೈಸೂರ್ ಅಸೋಸಿಯೇಶನ್‌ನ ಮಹಿಳಾ ಸದಸ್ಯೆಯರೂ ಕೂಡ ಬಹಳ ಸಕ್ರೀಯರಾಗಿ ರಂಗಭೂಮಿಯಲ್ಲಿ ತಮ್ಮನ್ನು ತೊಡಗಿಸಿಕೊಂಡದ್ದನ್ನು ಕಾಣಬಹುದು. ಟಿ ಪಿ ಕೈಲಾಸಂ ಅವರ 'ಬಂಡ್ವಾಳಿವಿಲ್ಲದ ಬಡಾಯಿ' ನಾಟಕದಲ್ಲಿ(1951) ಸ್ತ್ರೀಪಾತ್ರ ವಹಿಸಿದ ಮುಂಬಯಿಯ ಮೊದಲ ಮಹಿಳೆಯೆಂದು ಶ್ರೀಮತಿ ಮಧುರಾ ಕೃಷ್ಣಸ್ವಾಮಿಯವರು ಗುರುತಿಸಿಕೊಳ್ಳುತ್ತಾರೆ. ಮುಕ್ತವಾದ ವಾತಾವರಣವನ್ನು ಕಲ್ಪಿಸಿಕೊಟ್ಟ ಕಾರಣ ಮಧುರಾಕೃಷ್ಣ ಸ್ವಾಮಿಯವರ ನಂತರ ಶ್ರೀಮತಿ ಶಾರದಮ್ಮ ನಾರಾಯಣಸ್ವಾಮಿ, ಲಕ್ಷ್ಮೀಸ್ವಾಮಿ, ಸುಶೀಲಾರಾವ್ ಹೀಗೆ ಒಬ್ಬೊಬ್ಬರೆ ಮಹಿಳೆಯರು ಮೈಚಳಿ ಬಿಟ್ಟು ಅಭಿನಯಿಸಲು ಪ್ರಾರಂಭಿಸಿದರು. ಮುಂದೆ 60–80ರ ದಶಕಗಳಲ್ಲಿ ಶ್ರೀಮತಿಯವರಾದ ಸಂಧ್ಯಾಮೂರ್ತಿ, ಮನಸಾ ರಾಘವೇಂದ್ರ, ಕುಂತಿ ದುಗ್ಗಪ್ಪಯ್ಯ, ಗೀತಾ ವಿಶ್ವನಾಥ, ಉಷಾ ಜೈರಾಮ್, ಉಷಾ ಶ್ರೀಕಾಂತ್, ರಮಾ ಹರಿಹರನ್, ರಮಾ ವೆಂಕಟೇಶ್, ಭಾರತಿ ಪ್ರಸಾದ್, ಶಾರ್ವರಿ, ಸೌಮ್ಯ, ರತ್ನಾರಾವ್, ಮುಂತಾದವರು ಅಸೋಸಿಯೇಶನ್‌ನ ನಾಟಕಗಳಲ್ಲಿ ಪಾತ್ರವಹಿಸಿ ಮುಂಬಯಿ ಮಾತ್ರವಲ್ಲದೆ ಒಳನಾಡಿನಲ್ಲೂ ಗಮನಸೆಳೆದರು. ಕುಂತಿ ದುಗ್ಗಪ್ಪಯ್ಯ ಹಾಗೂ ಗೀತಾ ವಿಶ್ವನಾಥನ್ ನಾಟಕಗಳನ್ನು ಬರೆದು ದಿಗ್ದರ್ಶಿಸಿರುವರು.

ಸ್ವತಃ ನೃತ್ಯಗಾರ್ತಿಯಾಗಿದ್ದ ಗೀತಾ ವಿಶ್ವನಾಥನ್ ಅವರು 60ರಿಂದ 80ರ ದಶಕದಲ್ಲಿ ಕೃಷ್ಣಾಯ ತುಭ್ಯಂ, ಅಂತಃಪುರ ಗೀತೆಗಳು, ಕೋಳೂರು ಕೊಡಗೂಸು, ಭಜ ಗೋವಿಂದಂ ಮುಂತಾದ ನೃತ್ಯ ರೂಪಕಗಳನ್ನು ಸ್ವತಃ ಬರೆದು ಸಂಗೀತ ವಿನ್ಯಾಸವನ್ನು ಮಾಡಿ ಆಡಿಸಿದರು. ಮಾತ್ರವಲ್ಲದೆ ಕೂಪ ಮಂಡೂಕ, ಸೂತ್ರದ ಗೊಂಬೆ, ವಿದ್ಯಾಭ್ಯಾಸ, ನನೋ ನಕ್ಷತ್ರಿಕನೋ, ಇತ್ಯಾದಿ ನಾಟಕಗಳನ್ನು ಸ್ವತಃ ಬರೆದು ನಿರ್ದೇಶಿಸಿದ್ದರು. ಅವರ ನಾಟಕಗಳು ನೃತ್ಯಪ್ರಧಾನವಾಗಿದ್ದು ಪ್ರೇಕ್ಷಕರ ಗಮನ ಸೆಳೆದವು.

1970ರಲ್ಲಿ ಡಾ. ಬಿ ಆರ್ ಮಂಜುನಾಥ್ ಅವರ ಆಗಮನ ಅಸೋಸಿಯೇಶನ್‌ನ ರಂಗಚಟುವಟಿಕೆಗಳಿಗೆ ಹೊಸ ಆಯಾಮವನ್ನು ನೀಡಿತು. ಬಾಲ್ಯದಿಂದಲೇ ನಾಟಕಗಳಲ್ಲಿ ಭಾಗವಹಿಸುತ್ತಿದ್ದ ಇವರು ಮುಂಬಯಿಯ ಆಧುನಿಕ ರಂಗಭೂಮಿಗೆ ಪ್ರಯೋಗಶೀಲತೆಯ ಮೆರಗು ನೀಡಿದವರಲ್ಲಿ ಪ್ರಮುಖರು. ಪ್ರಾರಂಭದಲ್ಲಿ ಮೈಸೂರು ಅಸೋಸಿಯೇಶನ್‌ನಲ್ಲಿ ಕೈಲಾಸಂ, ಕಾರ್ನಾಡ್, ಲಂಕೇಶ್, ಬೇಂದ್ರೆ, ಶ್ರೀರಂಗ ಮುಂತಾದ ಆಧುನಿಕ ನಾಟಕಕಾರರ ನಾಟಕಗಳನ್ನು ನಿರ್ದೇಶಿಸಿದರು. ಪಾಶ್ಚಾತ್ಯ, ಹಿಂದಿ ಹಾಗೂ ಮರಾಠಿ ರಂಗಭೂಮಿಯ ಪ್ರಭಾವಗಳನ್ನು ಅರಗಿಸಿಕೊಂಡು ಆಧುನಿಕ ರಂಗಭೂಮಿಯ ಆಳ–ಅಗಲಗಳನ್ನು ಮೈಗೂಡಿಸಿಕೊಂಡ ಡಾ. ಮಂಜುನಾಥ ಅವರು ಅವುಗಳಿಂದ ಭಿನ್ನವಾದ ಸಾಹಿತ್ಯಿಕ ಗುಣಗಳನ್ನು ಒಳಗೊಂಡ ಕನ್ನಡಕ್ಕೆ ವಿಶಿಷ್ಟವಾದ ನಾಟಕಗಳನ್ನು ರಚಿಸಿ ನಿರ್ದೇಶಿಸಿದರು. ತ್ರಿವೇಣಿಯವರ ಅಪಸ್ವರ ಹಾಗೂ ಅಪಜಯ ಕಾದಂಬರಿಗಳನ್ನಾಧರಿಸಿ ಬರೆದ ಬಿಸಿಲ್ಗುದುರೆ(1979); ಜಾನಪದೀಯ ಶೈಲಿಯ ನಾಟಕ –ನಾ ದ್ಯಾವ್ರನ್ನೋಡ್ ಬ್ಯಾಕು(2003); ಮನೋರಂಜನೆಗಾಗಿಯೇ ಬರೆದ ಪತ್ತೇದಾರಿ ನಾಟಕ –ಬೋನು(1989); ಬೆಳ್ಳಿ ಬೈಲು(1980); ಮಾಸ್ತಿಯವರ ಚೆನ್ನಮ್ಮ ಕಥೆಯನ್ನಾಧರಿಸಿದ್ದರೂ ಸ್ವತಂತ್ರ ನಾಟಕದಂತೆ ಬರೆದ ಬೆಂದಕಾಳೂರು, ಬಿತ್ತಿ ಬೆಳೆದದ್ದು, ಹೂ ಗಿಡದಲ್ಲಿ ಹೂವರಳಿಹುದು, ಹೀರಾ, ರಂಗೋಲಿಯ ನ್ಯಾಯ, ಸಾಕಾರ ಮುಂತಾದ ಇವರ ನಾಟಕಗಳೆಲ್ಲವೂ ತಂತ್ರದ ದೃಷ್ಟಿಯಿಂದ ಭಿನ್ನವಾಗಿದ್ದು ಪ್ರಯೋಗಶೀಲತೆಯಿಂದಾಗಿ ಮೆಚ್ಚುಗೆಯನ್ನು ಗಳಿಸಿವೆ.

ಮೈಸೂರ್ ಅಸೋಸಿಯೇಶನ್ ಕಳೆದ 90 ವರ್ಷಗಳಲ್ಲಿ ಸುಮಾರು 135 ನಾಟಕಗಳನ್ನು ಆಡಿದೆ. ಇಂದಿಗೂ ಡಾ.ಮಂಜುನಾಥರ ನೇತೃತ್ವದಲ್ಲಿ ರಂಗಚಟುವಟಿಕೆಗಳು ನಡೆಯುತ್ತಿವೆ. ಕರ್ನಾಟಕದಿಂದ ಅನೇಕ ತಂಡಗಳನ್ನು ಮುಂಬಯಿಗೆ ತರಿಸಿ ನಾಟಕ ಪ್ರದರ್ಶನವನ್ನು ನಡೆಸಿ ರಂಗಪ್ರೇಮಿಗಳನ್ನು ರಂಜಿಸಿದೆ. 1976ರಲ್ಲಿ ಅಸೋಸಿಯೇಶನ್‌ನ ವಜ್ರಮಹೋತ್ಸವದ ಅಂಗವಾಗಿ ಅಂತರ್ ಕಾಲೇಜು ನಾಟಕ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಕೆಲವು ವರ್ಷ ನಡೆದ ಈ ಸ್ಪರ್ಧೆ ಕ್ರಮೇಣ ಕಾಲೇಜುಗಳಲ್ಲಿ ಕನ್ನಡ ವಿಭಾಗ ಮುಚ್ಚಲ್ಪಟ್ಟ ಕಾರಣ ನಿಂತು ಹೋಯಿತು. 1981ರಲ್ಲಿ 50 ವರ್ಷಗಳಲ್ಲಿ ಮುಂಬಯಿ ಕನ್ನಡ ರಂಗಭೂಮಿ ನಡೆದು ಬಂದ ದಾರಿಯನ್ನು ಛಾಯಾಚಿತ್ರದ ಮೂಲಕ ದಾಖಲಿಸುವ ಕಾರ್ಯವನ್ನು ಮಾಡಿದೆ.

1986ರಲ್ಲಿ ಶ್ರೀರಂಗರ ಹೆಸರಿನಲ್ಲಿ ಬಹುಭಾಷಾ ನಾಟಕೋತ್ಸವವನ್ನು ಪ್ರಾರಂಭಿಸಿದ್ದು ಇಂದಿನವರೆಗೂ ನಡೆದು ಬಂದಿದೆ. ಭಾರತೀಯ ರಂಗಭೂಮಿಯ ಹೆಸರಾಂತ ನಾಟಕಕಾರರಾದ ಗಿರೀಶ್ ಕಾರ್ನಾಡ್, ಚಂದ್ರಶೇಖರ ಕಂಬಾರ್, ಜಬ್ಬಾರ್ ಪಟೇಲ್, ಸತ್ಯದೇವ್ ದುಬೆ, ಎಂ.ಎಸ್. ಸತ್ಯು, ನಾದಿರಾ ಬಬ್ಬರ್, ರಮೇಶ್ ತಲ್ವಾರ್, ರಾಮು ರಾಮಚಂದ್ರನ್ ಮುಂತಾದವರು ಈ ವೇದಿಕೆಯಲ್ಲಿ ತಮ್ಮ ನಾಟಕಗಳ ಪ್ರದರ್ಶನ ನೀಡಿರುವರಲ್ಲದೆ ವಿಚಾರ ಸಂಕಿರಣಗಳಲ್ಲಿಯೂ ಭಾಗವಹಿಸಿರುವರು. ಅಸೋಸಿಯೇಶನ್‌ನ ಸುಸಜ್ಜಿತ ರಂಗಮಂದಿರದಲ್ಲಿ ಹಿಂದಿ ನಾಟಕಗಳ ಪ್ರಯೋಗ ನಿರಂತರವಾಗಿ ನಡೆಯುತ್ತಿದ್ದು ಕನ್ನಡಿಗರಿಗೆ ಹಿಂದಿ ನಾಟಕಗಳನ್ನು ನೋಡುವ ಅವಕಾಶವನ್ನು ಕಲ್ಪಿಸಿಕೊಡಲಾಗಿದೆ. ಮೈಸೂರು ಅಸೋಸಿಯೇಶನ್ ಕಳೆದೆರಡು ವರ್ಷಗಳಿಂದ ಸಂಗೀತ ಸ್ಪರ್ಧೆಯೊಂದಿಗೆ, ಕವನ, ಕಥಾ, ನಾಟಕ ರಚನೆ ಸ್ಪರ್ಧೆಗಳನ್ನು ಆಯೋಜಿಸುತ್ತಾ ಯುವ ಪ್ರತಿಭೆಗಳನ್ನು ಪ್ರೋತ್ಸಾಹಿಸುತ್ತಿದೆ.

ಮುಂಬಯಿನ ಗಿರಗಾಂವ ಪುಟ್ಟ ಕೊಠಡಿಯಲ್ಲಿ 1926ರಲ್ಲಿ ಉದಯವಾದ ಮೈಸೂರ್ ಅಸೋಸಿಯೇಶನ್ ಇಂದು ತನ್ನ ಸ್ವಂತ ಕಟ್ಟಡದಲ್ಲಿ ಗ್ರಂಥಾಲಯ, ಸುಸಜ್ಜಿತ ಸಭಾಗೃಹವನ್ನು ಹೊಂದಿದೆ. ನೇಸರು ಪತ್ರಿಕೆಯ ಪ್ರಕಟಣೆ, ಮುಂಬಯಿ ವಿ.ವಿ.ದ ಕನ್ನಡ ವಿಭಾಗದೊಡಗೂಡಿ ಬಂಗಾರ ಹಬ್ಬದ ದತ್ತಿನಿಧಿ ಉಪನ್ಯಾಸ ಮಾಲಿಕೆಯಡಿಯಲ್ಲಿ ನಾಡಿನ ಹೆಸರಾಂತ ಸಾಹಿತಿಗಳ ಉಪನ್ಯಾಸಗಳ ಪ್ರಾಯೋಜನೆ, ಮುಂಬಯಿಯ ಇತರ ಸಂಘ–ಸಂಸ್ಥೆಗಳೊಂದಿಗೆ ಕೂಡಿ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸಹಭಾಗಿತ್ವ, ರಾಷ್ಟ್ರೀಯ ಕನ್ನಡ ಶಿಕ್ಷಣಶಾಲೆಯ ಮೂಲಕ ಶೈಕ್ಷಣಿಕರಂಗದಲ್ಲಿಯೂ ಯೋಗದಾನ, ನಾಟಕೋತ್ಸವ, ಸಂಗೀತ–ನೃತ್ಯ ಕಾರ್ಯಕ್ರಮಗಳನ್ನು, ಚಲನಚಿತ್ರೋತ್ಸವಗಳನ್ನು ಆಯೋಜಿಸುತ್ತಾ ಕನ್ನಡಿಗರನ್ನು ಒಂದಾಗಿಸುವಲ್ಲಿ ಬಹುದೊಡ್ಡ ಪಾತ್ರ ವಹಿಸಿದೆ. ಕನ್ನಡ ಹಾಗೂ ಹಿಂದಿ, ಮರಾಠಿ, ಗುಜರಾತಿ ಭಾಷಿಕರ ನಡುವೆ ಸಾಂಸ್ಕೃತಿಕ ಸೇತುವಾಗಿ ಕಾರ್ಯ ನಿರ್ವಹಿಸುತ್ತಿದೆ. ಈ ಸಾಧನೆಯನ್ನು ಗುರುತಿಸಿ ಕರ್ನಾಟಕ ಸರಕಾರವು ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಕರ್ನಾಟಕದ ರಾಯಭಾರಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಮೈಸೂರ್ ಅಸೋಸಿಯೇಶನ್ ಮುಂಬಯಿ ಕನ್ನಡಿಗರ ಆಶೋತ್ತರಗಳನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಹತ್ತಾರು ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ಶತಮಾನೋತ್ಸವದತ್ತ ದಾಪುಗಾಲಿಡುತ್ತಿದೆ. ಮೈಸೂರ್ ಅಸೋಸಿಯೇಶನ್‌ಗೆ ಉಜ್ವಲ ಭವಿಷ್ಯಕ್ಕಾಗಿ ತುಂಬು ಹೃದಯದ ಹಾರೈಕೆಗಳು.

# ಬಾಟಿಕ್‌ಚಿತ್ರ ಕಲೆ



ಎಂ. ಎ. ಎನ್. ಪ್ರಸಾದ್




ಬಾಟಿಕ್‌ಚಿತ್ರ ಕಲೆ ಒಂದು ಪ್ರಾಚೀನ ಮತ್ತು ಸುಂದರವಾದ ಕಲೆ. ಇದರಲ್ಲಿ ಬಟ್ಟೆಯ ಮೇಲೆ ಬಣ್ಣದಿಂದ ವಿಧ ವಿಧವಾದ ಚಿತ್ರಗಳನ್ನು ಬಿಡಿಸುತ್ತಾರೆ. ಇದರಲ್ಲಿ ಕಲಾಕಾರನ ಸೃಜನಶೀಲತೆಗೆ ಬಹಳ ಅವಕಾಶವಿದೆ. ಈ ಕಲೆಯು ಹೇಗೆ ಎಲ್ಲಿಂದ ಹುಟ್ಟಿಕೊಂಡಿತು ಎಂಬುವುದರ ಬಗ್ಗೆ ಬೇರೆ ಬೇರೆ ಅಭಿಪ್ರಾಯಗಳಿವೆ. ಈ ಕಲೆಯು ಬೇರೆ ದೇಶಗಳಲ್ಲಿಯೂ ಪ್ರಚಲಿತವಿತ್ತು. ಆದರೆ ಈ ಕಲೆಯನ್ನು ಇಂಡೋನೇಶಿ೦ಯಾದ ಜಾವಾಪ್ರಾಂತದೊಡನೆ ಹೆಚ್ಚಾಗಿ ಗುರುತಿಸ ಲಾಗುತ್ತದೆ. ಯುನೆಸ್ಕೋ ಕೂಡ 2009 ರಲ್ಲಿ ಬಾಟಿಕ್ ಕಲೆಯನ್ನು ಜಾವಾಪ್ರಾಂತದ ಪಾರಂಪರಿಕ ಕಲೆ ಎಂದು ಮಾನ್ಯತೆ ನೀಡಿದೆ.

ಭಾರತದಲ್ಲಿ ಈ ಕಲೆಗೆ ಸುಮಾರು ಎರಡು ಸಾವಿರ ವರ್ಷಗಳ ಇತಿಹಾಸವಿದೆ. ಈ ಕಲೆಯು ಗುಜರಾತ್ ಪ್ರಾಂತದಖತ್ರಿ ಸಮುದಾಯದವರಿಗೆ ಬಂದ ಪಾರಂಪರಿಕ ಕಲೆ. ಕ್ರಮೇಣ ಇದು ಇತರ ಪ್ರದೇಶಗಳಿಗೂ ಹರಡಿತು. ಮಧ್ಯದಲ್ಲಿ ಕೆಲವುಕಾಲ ಈ ಕಲೆಯು ಅಷ್ಟು ಪ್ರಚಲಿತವಾಗಿರಲಿಲ್ಲ.

20ನೆಯ ಶತಮಾನದಲ್ಲಿ ಕಲ್ಕತ್ತಾದ ಶಾಂತಿನಿಕೇತನ್ ವಿಶ್ವವಿದ್ಯಾಲಯವು ಈ ಕಲೆಯನ್ನು ತನ್ನ ಪಠ್ಯಕ್ರಮದಲ್ಲಿ ಸೇರಿಸಿತು. ಇದಾದ ನಂತರ ಈ ಕಲೆಯು ಪುನಶ್ಚೇತನಗೊಂಡು ಮತ್ತೆ ಜನಪ್ರಿಯ ವಾಯಿತು.ಚೆನ್ನೈಯಲ್ಲಿರುವ ಚೋಳಮಂಡಲಂ ಕಲಾವಿದರ ಹಳ್ಳಿಯೂ ಈ ಕಲೆಯನ್ನು ಪುನಶ್ಚೇತನಗೊಳಿಸುವುದರಲ್ಲಿ ಮುಖ್ಯ ಪಾತ್ರ ವಹಿಸಿದೆ.



ಬಾಟಿಕ್ ಎಂಬ ಪದವೇ ಜಾವಾ ಭಾಷೆಯ 'ಅಂಬಾ + ಟಿಕ್' ಎಂಬ ಮೂಲ ದಿಂದ ಬಂದಿದೆ. 'ಅಂಬಾ + ಟಿಕ್' ಎಂದರೆ ಬಟ್ಟೆಯ ಮೇಲೆ ಚಿಕ್ಕಿಗಳಿಂದ ಬರೆದಿರುವುದು ಎಂದು ಅರ್ಥ. ಈ ಕಲೆಯಲ್ಲಿ ಮುಖ್ಯವಾಗಿ ಬಟ್ಟೆಗೆ ಮೇಣ, ಮೊಂಬತ್ತಿ, ಕೆಲವು ಸಸ್ಯದರಸ, ಇತ್ಯಾದಿ ಬಣ್ಣವನ್ನು ತಡೆಗಟ್ಟುವ ವಸ್ತುಗಳನ್ನು ಉಪ೦ಯೋಗಿಸಿ, ಬೇಕಾದ 'ಡೆ ಬಣ್ಣವನ್ನು ಕಟ್ಟುತ್ತಾರೆ, ನಂತರ ಆ ಬಣ್ಣವನ್ನು ತಡೆಗಟ್ಟಲು ಉಪ೦ಯೋಗಿಸಿರುವ ಮೇಣ, ಮೊಂಬತ್ತಿ ಇತ್ಯಾದಿಯನ್ನು ಕೆರೆದು ಅಥವಾ ನೀರಿನಲ್ಲಿ ಕುದಿಸುವ ಮೂಲಕ ತೆಗೆಯುತ್ತಾರೆ. ಈ ರೀತಿ ಮತ್ತೆ ಮತ್ತೆ ಬೇರೆ ಬೇರೆ ಬಣ್ಣಗಳಿಂದ ರಂಗು ಮಾಡುವುದರಿಂದ, ವಿವಿಧ ಬಣ್ಣಗಳಿಂದ ಕೂಡಿದ ಸುಂದರ ಚಿತ್ರವನ್ನು ಬಟ್ಟೆಯ ಮೇಲೆ ಕಲಾಕಾರನು ಸೃಷ್ಟಿಸುತ್ತಾನೆ. ಇದರಲ್ಲಿ ಸ್ವಾಭಾವಿಕವಾಗಿ ಸಿಗುವ ಬಣ್ಣಗಳನ್ನು ಉಪ೦ಯೋಗಿಸುವುದರಿಂದ ಈ ರೀತಿ ತ೦ಯಾರಿಸಿದ ಚಿತ್ರವು ಮಾಸದೆ, ಉಜ್ವಲವಾಗಿ ಉಳಿಯುತ್ತದೆ.



## ಬಾಟಿಕ್ ಚಿತ್ರವನ್ನು ತಯಾರಿಸುವ ವಿಧಾನ

ಮೊದಲಿಗೆ ಬಟ್ಟೆಯನ್ನು ನೀರಿನಲ್ಲಿ ನೆನೆಸಿ, ಚೆನ್ನಾಗಿ ಬಡಿದುಒಗೆದು ಒಣಗಿಸುತ್ತಾರೆ. ನಂತರಅದನ್ನುಒಂದು ಹಲಗೆಯ ಮೇಲೆ ಸುಕ್ಕಿಲ್ಲದಂತೆ ಎಳೆದು ಸಿಕ್ಕಿಸುತ್ತಾರೆ. ಈಗ ಅದರ ಮೇಲೆ ಸೀಸದ ಕಡ್ಡಿಯನ್ನು ಉಪ೦ಯೋಗಿಸಿ ಚಿತ್ರವನ್ನು ಬಿಡಿಸುತ್ತಾರೆ. ನಂತರ ಮೊಂಬತ್ತಿ, ಜೇನು ಮೇಣ, ಕೆಲವು ಗಿಡದರಸ, ಇತ್ಯಾದಿ ಬಣ್ಣವನ್ನು ತಡೆಗಟ್ಟುವ ವಸ್ತುಗಳನ್ನು ಉಪ೦ಯೋಗಿಸಿ ಎಲ್ಲಿ ಬಣ್ಣವು ಬೇಡವೋ ಆ ಸ್ಥಳಗಳನ್ನು ಮುಚ್ಚುತ್ತಾರೆ. ಮೇಣ ವನ್ನು ಹಚ್ಚಲು ಲೇಖಣಿಯಂತಹ ಒಂದು ಸಾಧನ, ಕುಂಚ ಅಥವಾ ಚೆಲ್ಲುವುದು ಇತ್ಯಾದಿ ವಿಧಗಳನ್ನು ಉಪ೦ಯೋಗಿಸುತ್ತರೆ.

ಈ ರೀತಿ ತಯರಾದ ಬಟ್ಟೆಯನ್ನು ಬಣ್ಣದಲ್ಲಿ ಅದ್ದುತ್ತಾರೆ. ಬಣ್ಣವು ಎಲ್ಲೆಲ್ಲಿ ಮೇಣವು ತಡೆಗಟ್ಟುವು ದಿಲ್ಲವೋ ಅಲ್ಲೆಲ್ಲಾ ಹರಡುತ್ತದೆ. ನಂತರ ಬಟ್ಟೆಯನ್ನು ಬಿಸಿ ನೀರಿನಲ್ಲಿ ಕುದಿಸಿ, ಮೇಣವನ್ನು ಕರಗಿಸಿ ತೆಗೆಯುತ್ತಾರೆ. ಈ ರೀತಿ ಪ್ರತಿ೦ಯೊಂದು ಬಣ್ಣಕ್ಕೂ, ಬೇಕಾದ ಸ್ಥಳವನ್ನು ಬಿಟ್ಟು, ಬೇಡದಿರುವ ಸ್ಥಳಗಳನ್ನು ಮುಚ್ಚಿ, ಬಣ್ಣವನ್ನು ಕಟ್ಟಬೇಕು.

ಇದೊಂದು ಬಹಳ ಸಮಯ ಹಿಡಿಯುವ ಮತ್ತು ಶ್ರಮದಿಂದ ಕೂಡಿದ ಕಲೆ.

ಪಾರಂಪರಿಕವಾಗಿ ಈ ಕಲೆಯು ಕೆಲವು ವಸ್ತುಗಳಿಗೇ ಸೀಮಿತವಾಗಿದ್ದರೂ, ಇಂದು ಈ ಕಲೆಯ ಬಳಕೆ ವಿಸ್ತಾರಗೊಂಡಿದೆ. ಉಡುಪು ಮತ್ತು ವಸ್ತ್ರ ವಿನ್ಯಾಸದಲ್ಲಿ ಈ ಕಲೆಯು ಹೆಚ್ಚು ಉಪಯೋಗಿಸಲಾಗುತ್ತಿದೆ. ಬಾಟಿಕ್‌ಕಲೆಯಿಂದ ತಯಾರಿಸಲ್ಪಟ್ಟ ಪ್ರತಿ೦ಯೊಂದು ಕೃತಿಯೂ ಮತ್ತುಬಟ್ಟೆಯೂ ಒಂದು ಅನನ್ಯ ಮತ್ತು ಅಪ್ರತಿಮ ಕಲಾ ಕೃತಿ.

Date of Publication : 5th of every month RNI No. 040015 / 83
Regd. No. MNE / 93 / 2018 - 20 Date of Posting:5/ 6th of every month
at Mumbai Patrika Channel Sorting Office G.P.O.

# "ನೇಸರು" ಜಾಗತಿಕ ಕನ್ನಡ 'ಕವನ ಸ್ಪರ್ಧೆ'–2018

ಮುಂಬಯಿ ಮೈಸೂರು ಅಸೋಸಿಯೇಷನ್ ಈ ವರ್ಷದ "ನೇಸರು" ಜಾಗತಿಕ ಕನ್ನಡ 'ಕವನ ಸ್ಪರ್ಧೆ'–2018 ಆಯೋಜಿಸಲಾಗಿದೆ. ಈ ಸ್ಪರ್ಧೆಯಲ್ಲಿ ಇಡೀ ವಿಶ್ವದಾದ್ಯಂತ ಇರುವ ಎಲ್ಲ ಕನ್ನಡಿಗರು ಇದರಲ್ಲಿ ಭಾಗವಹಿಸಬಹುದಾಗಿದೆ. ಆಸಕ್ತರು ಯಾವುದೇ ವಿಷಯದ ಕುರಿತಂತೆ ಕವಿತೆಗಳನ್ನು ರಚಿಸಬಹುದಾಗಿದೆ. ಇಲ್ಲಿ ಯಾವುದೇ ಪ್ರವೇಶ ಶುಲ್ಕವಿರುವುದಿಲ್ಲ.

**ಪ್ರಥಮ ಬಹುಮಾನ : ರೂ. 10,000/–**

**ದ್ವಿತೀಯ ಬಹುಮಾನ : ರೂ. 5,000/–**

**ತೃತೀಯ ಬಹುಮಾನ : ರೂ. 3,000/–**

**ಪ್ರೋತ್ಸಾಹಕ ಬಹುಮಾನ : ರೂ. 1,000/– (ಇಬ್ಬರಿಗೆ)**

**ಸ್ಪರ್ಧೆಯ ನಿಯಮಾವಳಿಗಳು:**

1) ಕವನಗಳು ಸ್ವರಚಿತವಾಗಿರಬೇಕು. ಅನುವಾದ, ಅನುಕರಣೆ ಆಗಿರಕೂಡದು.
2) ಕವನಗಳು ಸುಮಾರು 30 ಸಾಲಿನ ಮಿತಿಯಲ್ಲಿರಲಿ. ಕಾಗದದ ಒಂದೇ ಮಗ್ಗುಲಲ್ಲಿ ಚಿತ್ತಿಲ್ಲದಂತೆ ಸ್ಫುಟವಾಗಿ ಬರೆದು ಕಳುಹಿಸಿ. (ಹಸ್ತ ಲಿಖಿತ ಯಾ ಕಂಪ್ಯೂಟರ್ ಮುದ್ರಿತ). ಇಮೈಲ್: kavana.nesaru@gmail.com ಮೂಲಕವೂ ಕಳುಹಿಸಬಹುದು.
3) ಲೇಖಕರ ಹೆಸರು, ವಿಳಾಸ, ಮೊಬೈಲ್ ಸಂಖ್ಯೆ ಹಾಗೂ ಇಮೈಲ್ ಪ್ರತ್ಯೇಕ ಕಾಗದದಲ್ಲಿ ಬರೆದು ಕಳುಹಿಸಿ.
4) ಒಬ್ಬರು ಒಂದೇ ಕವನವನ್ನು ಬರೆದು ಕಳುಹಿಸಬೇಕು.
5) ಸ್ಪರ್ಧೆಗೆ ಬಂದ ಕವನಗಳನ್ನು ಮರಳಿಸಲಾಗುವುದಿಲ್ಲ.
6) ತೀರ್ಪುಗಾರರ ತೀರ್ಮಾನವೇ ಅಂತಿಮ.
7) ಕವನಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ 30.04.2018
8) ತೀರ್ಪುಗಾರರ ತೀರ್ಮಾನವನ್ನು 15.06.2018ರ ನಂತರ ಜಾಹೀರುಗೊಳಿಸಲಾಗುವುದು.

ಆಯ್ಕೆಯಾದ ಕವನಗಳ ಫಲಿತಾಂಶವನ್ನು ಮೈಸೂರು ಅಸೋಸಿಯೇಷನ್‌ನ ಮಾಸಿಕ "ನೇಸರು" ಪತ್ರಿಕೆಯಲ್ಲಿ, ಅಂತರ್ಜಾಲ www.mysoreassociation.in ಹಾಗೂ ಫೇಸ್ಬುಕ್ ಫೇಜ್ 'ಮೈಸೂರು ಅಸೋಸಿಯೇಷನ್ ಮುಂಬೈ'ಯಲ್ಲಿ ಪ್ರಕಟಿಸಲಾಗುವುದು.

Postal Address:

The Mysore Association, Mumbai, 393, Bhau Daji Road, Matunga (E), Mumbai – 400019. Tel: 022- 2402 4647, 2403 7065.

## ಮುಂಬರುವ ಕಾರ್ಯಕ್ರಮಗಳು :–

ತಾ. 25–03–2018 ರವಿವಾರ
ಬೆಳಗ್ಗೆ 10–00 ಕ್ಕೆ
**'ರಾಮ ನವಮಿ' ಪೂಜೆ**
ಹಾಗೂ ಪ್ರಸಾದ ವಿನಿಯೋಗ.

ಬುಧವಾರ, ಎಪ್ರಿಲ್ 18, 2018
ಸಂಜೆ 5.30 ಕ್ಕೆ
**"ಅಕ್ಷಯ ತೃತೀಯ" ಪೂಜೆ**
ಹಾಗೂ ಪ್ರಸಾದ ವಿನಿಯೋಗ.

Edited, Printed & Published by Mrs. Girija Shastry, On behalf of the Mysore Association, Mumbai. Tel.: 2402 4647, 2401 0574
Email : mysoreassociation.mumbai@gmail.com
Printed at Aarati Art Printers, Fort, Mumbai - 400 001. * 2266 3361 / 2266 5938